ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 31 ಶನಿವಾರ 2024

₹4

ಸಂಪುಟ: 45 | ಸಂಚಿಕೆ: 136 | ಪುಟಗಳು: 12

45

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

ನೀಟ್, ಸಿಇಟಿ ಮೊದಲ ಸುತ್ತಿನ ಅಂತಿಮ ಸೀಟು ಹಂಚಿಕೆ ಫಲಿತಾಂಶ ಪ್ರಕಟ: ಆ.31ರಿಂದ 'ಚಾಯ್ಸ್' ಆಯ್ಕೆ!

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಯುಜಿ ನೀಟ್–24 ಮತ್ತು ಯುಜಿ ಸಿಇಟಿ–24 ಅಭ್ಯರ್ಥಿಗಳಿಗೆ ಮೊದಲ ಸುತ್ತಿನ ಸೀಟು ಹಂಚಿಕೆಯ ಅಂತಿಮ ಫಲಿತಾಂಶವನ್ನು ಶುಕ್ರವಾರ ಪ್ರಕಟಿಸಿದೆ. ಉದ್ದೇಶಿತ ಪ್ರಕಟಣೆಗೂ ಎರಡು ದಿನ ಮೊದಲೇ ಫಲಿತಾಂಶ ಪ್ರಕಟಿಸಿದೆ. ಇದರೊಂದಿಗೆ, ಅಭ್ಯರ್ಥಿಗಳಿಗೆ 'ಚಾಯ್ಸ್' ಆಯ್ಕೆ ಪ್ರಕ್ರಿಯೆ ಆಗಸ್ಟ್ 31 ರಿಂದ (ಶನಿವಾರ) ಆರಂಭವಾಗಲಿದೆ. ವೈದ್ಯಕೀಯ, ದಂತ ವೈದ್ಯಕೀಯ, ಆಯುಷ್, ಎಂಜಿನಿಯರಿಂಗ್, ಆರ್ಕಿಟೆಕ್ಚರ್, ಕೃಷಿ ವಿಜ್ಞಾನ, ವೆಟರಿನರಿ, ಬಿ–ಫಾರ್ಮ, ಬಿಎಸ್ಸಿ (ನರ್ಸಿಂಗ್), ಯೋಗ ಮತ್ತು ನ್ಯಾಚುರೋಪತಿ ಮುಂತಾದ ಕೋರ್ಸ್‌ಗಳ ಅಭ್ಯರ್ಥಿಗಳಿಗೆ ಇದು ಅನ್ವಯವಾಗುತ್ತದೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ಶುಕ್ರವಾರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಪೋಷಕರ ಜೊತೆ ಚರ್ಚಿಸಿ ಸೂಕ್ತ ವಿಷಯವನ್ನು ಆಯ್ಕೆ ಮಾಡಿಕೊಳ್ಳಲು ಆಗಸ್ಟ್ 31ರ ಬೆಳಿಗ್ಗೆ 11 ರಿಂದ ಸೆಪ್ಟೆಂಬರ್ 3ರವರೆಗೆ (ರಾತ್ರಿ 11.59) ಅವಕಾಶವಿರುತ್ತದೆ. ಅಭ್ಯರ್ಥಿಗಳು ನಾಲ್ಕು ಚಾಯ್ಸ್‌ಗಳಲ್ಲಿ ತಮಗೆ ಸರಿ ಎನಿಸುವ ಯಾವುದಾದರೂ ಒಂದು ಚಾಯ್ಸ್ ಆಯ್ಕೆ ಮಾಡುವ ಮೊದಲು, ಅದಕ್ಕೆ ಸಂಬಂಧಿಸಿದ ವಿವರಣೆ ಓದಿ ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು ಎಂದು ಸೂಚಿಸಲಾಗಿದೆ. ಚಾಯ್ಸ್ 1 ಮತ್ತು ಚಾಯ್ಸ್ 2 ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳು ಆಗಸ್ಟ್ 31ರ ಮಧ್ಯಾಹ್ನ 1ರಿಂದ ಸೆಪ್ಟೆಂಬರ್ 4ರ ಸಂಜೆ 4ರ ಒಳಗೆ ಶುಲ್ಕ ಪಾವತಿಸಬೇಕು.

ಚರ್ಚೆಯೇ ಆಗದೇ ಸಿಎಂ ಪತ್ನಿಗೆ ಸೈಟ್ ಹಂಚಿಕೆ

ಬಿಜೆಪಿ ಎಂಎಲ್‌ಸಿ ರವಿಕುಮಾರ್ ಆರೋಪ, 2020ರ ಮುಡಾ ಸಭೆ ನಡಾವಳಿ, ಆಡಿಯೋ ಬಿಡುಗಡೆ



ರವಿಕುಮಾರ್

ಬೆಂಗಳೂರು, ಆ.30– 2020ರ ಮುಡಾ ಸಭೆಯಲ್ಲಿ ಸಿದ್ದರಾಮಯ್ಯ ಅವರ ಪತ್ನಿಗೆ ಸೈಟ್ ನೀಡುವ ಬಗ್ಗೆ ನಿರ್ಣಯ ಆಗಿದೆ ಎನ್ನುತ್ತಿದ್ದಾರೆ. ಆದರೆ, ಅಂದಿನ ಸಭೆಯಲ್ಲಿ ಆ ಬಗ್ಗೆ ಚರ್ಚೆಯೇ ಆಗಿಲ್ಲ ಎಂದು ಆರೋಪಿಸಿ, 2020ರ ಮುಡಾ ಸಭೆಯಲ್ಲಿನ ನಡಾವಳಿಗಳು ಮತ್ತು ಆಡಿಯೋ ದಾಖಲೆಯನ್ನು ಬಿಜೆಪಿ ಎಂಎಲ್‌ಸಿ ರವಿಕುಮಾರ್ ಬಿಡುಗಡೆ ಮಾಡಿದರು.

ಮಲ್ಲೇಶ್ವರಂನಲ್ಲಿರುವ ರಾಜ್ಯ ಬಿಜೆಪಿ ಕಚೇರಿ ಜಗನ್ನಾಥ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, 2020ರಲ್ಲಿ ಮುಡಾ ಸಭೆಯಲ್ಲಿನ ನಡಾವಳಿ ಮತ್ತು ಆಡಿಯೋ ದಾಖಲೆಯನ್ನು ಬಿಡುಗಡೆ ಮಾಡಿ, ಮಾತನಾಡಿದರು.

ಪರಿಹಾರ ಪೂರ್ಣ ನೀಡದೇ, ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳದೇ ಜಮೀನು ಉಪಯೋಗಿಸಿದ ಪ್ರಕರಣಗಳಲ್ಲಿ 50:50 ಅನುಪಾತದಲ್ಲಿ ನೀಡುವ ಮುಡಾ ನಿರ್ಣಯವನ್ನು 2023ರಲ್ಲಿ ರದ್ದು ಮಾಡಲಾಗಿದೆ. ಆದರೂ ಸಿದ್ದರಾಮಯ್ಯ 2023ರಲ್ಲಿ ಬಿಜೆಪಿ ಸರ್ಕಾರದ ಅವಧಿಯಲ್ಲಿ 14 ಸೈಟ್ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಯಾವುದೇ ನಿರ್ಣಯ ಆಗದಿದ್ದರೂ ನಿರ್ಣಯ ಆಗಿದೆ ಎಂದು ಹೇಳಲಾಗಿದೆ. 2020ರಲ್ಲಿ ನಡೆದ ಸಭೆಯಲ್ಲಿ ಸಿಎಂ ಪತ್ನಿಯ ಸೈಟ್ ವಿಚಾರವೇ ಪ್ರಸ್ತಾಪ ಆಗಿಲ್ಲ. ಈ ಕುರಿತಾಗಿ ಅಂದಿನ ಸಭೆಯ ನಡಾವಳಿಗಳು ಮತ್ತು ಆಡಿಯೋ ದಾಖಲೆ ಬಿಡುಗಡೆ ಮಾಡಿದ್ದೇವೆ. ಪ್ರಾಧಿಕಾರದ ಸಭೆಯಲ್ಲಿ ನಿರ್ಣಯ ಆಗದೇ ಇದ್ದರೂ ನಂತರ ಆಯುಕ್ತರಾಗಿದ್ದ ನಟೇಶ್ ಮತ್ತು ಅಧ್ಯಕ್ಷ ಹೆಚ್.ವಿ.ರಾಜೀವ್ ನಿರ್ಣಯ ಆಗಿದೆ ಎಂದು ನಡಾವಳಿಯಲ್ಲಿ ಸಹಿ ಮಾಡಿದ್ದಾರೆ. ರಾಜೀವ್ ಮತ್ತು ನಟೇಶ್ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು ಎಂದು ಆಗ್ರಹಿಸಿದರು.

ಸರ್ಕಾರದ ಅನುಮತಿ ದೊರೆತಿರಲಿಲ್ಲ: ಪ್ರಾಧಿಕಾರಗಳ ಬಡಾವಣೆಗಳಿಗೆ 2009ರಲ್ಲಿ 60–40 ಸೈಟ್ ಹಂಚಿಕೆ ನೀತಿ ಇತ್ತು. ಆಗ ರೈತರು ಜಮೀನು ಕೊಡಲು ಮುಂದೆ ಬರಲಿಲ್ಲ. 2015ರಲ್ಲಿ 50:50 ಅನುಪಾತ ತರಲಾಯಿತು. ಆದರೆ 50:50 ಅನುಪಾತದ ಯೋಜನೆಗೆ ಸರ್ಕಾರದ ಅನುಮತಿ ದೊರೆತಿರಲಿಲ್ಲ. ನಂತರ 2020ರಲ್ಲಿ ಈ ಅನುಪಾತವನ್ನು ರದ್ದು ಮಾಡಲಾಗಿತ್ತು. ಆದರೆ, 2023ರಲ್ಲಿ ಬಿಜೆಪಿ ಸರ್ಕಾರದ ಅವಧಿಯಲ್ಲಿ 14 ಸೈಟ್ ಕೊಟ್ಟಿದ್ದಾರೆ ಎಂದು ಸಿಎಂ ಹೇಳಿದ್ದಾರೆ. ಆಗ 50:50 ಅನುಪಾತ ಜಾರಿಯಲ್ಲಿಯೇ ಇರಲಿಲ್ಲ. 2020ರಲ್ಲಿಯೇ ರದ್ದಾಗಿತ್ತು. ಮುಡಾದಲ್ಲಿ ನಿರ್ಣಯವೇ ಆಗದೇ ಅಧಿಕಾರಿಗಳು ಸುಳ್ಳು ಹೇಳಿದ್ದಾರೆ. ಈ ನಕಲಿ ನಿರ್ಣಯದ ಮೇಲೆ ಸೈಟ್‌ಗಳನ್ನು ಹಂಚಿಕೆ ಮಾಡಲಾಗಿದೆ ಎಂದರು.

ಫೇಕ್ ರೆಸಲ್ಯೂಷನ್: ಬೋರ್ಡ್ ಮೀಟಿಂಗ್‌ನಲ್ಲಿ 50:50 ಅನುಪಾತ ಎಂದು ನಕಲಿ ನಿರ್ಣಯ ಕೈಗೊಳ್ಳಲಾಗಿದೆ. ಬೊಮ್ಮಾಯಿ ಸರ್ಕಾರದ ಅವಧಿಯಲ್ಲಿ ಮುಡಾ ಅಕ್ರಮಗಳ ಬಗ್ಗೆ ತನಿಖೆಗೆ ತಾಂತ್ರಿಕ ಸಮಿತಿ ರಚಿಸಲಾಗಿತ್ತು. ಮುಡಾದಲ್ಲಿ ಏನೇನು ಅಕ್ರಮಗಳಾಗಿವೆ ಎಂದು ಆ ವರದಿಯಲ್ಲಿದೆ. ಆ ವರದಿಯೂ ಈಗ ಸರ್ಕಾರದ ಬಳಿ ಇದೆ. ಸರ್ಕಾರ ವರದಿಯನ್ನು ಬಹಿರಂಗಪಡಿಸಲಿ. ಸೈಟ್‌ಗಿಂತ ಸಂವಿಧಾನ ದೊಡ್ಡದು. 2ನೇ ಅಂಬೇಡ್ಕರ್ ಎಂದು ಕರೆಸಿಕೊಳ್ಳುವ ಸಿದ್ದರಾಮಯ್ಯ ಸೈಟ್ ವಾಪಸ್ ಕೊಡುತ್ತಾರಾ. ಸಿದ್ದರಾಮಯ್ಯ ತನಿಖೆಗಿಂತ ಅತೀತರಾ. ಕರ್ನಾಟಕದಲ್ಲಿ ನಿಮಗಿಂತಹ ಪ್ರಾಮಾಣಿಕರು ಯಾರೂ ಇಲ್ವಾ. ಮುಡಾ ಪ್ರಕರಣ ಸಿಬಿಐಗೆ ಕೊಡಬೇಕು. ಸಿದ್ದರಾಮಯ್ಯ ರಾಜೀನಾಮೆ ಕೊಡಬೇಕು. ಸಿದ್ದರಾಮಯ್ಯ ನಿಜವಾದ ಅವತಾರ ಈಗ ಗೊತ್ತಾಗುತ್ತಿದೆ ಎಂದು ವಾಗ್ದಾಳಿ ನಡೆಸಿದರು.

ಮುಡಾ ಮಾಜಿ ಆಯುಕ್ತ ದಿನೇಶ್ ಕುಮಾರ್‌ಗೆ ಹಾವೇರಿ ವಿವಿ ರಿಜಿಸ್ಟ್ರಾರ್ ಆಗಿ ನೇಮಕ ಕುರಿತು ಮಾತನಾಡಿ, ಸರ್ಕಾರದಲ್ಲಿ ಅಕ್ರಮ ಮಾಡಿದವರನ್ನು ಸಸ್ಪೆಂಡ್ ಮಾಡುವುದು ಬಿಟ್ಟು ಬಳುವಳಿ ಕೊಟ್ಟಿದ್ದಾರಾ. ಹಾಗಾದರೆ ಸರ್ಕಾರದಲ್ಲಿ ಏನು ನಡೆಯುತ್ತಿದೆ. ಈ ಸರ್ಕಾರವನ್ನು ವಜಾ ಮಾಡುವುದೇ ಲೇಸು. ಸರ್ಕಾರ ಹೇಗೆ ಅವರನ್ನು ಕುಲಸಚಿವರನ್ನಾಗಿ ಮಾಡಿತು. ರಾಜ್ಯಪಾಲರು ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಅಕ್ರಮ ಮಾಡಿದವರನ್ನು ನೇಮಕ ಮಾಡಿದರೆ ವಿವಿ ಪರಿಸ್ಥಿತಿ ಏನಾಗಬಹುದು. ಕೂಡಲೇ ರಾಜ್ಯಪಾಲರು ಮಧ್ಯಪ್ರವೇಶ ಮಾಡಬೇಕು ಎಂದು ಅವರು ಒತ್ತಾಯಿಸಿದರು.

ಮೂವರು ದರ್ಶನ್ ಸಹಚರರು ಮೈಸೂರು ಜೈಲಿಗೆ ಶಿಫ್ಟ್



ಸಿಎಆರ್ ವ್ಯಾನಿನಲ್ಲಿ ನಟ ದರ್ಶನ್ ಸಹಚರರನ್ನು ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಿಂದ ಶುಕ್ರವಾರ ಮೈಸೂರು ಕೇಂದ್ರ ಕಾರಾಗೃಹಕ್ಕೆ ಕರೆತರಲಾಯಿತು.

ಮೈಸೂರು, ಆ. 30(ಆರ್‌ಕೆ)– ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಿಂದ ನಟ ದರ್ಶನ್‌ನನ್ನು ಬಳ್ಳಾರಿ ಜೈಲಿಗೆ ಸ್ಥಳಾಂತರಿಸಿದ ಮರುದಿನವೇ ಇಂದು ಆತನ ಮೂವರು ಸಹಚರರನ್ನು ಮೈಸೂರಿನ ಕೇಂದ್ರ ಕಾರಾ ಗೃಹಕ್ಕೆ ಕರೆತರಲಾಯಿತು.

ಚಿತ್ರದುರ್ಗದ ರೇಣುಕಾಸ್ವಾಮಿ ಬರ್ಬರ ಹತ್ಯೆ ಪ್ರಕರಣದಲ್ಲಿ ಬಂಧಿತರಾಗಿ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ನಟ ದರ್ಶನ್ ಸೇರಿ 17 ಆರೋಪಿಗಳ ಪೈಕಿ ಪವನ್, ರಾಘವೇಂದ್ರ ಹಾಗೂ ನಂದೀಶನನ್ನು ಬಿಗಿ ಪೊಲೀಸ್ ಭದ್ರತೆಯೊಂದಿಗೆ ಸಿಎಆರ್ ವಾಹನದಲ್ಲಿ ಮೈಸೂರಿನ ಫೌಂಟೇನ್ ಸರ್ಕಲ್ ಬಳಿ ಅಶೋಕ ರಸ್ತೆಯಲ್ಲಿರುವ ಸೆಂಟ್ರಲ್ ಜೈಲ್‌ಗೆ ಸ್ಥಳಾಂತರಿಸಲಾಯಿತು.

ಕೋರ್ಟ್ ಆದೇಶದ ಪ್ರತಿಯನ್ನು ಮುಖ್ಯ ಜೈಲು ಅಧೀಕ್ಷಕರಿಗೆ ಹಸ್ತಾಂತರಿಸುವ ಮೂಲಕ ಬೆಂಗಳೂರಿನಿಂದ ಕರೆತಂದಿದ್ದ ಮೂವರು ಕೊಲೆ ಆರೋಪಿಗಳನ್ನು ಮೈಸೂರು ಜೈಲಿಗೆ ಒಪ್ಪಿಸಲಾಯಿತು. ಈ ವೇಳೆ ಎನ್‌ಆರ್ ಉಪ ವಿಭಾಗದ ಎಸಿಪಿ ಸಿ.ಕೆ ಅಶ್ವಥನಾರಾಯಣ, ಮಂಡಿ ಠಾಣೆ ಇನ್ಸ್‌ಪೆಕ್ಟರ್ ನಾಗೇಶ್, ಎನ್‌ಆರ್ ಠಾಣೆ ಇನ್ಸ್‌ಪೆಕ್ಟರ್ ಲಕ್ಷ್ಮೀಕಾಂತ ತಳವಾರ ಸೇರಿದಂತೆ ಹೆಚ್ಚುವರಿ ಪೊಲೀಸರನ್ನು ಜೈಲು ಬಳಿ ಬಂದೋಬಸ್ತ್‌ಗಾಗಿ ನಿಯೋಜಿಸಲಾಗಿತ್ತು.

ಪರಪ್ಪನ ಅಗ್ರಹಾರ ಜೈಲಿನಲ್ಲಿ ರೌಡಿ ಶೀಟರ್‌ಗಳೊಂದಿಗೆ ಕುಳಿತು ಹರಟುತ್ತಿರುವ ಫೋಟೋ ವೈರಲ್ ಆದ ಹಿನ್ನೆಲೆಯಲ್ಲಿ ಬೆಂಗಳೂರು ಪೊಲೀಸರು 24ನೇ ಎಸಿಎಂಎಂ ನ್ಯಾಯಾಲಯವನ್ನು ಕೋರಿಕೊಂಡ ಕಾರಣ ದರ್ಶನ್ ಸೇರಿ 10 ಮಂದಿ ಆರೋಪಿಗಳನ್ನು ರಾಜ್ಯದ ಬೇರೆ ಬೇರೆ ಜೈಲುಗಳಿಗೆ ಸ್ಥಳಾಂತರಿಸಲು ಕೋರ್ಟ್ ಅನುಮತಿ ನೀಡಿತ್ತು.

ವಿಶ್ವವಿದ್ಯಾಲಯಗಳಲ್ಲಿ ಪಾಠ ಮಾಡದ ಎಷ್ಟೋ ಪ್ರಾಧ್ಯಾಪಕರಿದ್ದಾರೆ

ಶಿಕ್ಷಣ ತಜ್ಞರ ಜಾಗವನ್ನು ಶಿಕ್ಷಣೋದ್ಯಮಿಗಳು ಆವರಿಸಿಕೊಳ್ಳುತ್ತಿದ್ದಾರೆ

ನಾಡೋಜ ಬರಗೂರು ರಾಮಚಂದ್ರಪ್ಪ ವಿಷಾದ



ಮೈಸೂರಿನ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಶುಕ್ರವಾರ ಸಹಾಯಕ ಪ್ರಾಧ್ಯಾಪಕ ಡಾ.ಪಿ.ವಿ.ನಾಗರಾಜ್ ರಚಿತ ಗುರುವೆ ನಿಮಗೆ ಶರಣು ಮತ್ತು 'ಹಚ್ಚೇವು ಕನ್ನಡದ ದೀಪ' ಪುಸ್ತಕವನ್ನು ಖ್ಯಾತ ಸಾಹಿತಿ ನಾಡೋಜ ಬರಗೂರು ರಾಮಚಂದ್ರಪ್ಪ ಬಿಡುಗಡೆ ಮಾಡಿದರು.

ಮೈಸೂರು, ಆ.30(ಬಿಎಲ್‌ಯು)– ಶಿಕ್ಷಣ ತಜ್ಞರ ಜಾಗವನ್ನು ಈಗ ಶಿಕ್ಷಣೋದ್ಯಮಿಗಳು ಆವರಿಸಿಕೊಂಡಿದ್ದಾರೆ ಎಂದು ಖ್ಯಾತ ಸಾಹಿತಿ ನಾಡೋಜ ಬರಗೂರು ರಾಮಚಂದ್ರಪ್ಪ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಇಂದು ಡಾ.ಪಿ.ವಿ.ನಾಗರಾಜ್ ರಚಿತ 'ಗುರುವೆ ನಿಮಗೆ ಶರಣು' ಮತ್ತು 'ಹಚ್ಚೇವು ಕನ್ನಡದ ದೀಪ' ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅವರು, ಶಿಕ್ಷಣ ಈಗ ಸೇವೆ ಬದಲು ಉದ್ಯಮವಾಗಿ ಪರಿವರ್ತನೆಗೊಂಡಿದೆ ಎಂದು ಹೇಳಿದರು. ಶಿಕ್ಷಣ ಉದ್ಯಮಮುಖಿಯಾಗಿದೆ. ಈ ನಿಟ್ಟಿನಲ್ಲಿ ಯಾವುದು ಜ್ಞಾನಮುಖಿ ಯಾವುದು ಉದ್ಯಮಮುಖಿ ಎಂದು ಸರ್ಕಾರ ಕೂಡ ಸ್ಪಷ್ಟಪಡಿಸುತ್ತಿಲ್ಲ. ಶಿಕ್ಷಣ ತಜ್ಞರ ಜಾಗವನ್ನು ಶಿಕ್ಷಣೋದ್ಯಮಿಗಳು ಆವರಿಸಿಕೊಂಡಿದ್ದು, ಶಿಕ್ಷಣ ತಜ್ಞರ ಬದಲು ಶಿಕ್ಷಣೇತರರು ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ತಿಳಿಸಿದರು.

ಇದರ ಜೊತೆಗೆ ಈಗ ಸಮಾನತೆಯ ಶಿಕ್ಷಣ ಕೂಡ ದೂರವಾಗಿದೆ. ಕೆಲವು ಮಕ್ಕಳು ಅಂಗನವಾಡಿ ಶಾಲೆಯಲ್ಲಿ ವಿದ್ಯಾಭ್ಯಾಸ ಕಲಿತರೆ, ಕೆಲವು ಮಕ್ಕಳು ಕಾನ್ವೆಂಟ್‌ಗಳಲ್ಲಿ ಎಲ್‌ಕೆಜಿ, ಯುಕೆಜಿಯಲ್ಲಿ ಓದುತ್ತಿದ್ದಾರೆ ಎಂದು ಬರಗೂರು ರಾಮಚಂದ್ರಪ್ಪ ಹೇಳಿದರು.

ಇತ್ತೀಚಿಗೆ ಗುರು ಶಿಷ್ಯರ ಸಂಬಂಧ ಕೂಡ ಹಾಳಾಗಿದೆ. ಅತಿರೇಕದ ತಂತ್ರಜ್ಞಾನ ಶಿಕ್ಷಣದ ವ್ಯವಸ್ಥೆಯನ್ನೆ ಕೆಡಿಸಿದೆ. ತಂತ್ರಜ್ಞಾನ ತತ್ವಜ್ಞಾನವನ್ನು ನಾಶ ಮಾಡುತ್ತಿದೆ. ಶಿಕ್ಷಣದಲ್ಲಿ ಮಾನವೀಯ ಮನುಷ್ಯ ಸಂವಾದ ದೂರವಾಗಿದೆ. ವಿಶ್ವವಿದ್ಯಾಲಯಗಳಲ್ಲಿ ಪಾಠ ಮಾಡದ ಬಹಳಷ್ಟು ಪ್ರಾಧ್ಯಾಪಕರು ಕೂಡ ಇದ್ದಾರೆ ಎಂದು ಆರೋಪಿಸಿದರು. ಪ್ರತಿಯೊಂದು ವಿಶ್ವವಿದ್ಯಾನಿಲಯ ವಿವಾದವಾಗಿ ಮಾರ್ಪಟ್ಟಿದೆ. ಈಗ ಎಂತಹ ಪರಿಸ್ಥಿತಿ ಇದೆ ಅಂದರೆ, ಸಾವಿಲ್ಲದ ಮನೆಯಲ್ಲಿ ಸಾಸಿವೆ ಕಾಳು ತರಲು ಹೇಗೆ ಸಾಧ್ಯವಿಲ್ಲವೋ, ಹಾಗೆಯೇ ವಿವಾದವಿಲ್ಲದ ವಿಶ್ವವಿದ್ಯಾನಿಲಯ ಕಾಣಲು ಸಾಧ್ಯವೇ ಇಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ವಿದ್ಯಾವಂತರಲ್ಲಿ ಜಾತೀಯತೆ ಹೆಚ್ಚಾಗುತ್ತಿದೆ. ಧಾರ್ಮಿಕ ಮೂಲಭೂತವಾದ ವ್ಯಾಪಕತೆ ಪಡೆಯುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದ ಬರಗೂರು ರಾಮಚಂದ್ರಪ್ಪ, ಸಾಮರಸ್ಯ, ಸೌಹಾರ್ದತೆಗೆ ಧಕ್ಕೆ ಉಂಟಾಗುತ್ತಿದೆ ಎಂದರು.

ಅಂಧರಾದ ಡಾ.ನಾಗರಾಜ್ ಅವರ ಎರಡು ಪುಸ್ತಕ ಕುರಿತು ಮಾತನಾಡಿದ ಬರಗೂರು ರಾಮಚಂದ್ರಪ್ಪ, ವಿಶೇಷ ಕಣ್ಣಿರುವ ಬಹಳಷ್ಟು ಅಂಧರು ವಿಶ್ವದಲ್ಲಿ ಸಾಧನೆ ಮಾಡಿದ್ದಾರೆ. ಈ ಸಾಲಿನಲ್ಲಿ ಡಾ.ನಾಗರಾಜ್ ಕೂಡ ನಿಲ್ಲುತ್ತಾರೆ ಎಂದರು. ವರನಟ ಡಾ.ರಾಜ್ ಕುಮಾರ್ ನೇತ್ರದಾನವನ್ನು ಪ್ರತಿಪಾದಿಸಿದರು. ನೇತ್ರದಾನ ಬಹಳ ಮುಖ್ಯವಾದ ಚಳವಳಿಯಾಗಿ ರೂಪುಗೊಳ್ಳಬೇಕು. ಈ ನೇತ್ರದಾನ ಮಾನವೀಯ ಆಂದೋಲನವಾಗಿ ಪರಿವರ್ತನೆಗೊಳ್ಳಬೇಕು. ವಿಶೇಷ ಕಣ್ಣಿರುವವರಿಗೆ ನಮ್ಮ ಕಣ್ಣು ನೀಡಬೇಕು ಎಂದು ಸಲಹೆ ನೀಡಿದರು. ವಿಶೇಷ ಕಣ್ಣಿನಿಂದ ನೋಡುವವರ ಸಾಧನೆ ವಿಶೇಷವಾಗಿರುತ್ತದೆ. ಇದಕ್ಕೆ ಡಾ.ನಾಗರಾಜ್ ಸ್ಪಷ್ಟ ಉದಾಹರಣೆಯಾಗಿದ್ದು, ಅವರ ಬರವಣಿಗೆಯಲ್ಲಿ ಬಾವುಕತೆ ಇದೆ ಎಂದು ಬರಗೂರು ರಾಮಚಂದ್ರಪ್ಪ ಅಭಿಪ್ರಾಯಪಟ್ಟರು. ಕಾಲೇಜಿನ ಪ್ರಾಂಶುಪಾಲ ಪ್ರೊ.ಸೋಮಣ್ಣ, ಭಾಷಾ ತಜ್ಞ ಪ್ರೊ.ಓ.ಎಲ್.ನಾಗಭೂಷಣ ಸ್ವಾಮಿ, ವಿಶ್ರಾಂತ ಪ್ರಾಧ್ಯಾಪಕ ಡಾ.ರಾಜಪ್ಪ ದಳವಾಯಿ, ಪ್ರಾಧ್ಯಾಪಕಿ ಪ್ರೊ.ಬಿ.ಪಿ.ಆಶಾಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಗೋವಿಂದೇಗೌಡ, ರೇಖಾ ಪ್ರಕಾಶನದ ಮಾಲೀಕ ಓಂಕಾರಪ್ಪ, ಲೇಖಕ ಡಾ.ಪಿ.ವಿ.ನಾಗರಾಜ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸೆ.14ರವರೆಗೆ ಪಾಲಿಕೆ ವ್ಯಾಪ್ತಿ ಸ್ಥಿರಾಸ್ತಿ ತೆರಿಗೆಯಲ್ಲಿ ಶೇ.5 ರಿಯಾಯ್ತಿ

ಮೈಸೂರು, ಆ.30(ಎಸ್‌ಬಿಡಿ)– ಸ್ಥಿರಾಸ್ತಿ ತೆರಿಗೆ ಮೇಲಿನ ಶೇ.5ರಷ್ಟು ರಿಯಾಯ್ತಿಯನ್ನು ಸೆಪ್ಟೆಂಬರ್ 14ರವರೆಗೆ ವಿಸ್ತರಿಸಲಾಗಿದೆ. ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಸ್ಥಿರಾಸ್ತಿಗಳ ತೆರಿಗೆ ಪಾವತಿಗೆ ಶೇ.5ರಷ್ಟು ರಿಯಾಯ್ತಿಯನ್ನು ಆ.28ರವರೆಗೆ ನೀಡಲಾಗಿತ್ತು. ಈ ಕಾಲಾವಧಿಯನ್ನು ಸರ್ಕಾರ ಮತ್ತೆ ವಿಸ್ತರಿಸಿದ್ದು, ಸೆ.14ರವರೆಗೂ ರಿಯಾಯ್ತಿಯಡಿ ತೆರಿಗೆ ಪಾವತಿಸಲು ಅವಕಾಶವಿದೆ ಎಂದು ಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಶರೀಫ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಸಾಮಾನ್ಯವಾಗಿ ಆರ್ಥಿಕ ವರ್ಷದ ಆರಂಭಿಕ ತಿಂಗಳು ಅಂದರೆ ಏಪ್ರಿಲ್‌ನಲ್ಲಿ ಆಸ್ತಿ ತೆರಿಗೆ ಪಾವತಿಸುವವರಿಗೆ ಶೇ.5ರಷ್ಟು ರಿಯಾಯ್ತಿ ನೀಡಲಾಗುತ್ತದೆ. ಆದರೆ ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ರಿಯಾಯ್ತಿ ಸೌಲಭ್ಯವನ್ನು ಈ ಹಿಂದೆ ಎರಡು ಬಾರಿ ವಿಸ್ತರಣೆ ಮಾಡಲಾಗಿತ್ತು. ಇದೀಗ ಸರ್ಕಾರ ಮತ್ತೊಮ್ಮೆ ವಿಸ್ತರಿಸಿ, ಸುತ್ತೋಲೆ ಹೊರಡಿಸಿದೆ.

ಬಿಎಸ್‌ವೈ ವಿರುದ್ಧದ ಪೋಕ್ಸೋ ಕೇಸ್: ಸೆ.5ಕ್ಕೆ ವಿಚಾರಣೆ ಮುಂದೂಡಿಕೆ




ಬೆಂಗಳೂರು, ಆ.30– ಪೋಕ್ಸೋ ಕೇಸ್‌ನಲ್ಲಿ ಮಾಜಿ ಸಿಎಂ ಯಡಿಯೂರಪ್ಪರನ್ನು ಬಂಧಿಸದಂತೆ ಹೊರಡಿಸಿದ್ದ ಆದೇಶವನ್ನು ವಿಸ್ತರಿಸಿರುವ ಹೈಕೋರ್ಟ್ ಸೆ.5ಕ್ಕೆ ವಿಚಾರಣೆ ಮುಂದೂಡಿದೆ.

ವಿಚಾರಣೆ ನಡೆಸಿದ ಹೈಕೋರ್ಟ್ ಏಕಸದಸ್ಯ ಪೀಠ ವಾದ ವಿವಾದಗಳನ್ನು ಆಲಿಸಿ ಯಡಿಯೂರಪ್ಪರನ್ನು ಬಂಧಿಸದಂತೆ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು ವಿಸ್ತರಿಸಿ ಸೆ.5 ಕ್ಕೆ ವಿಚಾರಣೆ ಮುಂದೂಡಿದೆ. ಪೋಕ್ಸೋ ಕೇಸ್ ನಲ್ಲಿ ಮಾಜಿ ಸಿಎಂ ಯಡಿಯೂರಪ್ಪ ವಿರುದ್ಧ ಚಾರ್ಜ್ ಶೀಟ್ ಸಲ್ಲಿಕೆಯಾಗಿದ್ದ ಹಿನ್ನೆಲೆಯಲ್ಲಿ ಪ್ರಕರಣ ರದ್ದು ಕೋರಿ ಯಡಿಯೂರಪ್ಪ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್ ಈ ಹಿಂದೆ ಬಿಎಸ್‌ವೈ ಅವರನ್ನು ಬಂಧನ ಮಾಡದಂತೆ ಆದೇಶ ಹೊರಡಿಸಿತ್ತು.

ಮಾಜಿ ಸಿಎಂ ಯಡಿಯೂರಪ್ಪ ನನ್ನ 17 ವರ್ಷದ ಮಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪಿಸಿ ಮಹಿಳೆಯೊಬ್ಬರು ದೂರು ನೀಡಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

31.08.2024 ಶನಿವಾರ, ಮಳೆ ನಕ್ಷತ್ರ: ಪುಬ್ಬ, 31.08.2024 ರಿಂದ 12.09.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ: ಪುಷ್ಯ, ರಾಹುಕಾಲ : ಬೆಳಗ್ಗೆ 9 ರಿಂದ 10.30 ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 CFTRI ಶೋಧ – ಅನುಶೋಧ– ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು: CSIR, CFTRI, Mysuru, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರಿ, ವ್ಯಾಖ್ಯಾನ–ಡಾ. ಜಿ. ಆರ್. ತಿಪ್ಪೇಸ್ವಾಮಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು– ಕಾವ್ಯಾನಂದ ಅವರ ರಚನೆಗಳು, 8.30 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಪ್ರಸ್ತುತಿ : ಅಬ್ದುಲ್ ರಶೀದ್, 9.00 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ವಿ. ದೊರೆಸ್ವಾಮಿ ಐಯ್ಯಂಗಾರ್ –ವೀಣಾ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ನಮ್ಮೂರ್ ಹೆಸರು', ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.00 ಆಯುಷ್ ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.30 ದೇವರನಾಮ–ಮಾನಸ ನಯನ, 12.45 ಜನಪದ ಸಂಗೀತ, 1.20 ಭಾವಗೀತೆಗಳು, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ–ಲಯನ್ಸ್ ವೆಸ್ಟ್ ಸೇವಾನಿಕೇತನ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ 'ಅಂತಃಕರಣ', ರಚನೆ–ಹೆಚ್. ಕೆ. ಅನಸೂಯಾ ಸಂಪತ್, ನಿರ್ದೇಶನ–ಗಾಯತ್ರಿ ಪ್ರಭಾಕರ್, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ), ಹಿರಿಯ ಸ್ವಾತಂತ್ರ್ಯ ಹೋರಾಟಗಾರ್ತಿ ಎಂ. ಎನ್. ಪಾರ್ವತಮ್ಮ ಅವರೊಂದಿಗೆ ಮಂಜುಳಾ ಪುರಾಣಿಕ್ ನಡೆಸಿದ್ದ ಸಂವಾದ, ಸ್ವಾತಂತ್ರ್ಯದ ಚೇತನ ಗಾಂಧೀಜಿ–ಅಗರಂ ರಂಗಯ್ಯ ಅವರ ಭಾಷಣದ ಧ್ವನಿಮುದ್ರಣ, 6.50 ಕೃಷಿರಂಗ : ಕಿಸಾನ್ ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ ಉಳಿತಾಯದಿಂದ ಉದ್ದಿಮೆಯೆಡೆಗೆ ಈ ಕುರಿತು ಮಂಡ್ಯ ತಾಲೂಕು ಹಳೇಬೂದನೂರು ಗ್ರಾಮದ ರಾಣಿ ಚಂದ್ರಶೇಖರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್. ಕೇಶವಮೂರ್ತಿ, 8.00 ಯುವವಾಣಿ, 9.30 ಸವಿನೆನಪು–ಹಳೆಯ ಕನ್ನಡ ಚಿತಗೀತೆಗಳು, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ : ಎ. ಎಸ್. ಮುರಳಿ – ಹಾಡುಗಾರಿಕೆ

- **ವೀರಭದ್ರಸ್ವಾಮಿ ಹಾಗೂ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ:** ಶ್ರೀ ವೀರಭದ್ರೇಶ್ವರಸ್ವಾಮಿಯ ಜಯಂತ್ಯುತ್ಸವ, ಮಹಾರಥೋತ್ಸವ ಹಾಗೂ ಶ್ರಾವಣ ಮಾಸದ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಪ್ರಾಂಗಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ, ಬೆಳಗ್ಗೆಯಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸುವರ್ಣಪ್ರಾಶನ ಅಭಿಯಾನ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 8 ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಹೈಪೋಥೈರಾಯ್ಡಿಸಮ್ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ ಸಂಜೆ 4.30 ರವರೆಗೆ
- **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10 ರಿಂದ.
- **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ಪಠ್ಯೇತರ ಚಟುವಟಿಕೆಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಡಿಸಿಪಿ ಎಂ. ಮುತ್ತುರಾಜು, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು : ಪಿ.ವಿಶ್ವನಾಥ್, ಶ್ರೀಶೈಲ ರಾಮಣ್ಣನವರ್, ಟಿ. ನಾಗರಾಜು, ಪ್ರಿನ್ಸಿಪಾಲ್ ಡಾ. ಎಸ್. ಮರಿಗೌಡ, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 10ಕ್ಕೆ.
- **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು :** ಪ್ರತಿಭಾ ಪುರಸ್ಕಾರ ಮತ್ತು ಸ್ನೇಹ ಸಿಂಚನ ಸಮಾರಂಭ, ಸಾನ್ನಿಧ್ಯ : ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ನ್ಯಾಯಾಧೀಶ ಡಿ. ಪುಟ್ಟಸ್ವಾಮಿ, ಮುಖ್ಯ ಅತಿಥಿಗಳು : ರಾಘವೇಂದ್ರ ರತ್ನಾಕರ್, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 10ಕ್ಕೆ.
- **ಡಿ. ಬನುಮಯ್ಯ ಸ್ವತಂತ್ರ ಪದವಿಪೂರ್ವ ಕಾಲೇಜು:** ಸಾಂಸ್ಕೃತಿಕ ವೇದಿಕೆಯ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು: ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಪ್ರೊ.ಸಿ.ವಿ.ಶ್ರೀಧರಮೂರ್ತಿ, ಅಧ್ಯಕ್ಷತೆ: ಡಿ.ಬನುಮಯ್ಯ ವಿದ್ಯಾಸಂಸ್ಥೆ ಅಧ್ಯಕ್ಷ ಡಾ.ವಿ.ಬಿ. ಜಯದೇವ, ಉಪಸ್ಥಿತರು: ಡಿ.ಬನುಮಯ್ಯ ವಿದ್ಯಾಸಂಸ್ಥೆ ಉಪಾಧ್ಯಕ್ಷ ಡಾ. ಕೆ.ಎನ್. ತಿಮ್ಮಯ್ಯ, ಆಡಳಿತಾಧಿಕಾರಿ ಡಾ. ಎನ್.ತಿಮ್ಮಯ್ಯ, ಗೌರವ ಕಾರ್ಯದರ್ಶಿ ಶ್ರೀಮತಿ ವಿ.ಸಿ. ಕೋಮಲ, ಪ್ರಾಂಶುಪಾಲ ಎಂ. ಚಂದ್ರಶೇಖರ, ಸ್ಥಳ: ಡಿ.ಬನುಮಯ್ಯ ಕಲಾಭವನ, ಬೆಳಗ್ಗೆ 10ಕ್ಕೆ
- **ಲೀಸಾಸ್ ಫಸ್ಟ್ ಸ್ಟೆಪ್ ಪ್ರೀ ಸ್ಕೂಲ್ :** ಗೋಕುಲಾಷ್ಟಮಿ ಪ್ರಯುಕ್ತ ಮೊಸರು ಮಡಿಕೆ ಒಡೆಯುವ ಸ್ಪರ್ಧೆ, ಸ್ಥಳ: ಲೀಸಾಸ್ ಫಸ್ಟ್ ಸ್ಟೆಪ್ ಶಾಲೆ, ಬೆಮೆಲ್ ಬಡಾವಣೆ, ಶ್ರೀರಾಂಪುರ 2ನೇ ಹಂತ, ಮಧ್ಯಾಹ್ನ 3 ರಿಂದ.
- **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ :** ಕೆ–ಸೆಟ್ ಮತ್ತು ಯುಜಿಸಿ–ನೆಟ್ ಪರೀಕ್ಷೆಗಳಿಗೆ ತರಬೇತಿ ಶಿಬಿರ, ಉಪಸ್ಥಿತರು : ರಾಣಿ ಚನ್ನಮ್ಮ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಸಿ.ಎಂ. ತ್ಯಾಗರಾಜ, ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್. ವಿಷ್ಣುವರ್ಧನ, ಕಲಬುರಗಿಯ ಕೇಂದ್ರೀಯ ವಿಶ್ವವಿದ್ಯಾನಿಲಯದ ಪ್ರೊ. ಜಿ.ಆರ್. ಅಂಗಡಿ, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಸ್ಥಳ: ಕೇಂದ್ರದ ಆವರಣ, ಕರಾಮುವಿವಿ, ಬೆಳಗ್ಗೆ 11ಕ್ಕೆ.
- **ಜೀವಧಾರ ರಕ್ತನಿಧಿ ಕೇಂದ್ರ :** ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳವರ ಜನ್ಮ ದಿನದ ಅಂಗವಾಗಿ ಸ್ವಯಂಪ್ರೇರಿತ ರಕ್ತದಾನ ಶಿಬಿರ, ಮುಖ್ಯ ಅತಿಥಿಗಳು: ಶಾಸಕ ಟಿ.ಎಸ್. ಶ್ರೀವತ್ಸ, ಬಿಜೆಪಿ ನಗರಾಧ್ಯಕ್ಷ ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ಮಹಿಳಾ ಮೋರ್ಚಾ ಅಧ್ಯಕ್ಷೆ ರೇಣುಕಾರಾಜ್, ಸ್ಥಳ: ಜೀವಧಾರ ರಕ್ತನಿಧಿ ಕೇಂದ್ರ, ಸಯ್ಯಾಜಿರಾವ್ ರಸ್ತೆ, ಬೆಳಗ್ಗೆ 11ಕ್ಕೆ.
- **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ, ಮೈಸೂರು ವಿವಿ ಹಿರಿಯ ವಿದ್ಯಾರ್ಥಿಗಳ ಒಕ್ಕೂಟ, ಕನ್ನಡ ಸಾಹಿತ್ಯ ಕಲಾಕೂಟ:** ಧಮನಿತರ ಧ್ವನಿ ಪ್ರೊ.ಬಿ.ಪಿ.ಮಹೇಶ್‌ಚಂದ್ರ ಗುರು ಅವರಿಗೆ ನುಡಿ ನಮನ, ಉಪಸ್ಥಿತರು: ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ, ಪ್ರೊ. ಕೆ.ಎಸ್. ಭಗವಾನ್, ಪ್ರೊ. ಕಾಳೇಗೌಡ ನಾಗವಾರ, ಡಾ. ಬಿ.ಜೆ. ವಿಜಯಕುಮಾರ್, ಅಂಶಿ ಪ್ರಸನ್ನಕುಮಾರ್, ಪ್ರೊ. ಕವಿತಾ ರೈ, ಪ್ರೊ. ತೇಸ್ವಿ ನವೀಲೂರು, ಡಾ. ಕೆ. ರಘುರಾಂ ವಾಜಪೇಯಿ, ಪುರುಷೋತ್ತಮ್, ಸ್ಥಳ: ಕಸಾಪ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 11.30ಕ್ಕೆ.
- **ಭಾರತ ವಿದ್ಯಾರ್ಥಿ ಫೆಡರೇಷನ್ :** 12ನೇ ಮೈಸೂರು ಜಿಲ್ಲಾ ಸಮ್ಮೇಳನ, ಉದ್ಘಾಟನೆ : ಹಿರಿಯ ರಂಗಕರ್ಮಿ ಸಿ. ಬಸವಲಿಂಗಯ್ಯ, ಮುಖ್ಯ ಅತಿಥಿಗಳು : ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಭೀಮನಗೌಡ, ಮುಖಂಡರಾದ ಎಂ.ಎನ್. ದೀಕ್ಷಿತ್, ಜಿಲ್ಲಾಧ್ಯಕ್ಷ ಟಿ.ಎಸ್. ವಿಜಯ್‌ಕುಮಾರ್, ಸ್ಥಳ: ಬುದ್ಧ ವಿಹಾರ ಸಭಾಂಗಣ, ಬಲ್ಲಾಳ್ ವೃತ್ತ, ಬೆಳಗ್ಗೆ 11.30ಕ್ಕೆ.
- **ಮೈಸೂರು ಆರ್ಟ್ ಫೌಂಡೇಷನ್ :** ಚಿತ್ರಕಲಾ ಸ್ಪರ್ಧೆ, ಉದ್ಘಾಟನೆ : ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್, ಸ್ಥಳ: ಹೆರಿಟೇಜ್ ಬಿಲ್ಡಿಂಗ್, ಸರಸ್ವತಿಪುರಂ, ಮಧ್ಯಾಹ್ನ 12ಕ್ಕೆ.
- **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ:** ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಜಯಂತಿ, ಸಾನ್ನಿಧ್ಯ : ಶ್ರೀ ಸೋಮಶೇಖರ ಸ್ವಾಮಿಗಳು, ಉದ್ಘಾಟನೆ: ಮಾಲಂಗಿ ಸುರೇಶ್, ಅಧ್ಯಕ್ಷತೆ: ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಪ್ರಧಾನ ನುಡಿ: ಸಾಹಿತಿ ಬನ್ನೂರು ಕೆ.ರಾಜು, ಉಪಸ್ಥಿತರು: ಶ್ರೀಮತಿ ಜ್ಯೋತಿ ರೇಚಣ್ಣ, ಸ್ಥಳ: ಮೈಸೂರು ಜಿಲ್ಲಾ ಪತ್ರಕರ್ತರ ಭವನ, ಮಧ್ಯಾಹ್ನ 12.30ಕ್ಕೆ.
- **ಹಿರಣ್ಮಯಿ ಪ್ರತಿಷ್ಠಾನ, ಕಾವೇರಿ ಬಳಗ :** ಅಭಿನಂದನಾ ಸಮಾರಂಭ, ಅಭಿನಂದಿತರು : ಶ್ರೀಮತಿ ಎ. ವಿಜಯಕುಮಾರಿ, ಅಭಿನಂದನಾ ಭಾಷಣ: ಸಾಹಿತಿ ಬನ್ನೂರು ಕೆ. ರಾಜು, ಎಂ.ಎನ್. ಸುರೇಶ್, ಮುಖ್ಯ ಅತಿಥಿಗಳು : ಶ್ರೀಮತಿ ಜಮುನಾರಾಣಿ ಮಿರ್ಲೆ, ಜೆ. ಮಧು, ಶ್ರೀಮತಿ ಎನ್.ಕೆ. ಕಾವೇರಿಯಮ್ಮ, ಪ್ರಾಸ್ತಾವಿಕ ನುಡಿ : ಹಿರಣ್ಮಯಿ ಪ್ರತಿಷ್ಠಾನ ಅಧ್ಯಕ್ಷ ಎ. ಸಂಗಪ್ಪ, ಸ್ಥಳ: 2456, ಹೆಚ್.ಟಿ. ಡಬ್ಬಲ್ ರಸ್ತೆ, ವಿಜಯನಗರ 2ನೇ ಹಂತ, ಸಂಜೆ 4ಕ್ಕೆ.
- **ಕಲಾಸುರುಚಿ:** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 843, ಕಥೆ ಹೇಳುವವರು: ಶ್ರೀಮತಿ ಮಾಲತಿ ಹೆಗಡೆ, ಹವ್ಯಾಸಿ ಬರಹಗಾರ್ತಿ ಹಾಗೂ ಗೃಹಿಣಿ, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30ಕ್ಕೆ.
- **ಶರಣ ಸಾಹಿತ್ಯ ಪರಿಷತ್ತು (ಮೈಸೂರು ನಗರ ಘಟಕ), ಕದಳಿ ಮಹಿಳಾ ವೇದಿಕೆ :** ವಚನ–ಶ್ರಾವಣ, ಮನೆ ಮನೆಗೆ ಶ್ರಾವಣ ಮಾಸದ ಶರಣ ಸಂದೇಶ, ಅಧ್ಯಾಪಕ ಹೆಚ್.ಎಲ್. ಪ್ರಕಾಶ್ ಅವರಿಂದ ನಾನೆಂಬ ಅಹಂಕಾರ ತಲೆದೋರಲು–ಅಲ್ಲಮಪ್ರಭು ಕುರಿತು ಉಪನ್ಯಾಸ, ಸ್ಥಳ: ಶ್ರೀಮತಿ ಶೈಲಜಾ ಗುರುಸ್ವಾಮಿ, ರಾಮಾನುಜ ರಸ್ತೆ, ಸಂಜೆ 5.30ಕ್ಕೆ.
- **ಗಾನಭಾರತೀ:** ಗಾನಭಾರತೀ ಕೃಷ್ಣ ಜಯಂತಿ ಉತ್ಸವ, ವಿದುಷಿ ಸೌಂದರ್ಯ ಶ್ರೀವತ್ಸ ಮತ್ತು ತಂಡದಿಂದ ಭರತನಾಟ್ಯ ಕಾರ್ಯಕ್ರಮ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ
- **ವಿದ್ಯಾವರ್ಧಕ ಸಂಘ, ರಾಗ ವೈಭವ :** ವಿದ್ವಾನ್ ಸಂದೀಪ್ ನಾರಾಯಣ್ ಅವರಿಂದ ಕರ್ನಾಟಕ ಶಾಸ್ತ್ರೀಯ ಗಾಯನ, ವಿದ್ವಾನ್ ಹೆಚ್.ಎನ್. ಭಾಸ್ಕರ್–ವಯೋಲಿನ್, ವಿದ್ವಾನ್ ಕೆ.ಯು ಜಯಚಂದ್ರರಾವ್–ಮೃದಂಗ, ವಿದ್ವಾನ್ ಗಿರಿಧರ್ ಉಡುಪ–ಘಟಂ, ಸ್ಥಳ: ರಮಾಗೋವಿಂದ ರಂಗಮಂದಿರ, ನೃಪತುಂಗ ಶಾಲೆ ಆವರಣ, ರಾಮಕೃಷ್ಣನಗರ, ಸಂಜೆ 6ಕ್ಕೆ.
- **ಶ್ರೀ ಸುತ್ತೂರು ಮಠ, ಮೈಸೂರು ಶಾಖೆ :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ವಿದುಷಿ ಧರಿತ್ರಿ ಆನಂದರಾವ್ ಅವರಿಂದ ವಾಚನ, ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ. ಕೆ. ಅನಂತರಾಮು ಅವರಿಂದ ಪ್ರವಚನ, ಸಂಜೆ 6ಕ್ಕೆ ಸಾಮೂಹಿಕ ಪ್ರಾರ್ಥನೆ, ಸಂಜೆ 6.30ಕ್ಕೆ ಪ್ರವಚನ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30 ರಿಂದ.
- **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿಯವರ 21ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ಶನಿ ತ್ರಯೋದಶಿ, ನವಗ್ರಹ ಸಹಿತ ಶನೈಶ್ಚರ ಮಹಾಯಾಗ, ಶ್ರಾವಣ ಶನಿವಾರ ಪ್ರಯುಕ್ತ ಶ್ರೀದತ್ತ ವೆಂಕಟೇಶ್ವರ ಸ್ವಾಮಿಗೆ ವಿಶೇಷ ಅರ್ಚನೆ, ಸ್ಥಳ: ಆಶ್ರಮದ ಆವರಣ.
- **ಶ್ರೀ ರಾಜೇಶ್ವರಿ ವಸ್ತ್ರಾಲಂಕಾರ ರಂಗ ತಂಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಪೌರಾಣಿಕ ರಂಗಸಂಭ್ರಮ–2024, ಮಾಂಡವ್ಯ ರಂಗಭೂಮಿ ಕಲಾಸಂಘ, ಮಂಡ್ಯ ಅವರಿಂದ ಗಧಾಯುದ್ಧ ಪೌರಾಣಿಕ ನಾಟಕ ಪ್ರದರ್ಶನ, ನಿರ್ದೇಶನ : ಕಾರಸವಾಡಿ ಸುರೇಶ್, ಸ್ಥಳ: ಕಿರುರಂಗಮಂದಿರ, ಸಂಜೆ 6.30ಕ್ಕೆ.
- **ಶ್ರೀ ಮುಕ್ಕಣ್ಣೇಶ್ವರ ಸ್ವಾಮಿಯವರ ದೇವಸ್ಥಾನ :** 56ನೇ ವರ್ಷದ ಶ್ರೀ ಶನೈಶ್ವರ ಸ್ವಾಮಿಯವರ ಶ್ರಾವಣ ಶನಿವಾರದ ಪೂಜಾ ಮಹೋತ್ಸವ, ಬೆಳಗ್ಗೆ 6 ರಿಂದ ಕಳಸ ಸ್ಥಾಪನೆ, ಗಣಪತಿ ಪೂಜೆ, ಶ್ರೀ ಸ್ವಾಮಿಯವರಿಗೆ ಅಭಿಷೇಕ, ಸಹಸ್ರನಾಮಾರ್ಚನೆ, ನವಗ್ರಹ ಅಷ್ಟೋತ್ತರ ನೈವೇದ್ಯ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸಂಜೆ 4ಕ್ಕೆ ಶ್ರೀ ಶನೇಶ್ವರ ಸ್ವಾಮಿಯವರ ಮೆರವಣಿಗೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ರಾತ್ರಿ 9ಕ್ಕೆ ಹರಿಕಥಾ ವಿದ್ವಾನ್ ಮಹದೇವಪ್ಪ ಅವರಿಂದ ಶ್ರೀ ಶನಿ ಮಹಾತ್ಮೆ ಅಥವಾ ರಾಜಾ ವಿಕ್ರಮ ಹರಿಕಥೆ, ಸ್ಥಳ: ದೇವಸ್ಥಾನದ ಆವರಣ, ಮಂಡಿ ಮೊಹಲ್ಲಾ.
- **ಕೈಲಾಸ ಕಲಾಧರ ಸಾಂಸ್ಕೃತಿಕ ಸೇವಾ ಸಂಸ್ಥೆ :** ಶ್ರೀಮತಿ ಆರ್. ಪೂಜಾ ಯಶ್ವಂತ್ (ಶಾಲಿನಿ) ಅವರಿಂದ ರಂಗವೇದಾರ್ಚನೆ ನೃತ್ಯ ಲಲಿತೆ, ಉಪಸ್ಥಿತರು : ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಎ.ಎಚ್. ವಿಶ್ವನಾಥ್, ಡಾ. ಎಂ.ಡಿ. ಸುದರ್ಶನ್, ಎನ್. ಶ್ರೀಧರ್ ದೀಕ್ಷಿತ್, ಶ್ರೀಮತಿ ಗೀತಾ ಶ್ರೀಹರಿ, ಎಚ್.ಪಿ. ಈರಪ್ಪ, ಮೊಹಮ್ಮದ್ ಅಸ್ಲಾಮ್, ತಾಯಿನಾಡು ರಾಘವೇಂದ್ರ, ಸ್ಥಳ: ಕರ್ನಾಟಕ ಕಲಾಮಂದಿರ, ವಿನೋಬಾ ರಸ್ತೆ, ಸಂಜೆ 6ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಆಗಸ್ಟ್ 31 ಶನಿವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 136 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಅತ್ತ ಹೈಕೋರ್ಟ್‌ನಲ್ಲಿ ಸಿದ್ದರಾಮಯ್ಯ ಅಗ್ನಿಪರೀಕ್ಷೆ

ಇತ್ತ ಕಾಂಗ್ರೆಸ್ 'ರಾಜಭವನ ಚಲೋ'

ಕೇಂದ್ರ ಸಚಿವ ಕುಮಾರಸ್ವಾಮಿ ಸೇರಿ ಬಿಜೆಪಿಯ ಮೂವರು ಮಾಜಿ ಸಚಿವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಆಗ್ರಹಿಸಿ ಇಂದು ಕಾಂಗ್ರೆಸ್ ಹೋರಾಟ

ಬೆಂಗಳೂರು, ಆ.30(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ಬಗ್ಗೆ ರಾಜ್ಯ ಹೈಕೋರ್ಟ್‌ನಲ್ಲಿ ನಾಳೆ ವಿಚಾರಣೆ ಮುಂದುವರೆಯುವ ಸಂದರ್ಭದಲ್ಲೇ ಕಾಂಗ್ರೆಸ್ ಶಾಸಕರು 'ರಾಜಭವನ ಚಲೋ' ನಡೆಸುತ್ತಿದ್ದಾರೆ.

ಸಿದ್ದರಾಮಯ್ಯ ಪ್ರಾಸಿಕ್ಯೂಷನ್‌ಗೆ ಅನುಮತಿ ಪ್ರಶ್ನಿಸಿರುವ ಅರ್ಜಿ ವಿಚಾರಣೆ ನಾಳೆ ಬೆಳಗ್ಗೆ 10–30ಕ್ಕೆ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಪೀಠದ ಮುಂದೆ ಬರಲಿದೆ. ಇದೇ ಸಂದರ್ಭದಲ್ಲಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸೇರಿದಂತೆ ಬಿಜೆಪಿಯ ಮೂವರು ಮಾಜಿ ಸಚಿವರ ವಿರುದ್ಧವೂ ಪ್ರಾಸಿಕ್ಯೂಷನ್‌ಗೆ



ಮುಖ್ಯಮಂತ್ರಿ ಸಿದ್ದರಾಮಯ್ಯ

ಅನುಮತಿ ನೀಡುವಂತೆ ಒತ್ತಾಯಿಸಿ ಸಿದ್ದರಾಮಯ್ಯ ನೇತೃತ್ವದಲ್ಲೇ ಕಾಂಗ್ರೆಸ್‌ನ ಸಚಿವರು, ಶಾಸಕರು, ವಿಧಾನ ಪರಿಷತ್ ಸದಸ್ಯರು ಸೇರಿದಂತೆ ಪಕ್ಷದ ಎಲ್ಲ ಜನಪ್ರತಿನಿಧಿಗಳು



ರಾಜಭವನಕ್ಕೆ ತೆರಳಲಿದ್ದಾರೆ. ವಿಧಾನಸೌಧದ ಮಹಾತ್ಮ ಗಾಂಧಿ ಪ್ರತಿಮೆ ಬಳಿ ಸೇರಿ ಅಲ್ಲಿಂದ ರಾಜಭವನಕ್ಕೆ ತೆರಳಿ, ಕುಮಾರಸ್ವಾಮಿ, ಮುರುಗೇಶ್ ನಿರಾಣಿ, ಜನಾರ್ದನ



ಥಾವರ್‌ಚಂದ್ ಗೆಹ್ಲೋಟ್

ರೆಡ್ಡಿ ಹಾಗೂ ಶಶಿಕಲಾ ಜೊಲ್ಲೆ ವಿರುದ್ಧ ಸಲ್ಲಿಕೆಯಾಗಿರುವ ಅರ್ಜಿಗಳಿಗೂ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿ ಎಂದು ರಾಜ್ಯಪಾಲರನ್ನು ಒತ್ತಾಯಿಸಲಿದ್ದಾರೆ.

ಈ ಸಂಬಂಧ ಸುದ್ದಿಗಾರರೊಂದಿಗೆ ಪ್ರತ್ಯೇಕವಾಗಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೇಂದ್ರ ಸಚಿವ ಕುಮಾರಸ್ವಾಮಿ ವಿರುದ್ಧ ಎಸ್‌ಐಟಿ ತನಿಖೆ ನಡೆಸಿ ಎಫ್‌ಐಆರ್ ದಾಖಲಿಸಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ರಾಜಭವನವನ್ನು ಕೋರಿದೆ.

ಕುಮಾರಸ್ವಾಮಿ ಸೇರಿದಂತೆ ನಾಲ್ವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ಸಂಪುಟದಲ್ಲಿ ನಿರ್ಣಯ ಕೈಗೊಂಡು ಮನವಿ ಮಾಡಿದರೂ ರಾಜಭವನ ಅನುಮತಿ ನೀಡದಿರುವುದರಿಂದ ನಾವೆಲ್ಲರೂ ರಾಜ್ಯಪಾಲರನ್ನು ಭೇಟಿ ಮಾಡಿ ಮತ್ತೊಮ್ಮೆ ಒತ್ತಾಯ ಮಾಡುತ್ತೇವೆ ಎಂದರು.

ಸರ್ಕಾರ ಅಸ್ಥಿರಗೊಳಿಸಲು ಬಿಜೆಪಿ ಆಪರೇಷನ್ ಕಮಲ ಯತ್ನ

● ಬಿಜೆಪಿ–ಜೆಡಿಎಸ್ ನನ್ನ ಇಳಿಸಲು ನಿರಂತರ ಯತ್ನ: ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತೆ ಆರೋಪ ● ಸರ್ಕಾರ ಬೀಳಿಸಲು 60 ಶಾಸಕರ ಸೆಳೆಯಲು ಅವರಿಂದ ಸಾಧ್ಯವಾ...

ಬೆಂಗಳೂರು, ಆ.30(ಕೆಎಂಶಿ)– ಆಪರೇಷನ್ ಕಮಲದ ಮೂಲಕ ಸರ್ಕಾರವನ್ನು ಅಸ್ಥಿರಗೊಳಿಸಲು ಬಿಜೆಪಿ ನಿರಂತರವಾಗಿ ಪ್ರಯತ್ನಿಸುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ದೂರಿದ್ದಾರೆ.

ಅವರು ಸರ್ಕಾರ ರಚಿಸಬೇಕೆಂದರೆ, ಕಾಂಗ್ರೆಸ್‌ನ 60 ಶಾಸಕರನ್ನು ಸೆಳೆಯಬೇಕು, ಅದು ಸಾಧ್ಯವಿಲ್ಲ ಎಂದರು.

ಆ ಪಕ್ಷದ ಕೆಲವು ಮುಖಂಡರು ನಮ್ಮ ಸದಸ್ಯರ ಮನೆ ಬಾಗಿಲು ತಟ್ಟುತ್ತಿದ್ದಾರೆ. ಕಾಂಗ್ರೆಸ್‌ನ ಯಾವ ಶಾಸಕರೂ ದುಡ್ಡಿನ ಆಸೆಗೆ ಬಲಿಯಾಗುವುದಿಲ್ಲ ಎಂದರು. ಜನರ ಆಶೀರ್ವಾದದಿಂದ ರಾಜ್ಯದಲ್ಲಿ ಬಿಜೆಪಿ ಎಂದಿಗೂ ಅಧಿಕಾರಕ್ಕೆ ಬಂದಿಲ್ಲ. ಅವರು ಆಪರೇಷನ್ ಕಮಲದ ಮೂಲಕವೇ ನಾಲ್ಕು ಬಾರಿ ಸರ್ಕಾರ ರಚನೆ ಮಾಡಿದ್ದಾರೆ. ಈಗ ಮತ್ತೆ ಪ್ರಯತ್ನ ಮಾಡುತ್ತಿದ್ದರೂ ಶಾಸಕರು ಅವಕಾಶ ನೀಡುತ್ತಿಲ್ಲ. ಇದರಿಂದ ಬೇಸರಗೊಂಡು ನನ್ನ ವಿರುದ್ಧವೇ ಭ್ರಷ್ಟಾಚಾರ ಆರೋಪ ಹೊರಿಸಿ ರಾಜಭವನವನ್ನು ದುರುಪಯೋಗಪಡಿಸಿಕೊಂಡು ಪ್ರಕರಣವನ್ನು ಪ್ರಾಸಿಕ್ಯೂಷನ್‌ಗೆ ಕೊಡಿಸಿದ್ದಾರೆ. ನ್ಯಾಯಾಲಯದಲ್ಲಿ ಮೊಕದ್ದಮೆ ಇರುವುದರಿಂದ ಆ ಬಗ್ಗೆ ನಾನು ಹೆಚ್ಚು ಮಾತನಾಡುವುದಿಲ್ಲ, ಬಿಜೆಪಿ ಮತ್ತು ಜೆಡಿಎಸ್ ನನ್ನನ್ನು ಅಧಿಕಾರದಿಂದ ಕೆಳಗಿಳಿಸಲು ನಿರಂತರ ಪ್ರಯತ್ನ ಮಾಡುತ್ತಿವೆ ಎಂದರು. ನನ್ನ ವಿರುದ್ಧ ನಾಗರಿಕರೊಬ್ಬರು ದೂರು ನೀಡಿದ ತಕ್ಷಣ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ಆದೇಶ ಮಾಡುತ್ತಾರೆ. ಭ್ರಷ್ಟಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ ವಿವಿಧ ಸಂಸ್ಥೆಗಳು ತನಿಖೆ ನಡೆಸಿ ಬಿಜೆಪಿ ಮತ್ತು ಜೆಡಿಎಸ್ ನಾಯಕರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿದರೂ ರಾಜಭವನ ಅನುಮತಿ ನೀಡಿಲ್ಲ.

ಇದು ಏನು ಹೇಳುತ್ತದೆ? ನನ್ನನ್ನು ಅಧಿಕಾರದಿಂದ ಕೆಳಗಿಳಿಸಿ ಬಿಜೆಪಿ ಅಧಿಕಾರಕ್ಕೆ ಬರಲು ನಡೆಸುತ್ತಿರುವ ಹುನ್ನಾರವಲ್ಲವೇ ಎಂದು ಪ್ರಶ್ನಿಸಿದರು.

ಜೈಲ್ ಡಿಜಿಪಿಗೂ ನೋಟಿಸ್: ನಟ ದರ್ಶನ್ ವಿಚಾರ ■ 9ನೇ ಪುಟಕ್ಕೆ

ಮೈಸೂರಲ್ಲಿ ಜಪಾನ್‌ನ ಮಿಯಾವಾಕಿ ಮಾದರಿ ಕಿರು ಅರಣ್ಯ ಅನುಷ್ಠಾನ!

● ವಿಜಯನಗರ 3ನೇ ಹಂತದ 1.2 ಎಕರೆ ಪ್ರದೇಶದಲ್ಲಿ 12 ಸಾವಿರ ಸಸಿ ಬೆಳೆಸುವ ನೈಸರ್ಗಿಕ ನೆಲೆ ● ಇಂದು ಶಾಸಕ ಜಿ.ಟಿ.ದೇವೇಗೌಡರಿಂದ ಯೋಜನೆಗೆ ಚಾಲನೆ



ಮೈಸೂರು, ಆ.30(ಎಸ್‌ಬಿಡಿ)– ಮೈಸೂರಿನಲ್ಲಿ ಮಿಯಾವಾಕಿ ಮಾದರಿಯ ಕಿರು ಅರಣ್ಯ ಪದ್ಧತಿ ಅನುಷ್ಠಾನಕ್ಕೆ ಶನಿವಾರ ಚಾಲನೆ ದೊರಕಲಿದೆ.

ಮೈಸೂರು ಮಹಾನಗರ ಪಾಲಿಕೆ ಹಾಗೂ ಬಿಡದಿಯ ಮೆ.ಟೊಯೋಟ ಕಿರ್ಲೋಸ್ಕರ್ ಆಟೋ ಪಾರ್ಟ್ಸ್ ಪ್ರೈಲಿ. ಸಹಯೋಗದಲ್ಲಿ ವಿಜಯನಗರ ಮೂರನೇ ಹಂತ, ಹಿನಕಲ್ ರಸ್ತೆಯ 1.2 ಎಕರೆ ಪ್ರದೇಶದಲ್ಲಿ ಈ ಕಿರು ಅರಣ್ಯ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಸುಮಾರು 12 ಸಾವಿರ ಸಸಿಗಳನ್ನು ನೆಡಲು ಉದ್ದೇಶಿಸಲಾಗಿದೆ.

ಯೋಜನೆಯ ಪ್ರಾರಂಭಿಕ ಹಂತವಾಗಿ ಸಸಿ ನೆಡುವ ಕಾರ್ಯಕ್ಕೆ ಶನಿವಾರ ಬೆಳಗ್ಗೆ 10.30ಕ್ಕೆ ಶಾಸಕ ಜಿ.ಟಿ.ದೇವೇಗೌಡರು ಚಾಲನೆ ನೀಡಲಿದ್ದು, ಮೈಸೂರು ಮಹಾನಗರಪಾಲಿಕೆ ಆಯುಕ್ತ ಆಶಾದ್ ಉರ್ ರಹಮಾನ್ ಶರೀಫ್, ಟೊಯೋಟ ಕಿರ್ಲೋಸ್ಕರ್ ಆಟೋ ಪಾರ್ಟ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್.ಪ್ರಸಾದ್, ಹಿರಿಯ ಉಪಾಧ್ಯಕ್ಷರೂ ಆದ ನಿರ್ದೇಶಕ ತಬ್ರೇಜ್ ಅಹಮದ್, ಸಿಬ್ಬಂದಿ, ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. ಮರಗಳ ವಿನಾಶದಿಂದ ಪರಿಸರದಲ್ಲಿ ಇಂಗಾಲದ ಡೈ–ಆಕ್ಸೈಡ್ ಜೊತೆಗೆ ಜಾಗತಿಕ ತಾಪಮಾನವೂ ಹೆಚ್ಚಾಗುತ್ತಿದೆ. ಇದರ ನಿಯಂತ್ರಣಕ್ಕೆ ಹಸಿರೀಕರಣವೊಂದೇ ಪರಿಹಾರ. ಈ ನಿಟ್ಟಿನಲ್ಲಿ ಮಿಯಾವಾಕಿ ಪದ್ಧತಿಯಲ್ಲಿ ದಟ್ಟವಾದ ಅರಣ್ಯ ಬೆಳೆಸುವುದು ಪರಿಣಾಮಕಾರಿ. ■ 9ನೇ ಪುಟಕ್ಕೆ



ಜಿ.ಟಿ.ದೇವೇಗೌಡ

ಟೋಲ್‌ನಲ್ಲಿ ಕ್ಯಾಶ್/ ಫಾಸ್ಟ್‌ಟ್ಯಾಗ್ ಗೊಂದಲ; ವಾಹನ ಚಾಲಕರು ಹೈರಾಣ

ದೂರದಿಂದಲೇ ಗೋಚರಿಸುವ ರೀತಿ ಫಲಕ ಅಳವಡಿಸಿದರೆ ಸಮಸ್ಯೆಯೇ ಇಲ್ಲ

ಮೈಸೂರು, ಆ.30(ಬಿಎಲ್‌ಯು)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಸಂಚರಿಸುವ ಪ್ರಯಾಣಿಕರು ಟೋಲ್ ಪ್ಲಾಜಾ ಬಳಿ ಅನಗತ್ಯ ತೊಂದರೆ ಅನುಭವಿಸುವಂತಾಗಿದೆ. ಶ್ರೀರಂಗಪಟ್ಟಣದ ಗಣಂಗೂರು ಟೋಲ್ ಪ್ಲಾಜಾದಲ್ಲಿ ನಗದು ಸ್ವೀಕರಿಸುವ ಟೋಲ್ ಕೌಂಟರ್ ಗುರುತಿಸಲಾಗದೆ ಕೇವಲ ಫಾಸ್ಟ್‌ಟ್ಯಾಗ್‌ಗೆ ಸೀಮಿತವಾದ ಲೇನ್‌ಗಳ ಹೊಕ್ಕಿ ಮುಂದಕ್ಕೂ ಹೋಗಲಾಗದೆ, ಹಿಂದಕ್ಕೂ ಬರಲಾಗದೆ ಕಸರತ್ತು ನಡೆಸುವುದು ಒಂದೆಡೆಯಾದರೆ, ನಗದು ಸ್ವೀಕರಿಸುವ ಲೇನ್‌ನಲ್ಲಿ ಕೆಲವೊಮ್ಮೆ ಫಾಸ್ಟ್‌ಟ್ಯಾಗ್ ಕಾರ್ಯನಿರ್ವಹಿಸದೆ ಪಜೀತಿಗೂ ಸಿಲುಕುವ ಪ್ರಸಂಗಗಳೂ ನಡೆದಿವೆ.



ಗೊಂದಲಕ್ಕೆ ಕಾರಣವೇನು?: ಮೈಸೂರು–ಬೆಂಗಳೂರು ಮಾರ್ಗ ಗಣಂಗೂರು ಟೋಲ್ ಪ್ಲಾಜಾದಲ್ಲಿ 11 ಲೇನ್‌ಗಳಿವೆ. ಇವುಗಳಲ್ಲಿ ಒಂದು ಲೇನ್‌ನಲ್ಲಿ ಮಾತ್ರ ನಗದು ರೂಪದಲ್ಲಿ ಟೋಲ್ ಪಾವತಿಗೆ ಅವಕಾಶವಿದೆ. ಆದರೆ ಆ ಲೇನ್ ಅನ್ನು ಗುರುತಿಸುವುದೇ ಕಷ್ಟ, ಫಲಕದಲ್ಲಿ ಫಾಸ್ಟ್ ಟ್ಯಾಗ್ ಎನ್ನುವುದು ದೊಡ್ಡದಾಗಿದೆ. ಅದರ ಕೆಳಗಡೆ ಇಂಗ್ಲಿಷ್‌ನಲ್ಲಿ ಕ್ಯಾಷ್(ನಗದು) ಎಂದು ಚಿಕ್ಕದಾಗಿ ನಮೂದಿಸಲಾಗಿದೆ. ಇದೇ ಗೊಂದಲಕ್ಕೆ ಪ್ರಮುಖ ಕಾರಣ.

ವಾಹನಗಳಲ್ಲಿ ವೇಗವಾಗಿ ಬರುವವರಿಗೆ ಚಿಕ್ಕ ಹಾಗೂ ಅಸ್ಪಷ್ಟವಾದ ಫಲಕ ಕಾಣಿಸದೆ ಖಾಲಿ ಇರುವ ಲೇನ್‌ನಲ್ಲಿ ಹೋಗುತ್ತಾರೆ. ನಗದು ಪಾವತಿಸುವ ಉದ್ದೇಶವಿದ್ದವರು ಫಾಸ್ಟ್ ಟ್ಯಾಗ್ ಲೇನ್‌ಗೆ ಹೋಗಿ ಪಜೀತಿ ಪಡುವಂತಾಗಿದೆ. ಇಲ್ಲಿ ಫಾಸ್ಟ್ ಟ್ಯಾಗ್ ಇಲ್ಲದ ಕಾರಣ ಬ್ಯಾರಿಯರ್(ಗೇಟ್) ತೆರೆಯುವುದಿಲ್ಲ ಆ ಕೌಂಟರ್‌ನಲ್ಲಿ ನಗದು ಪಾವತಿಗೂ ಅವಕಾಶವಿರುವುದಿಲ್ಲ. ಟೋಲ್ ಸಿಬ್ಬಂದಿ ಬಂದು ವಿಚಾರ ತಿಳಿಸುವಷ್ಟರಲ್ಲಿ ಹಿಂದೆ ವಾಹನಗಳು ಸಾಲುಗಟ್ಟಿ ನಿಂತಿರುತ್ತವೆ. ಕಡೆಗೆ ಟೋಲ್ ಸಿಬ್ಬಂದಿಯೇ ಒಂದೊಂದು ವಾಹನವನ್ನು ರಿವರ್ಸ್ ತೆಗೆಸಿ, ಸಮಸ್ಯೆ ಪರಿಹರಿಸಬೇಕಾಗುತ್ತದೆ. ಈ ಕಸರತ್ತು ಮುಗಿಯುವಷ್ಟರಲ್ಲಿ ಹಿಂದಿನ ವಾಹನಗಳಲ್ಲಿರುವವರು ಹೈರಾಣಾಗುತ್ತಾರೆ.

ಫಾಸ್ಟ್ ಟ್ಯಾಗ್ ಇದ್ದರೂ ಸಿಲುಕಬಹುದು: ಫಾಸ್ಟ್ ಟ್ಯಾಗ್ ಫಲಕಗಳು ಎಲ್ಲಾ ಲೇನ್‌ಗಳಲ್ಲೂ ಇವೆ. ■ 9ನೇ ಪುಟಕ್ಕೆ



ಬಿಚ್ಚು ನುಡಿ

ವಿಕ್ರಂ ಮುತ್ತಣ್ಣ

ಮುಡಾ ಹಗರಣ: ಆಯುಕ್ತರಿಬ್ಬರ ತನಿಖೆ ಆಗಬೇಕಲ್ಲವೇ?

■ ಪುಟ–4

ಪ್ರಮೋಷನ್ ಸಿಕ್ಕರೆ ಖುಷಿಯಾಗುತ್ತೆ!

ಬೆಂಗಳೂರು, ಆ.30– ಕಾಂಗ್ರೆಸ್‌ನಿಂದ ನನಗೆ ಪ್ರಮೋಷನ್ ಸಿಕ್ಕರೆ ಸಂತೋಷವಾಗುತ್ತದೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ್ ಶುಕ್ರವಾರ ಹೇಳಿದ್ದಾರೆ.



ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದಿಂದ ಅಕ್ರಮವಾಗಿ ನಿವೇಶನ ಪಡೆದ ಆರೋಪ ಎದುರಿಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬದಲಾಯಿಸಬಹುದು ಎಂಬ ವದಂತಿಗಳ ಹಿನ್ನೆಲೆಯಲ್ಲಿ ಡಾ. ಪರಮೇಶ್ವರ್ ಅವರ ಈ ಹೇಳಿಕೆ ಮಹತ್ವ ಪಡೆದುಕೊಂಡಿದೆ. ಪಕ್ಷ ಡಾ.ಪರಮೇಶ್ವರ್ ಅವರಿಗೆ ಬಡ್ತಿ ನೀಡಿದರೆ ಸಂತೋಷವಾಗುತ್ತದೆ ಎಂಬ ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಪರಮೇಶ್ವರ್, ಪ್ರಮೋಷನ್ ಸಿಕ್ಕರೆ ನನಗೂ ■ 9ನೇ ಪುಟಕ್ಕೆ

ಮುಡಾ ಮಹಾ ಹಗರಣ...!

ಮುಡಾ ಮಾಜಿ ಆಯುಕ್ತರ ವಿರುದ್ಧ ಪ್ರಕರಣ ದಾಖಲಿಸಿ

ಮೈಸೂರು ಪೊಲೀಸ್ ಆಯುಕ್ತರಿಗೆ ಹಿರಿಯ ವಕೀಲ ಎಸ್.ಅರುಣ್‌ಕುಮಾರ್ ದೂರು ಸಲ್ಲಿಕೆ

ಮೈಸೂರು, ಆ. 30(ಆರ್‌ಕೆ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಮಾಜಿ ಆಯುಕ್ತರುಗಳಾದ ಡಾ.ಡಿ.ಬಿ.ನಟೇಶ್, ಜಿ.ಟಿ.ದಿನೇಶ್‌ಕುಮಾರ್ ಹಾಗೂ ಇತರರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸುವಂತೆ ಪ್ರಗತಿ ಲಾ ಅಸೋಸಿಯೇಟ್ಸ್‌ನ ಹಿರಿಯ ವಕೀಲ ಎಸ್.ಅರುಣ್‌ಕುಮಾರ್ ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರಿಗೆ ಇಂದು ದೂರು ಸಲ್ಲಿಸಿದ್ದಾರೆ.

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 (KUDA), ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ 1988 ಹಾಗೂ ಇತರ ಪೂರಕ ಕಾನೂನುಗಳನ್ನು ಗಾಳಿಗೆ ತೂರಿ ಅಧಿಕಾರಿಗಳು ಹಾಗೂ ಇತರರು ಕೆಲಸ ಮಾಡಿದ್ದು, ಮುಡಾಗೆ 5,000 ಕೋಟಿ ರೂ.ಗೂ ಅಧಿಕ ನಷ್ಟ ಉಂಟು ಮಾಡಿದ್ದಾರೆ ಎಂದು ಅರುಣ್‌ಕುಮಾರ್ ದೂರಿನಲ್ಲಿ ಆರೋಪಿಸಿದ್ದಾರೆ.

ಆಯುಕ್ತರ ಮಧ್ಯ ಪ್ರವೇಶಕ್ಕೆ ಕೋರಿಕೆ: ಮುಡಾ ಹಗರಣ ಸಂಬಂಧ ವ್ಯಾಪ್ತಿಯ ಲಕ್ಷ್ಮೀಪುರಂ ಠಾಣೆಗೆ ತಾವು ನೀಡಿದ ದೂರು ದಾಖಲಿಸದೇ, ಅವರು ಆ ದೂರನ್ನು ಹಗರಣದ ತನಿಖೆಗೆ ಸರ್ಕಾರ ನೇಮಿಸಿರುವ ಆಯೋಗಕ್ಕೆ ರವಾನಿಸಿದ್ದಾರೆ ಎಂದು ಅರುಣ್‌ಕುಮಾರ್ ತಮ್ಮ ದೂರಿನಲ್ಲಿ ತಿಳಿಸಿದ್ದಾರೆ. ಮುಡಾ ಮಾಜಿ ಆಯುಕ್ತರುಗಳಾದ ನಟೇಶ್, ದಿನೇಶ್‌ಕುಮಾರ್ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸುವಂತೆ ಲಕ್ಷ್ಮೀಪುರಂ ಠಾಣೆ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು ಹಾಗೂ 50:50ರ ಅನುಪಾತದಡಿ ನಿವೇಶನ, ತುಂಡು ಜಾಗ ಹಂಚಿಕೆಯಲ್ಲಿ ಪ್ರಾಧಿಕಾರಕ್ಕೆ ನಷ್ಟ ಉಂಟು ಮಾಡಿರುವ ಮುಡಾ ಸದಸ್ಯರ ವಿರುದ್ಧವೂ ಕ್ರಮ ಜರುಗಿಸುವಂತೆಯೂ ಅವರು ಪೊಲೀಸ್ ಆಯುಕ್ತರನ್ನು ಒತ್ತಾಯಿಸಿದ್ದಾರೆ.

ಭಾರತೀಯ ನ್ಯಾಯ ಸಂಹಿತೆ 2023 (ಈ ಹಿಂದೆ ಐಪಿಸಿ), ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988 ಮತ್ತು ಸಂಬಂಧಿಸಿದ ಇತರ ಕಾಯ್ದೆಗಳಡಿ ಸರ್ಕಾರ ಕಳಂಕಿತರ ವಿರುದ್ಧ ಪ್ರಕರಣ ದಾಖಲಿಸಬೇಕೆಂದೂ ಅರುಣ್‌ಕುಮಾರ್ ಆಗ್ರಹಿಸಿದ್ದಾರೆ.



ಮೈಸೂರಿನ ನಜರ್‌ಬಾದ್‌ನ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಹಿರಿಯ ವಕೀಲ ಅರುಣ್‌ಕುಮಾರ್ ಪತ್ರವಾರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರಿಗೆ ದೂರು ಸಲ್ಲಿಸಿದರು.

ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳು: ಸರ್ಕಾರಿ ಸೇವಕ ಯಾವುದೇ ಭ್ರಷ್ಟಾಚಾರದಲ್ಲಿ ತೊಡಗಿದ್ದರೆ ಅವರ ವಿರುದ್ಧ ಸರಹದ್ದಿನ ಪೊಲೀಸರು ಎಫ್‌ಐಆರ್ ದಾಖಲಿಸಿ ಯಾವುದೇ ಹಂತದಲ್ಲಾದರೂ ತನಿಖೆಗೆ ಅನುಮತಿ ಕೋರಬಹುದೆಂದು ಸರ್ವೋಚ್ಚ ನ್ಯಾಯಾಲಯ ನಿರ್ದೇಶನ ನೀಡಿದೆ. ಆದರೆ ಇಷ್ಟು ದೊಡ್ಡ ಪ್ರಮಾಣದ ಭ್ರಷ್ಟಾಚಾರ ನಡೆದಿದ್ದರೂ ಎಫ್‌ಐಆರ್ ದಾಖಲಿಸಲು ನಿರಾಕರಿಸಿದ್ದಾರೆ ಎಂದು ಅರುಣ್‌ಕುಮಾರ್ ಇದೇ ಸಂದರ್ಭ ಅಚ್ಚರಿ ವ್ಯಕ್ತಪಡಿಸಿದ್ದಾರೆ.

ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್‌ಗಳ ಕೆಲ ತೀರ್ಪುಗಳನ್ನು ಉಲ್ಲೇಖಿಸಿದ ಅವರು, **'ಸರ್ಕಾರಿ ಸೇವೆಯಲ್ಲಿರುವಾಗ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ ಕ್ರಿಮಿನಲ್ ಮಿಸ್ ಕಂಡಕ್ಟ್‌ನಲ್ಲಿ ತೊಡಗುವುದು ಅಪರಾಧ ಎಂದು ತಿಳಿಸಿದ್ದಾರೆ'.**


ಮಿಸ್ ಕಂಡಕ್ಟ್‌ನ ಕೆಲ ಕಾಯ್ದೆಗಳು: ಮುಡಾದಲ್ಲಿ ಆಯುಕ್ತರುಗಳು, ಸಂಬಂಧಿಸಿದ ಇತರ ಅಧಿಕಾರಿಗಳು ಹಾಗೂ ಪ್ರಾಧಿಕಾರದ ಸದಸ್ಯರು ಡಾ. ನಟೇಶ್ ಮತ್ತು ದಿನೇಶ್‌ಕುಮಾರ್ ಅವಧಿಯಲ್ಲಿ ನಕಲಿ, ವಂಚನೆ, ಅಪರಾಧ ಚಟುವಟಿಕೆ, ಸತ್ಯ ಮರೆಮಾಚುವುದು, ಸಾರ್ವಜನಿಕ ಸೇವೆಗೆ ಅಗೌರವ, ಸಮರ್ಪಕವಲ್ಲದ ದಾಖಲೆ ಸೃಷ್ಟಿ, ಲಂಚ ಸ್ವೀಕಾರಗಳಂತಹ ಕೃತ್ಯಗಳಲ್ಲಿ ತೊಡಗಿ ಕಾಯ್ದೆಗಳನ್ನು ಉಲ್ಲಂಘಿಸಿದ್ದಾರೆ ಎಂದು ಅವರು ಆಪಾದಿಸಿದ್ದಾರೆ.

2023ರಲ್ಲಿ ಹಿಂದಿನ ಡಿಸಿ ಪತ್ರ: ಈ ಹಿಂದಿನ ಮೈಸೂರು ಜಿಲ್ಲಾಧಿಕಾರಿಯಾಗಿದ್ದ ಡಾ. ಕೆ.ವಿ.ರಾಜೇಂದ್ರ 2023ರ ನವೆಂಬರ್ 27ರಂದು ಸರ್ಕಾರಕ್ಕೆ ಬರೆದ ಪತ್ರದಲ್ಲಿ KUDA ಕಾಯ್ದೆಗೆ ವಿರುದ್ಧವಾಗಿ ಮುಡಾ ಆಯುಕ್ತರು ಕಾನೂನುಬಾಹಿರ ಚಟುವಟಿಕೆ ನಡೆಸಿದ್ದಾರೆ. ಅದರಿಂದ ಪ್ರಾಧಿಕಾರಕ್ಕೆ 1,000 ಕೋಟಿ ರೂ. ನಷ್ಟ ಉಂಟಾಗಿದೆ ಎಂದು ತಿಳಿಸಿದ್ದರು. ಕಾಯ್ದೆಯಲ್ಲಿ ಅವಕಾಶ ಇಲ್ಲದಿದ್ದರೂ, 2015ರ ಫೆಬ್ರವರಿ 11ರಂದು ಜಾರಿಗೊಳಿಸಿದ ಶೇ. 50:50ರ ಅನುಪಾತದಡಿ ನಿವೇಶನ ಹಂಚಿಕೆ ಯೋಜನೆಯನ್ನು ಆಯುಕ್ತರು ಹಿಂದಿನ ಹಳೆಯ ಪ್ರಕರಣಗಳಿಗೂ ■ 9ನೇ ಪುಟಕ್ಕೆ

ಪದವಿ ಮಾರ್ಕ್ಸ್ ಕಾರ್ಡ್ ಬೇಕೆ...! ಹಾವೇರಿ ವಿವಿಗೆ ಕಳುಹಿಸಿ...!!

ಕುಲಸಚಿವರನ್ನಾಗಿ ಮುಡಾ ಮಾಜಿ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್ ನಿಯೋಜಿಸಿರುವುದಕ್ಕೆ ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ವ್ಯಂಗ್ಯ

ಮೈಸೂರು, ಆ. 30(ಆರ್‌ಕೆ)– ಯಾವುದೇ ಪದವಿ ಅಥವಾ ಸ್ನಾತಕೋತ್ತರ ಪದವಿಗಳ ಅಂಕಪಟ್ಟಿ ಬೇಕೇ? ಅಗತ್ಯವಿರುವವರನ್ನು ಹಾವೇರಿ ವಿಶ್ವವಿದ್ಯಾನಿಲಯಕ್ಕೆ ಕಳುಹಿಸಿಕೊಡಿ...! ಎಂದು ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್. ವಿಶ್ವನಾಥ್ ವ್ಯಂಗ್ಯವಾಡಿದ್ದಾರೆ. ಮಾಜಿ ಮುಡಾ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್ ಅವರನ್ನು ಹಾವೇರಿ ವಿಶ್ವವಿದ್ಯಾನಿಲಯದ ಕುಲಸಚಿವರನ್ನಾಗಿ ವರ್ಗಾವಣೆ ಮಾಡಿರುವ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಅವರು, ಇನ್ನು ಮುಂದೆ ಹಣ ಕೊಟ್ಟರೆ ಹಾವೇರಿ ವಿಶ್ವವಿದ್ಯಾನಿಲಯದ ಕುಲಸಚಿವರೇ ನಕಲಿ ಅಂಕಪಟ್ಟಿ ತಯಾರಿಸಿ ಕೊಡುತ್ತಾರೆ ಎಂದು ಮೂದಲಿಸಿದರು.



ವಿಶ್ವನಾಥ್



ದಿನೇಶ್‌ಕುಮಾರ್

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ಕಾನೂನು–ಕಾಯ್ದೆಗಳನ್ನು ಗಾಳಿಗೆ ತೂರಿ ಮನಬಂದಂತೆ ಅಧಿಕೃತ ಜ್ಞಾಪನಾ ಮೂಲಕ ಶೇ. 50:50 ರಡಿ, ಪ್ರೋತ್ಸಾಹದಾಯಕ ಹಾಗೂ ಬದಲಿ ನಿವೇಶನಗಳನ್ನು ಮಂಜೂರು ಮಾಡಿ ಬ್ರಹ್ಮಾಂಡ ಭ್ರಷ್ಟಾಚಾರ ನಡೆಸಿ ಸಾವಿರಾರು ಕೋಟಿ ನಷ್ಟ ಉಂಟು ಮಾಡಿರುವ ಜಿ.ಟಿ.ದಿನೇಶ್ ಕುಮಾರ್‌ನನ್ನು ವರ್ಗಾವಣೆ ಮಾಡಿದ್ದ ಸರ್ಕಾರ, ಇದೀಗ ಹಾವೇರಿ ವಿಶ್ವವಿದ್ಯಾನಿಲಯದ ಕುಲಸಚಿವರನ್ನಾಗಿ ನಿಯೋಜಿಸಿರುವುದು 'ಹೊಲ ಮೇಯಲು ಬೇಲಿ ನಿರ್ಮಿಸಿದಂತಾಗಿದೆ' ಎಂದು ಟೀಕಾಪ್ರಹಾರ ನಡೆಸಿದರು. ಭಾರಿ ಅವ್ಯವಹಾರ ನಡೆಸಿ ಸರ್ಕಾರ, ಮುಖ್ಯಮಂತ್ರಿಗಳನ್ನು ಇಕ್ಕಟ್ಟಿಗೆ ಸಿಲುಕಿಸಿ ಮುಜುಗರಕ್ಕೀಡು ಮಾಡಿರುವ ಮುಡಾ ಹಿಂದಿನ ಆಯುಕ್ತರುಗಳಾದ ಜಿ.ಟಿ.ದಿನೇಶ್‌ಕುಮಾರ್ ಮತ್ತು ಡಿ.ಬಿ.ನಟೇಶ್ ಹಾಗೂ ಇತರರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಿ, ಸೇವೆಯಿಂದ ಅಮಾನತುಪಡಿಸುವ ಬದಲು, ಬೇರೆಡೆ ವರ್ಗಾವಣೆ ಮಾಡಿರುವುದು ಮುಖ್ಯಮಂತ್ರಿಗಳಿಗೆ ಶೋಭೆ ತರುವಂತಹದ್ದಲ್ಲ ಎಂದು ವಿಶ್ವನಾಥ್ ಅಭಿಪ್ರಾಯಪಟ್ಟರು. ಭ್ರಷ್ಟಾಚಾರದ ಆರೋಪ ಹೊತ್ತಿರುವ ಜಿ.ಟಿ.ದಿನೇಶ್‌ಕುಮಾರ್ ಪ್ರತಿಷ್ಠಿತ ವಿಶ್ವವಿದ್ಯಾನಿಲಯದ ಜವಾಬ್ದಾರಿಯುತ ಹುದ್ದೆ ನೀಡಿರುವುದು ಖಂಡನೀಯ ಎಂದ ಅವರು, ಮೈಸೂರಿನವರೇ ಆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶೋಭೆ ತರುವುದಿಲ್ಲ, ತಮ್ಮ ಸುತ್ತಲಿರುವವರಿಂದಾಗಿ ಇಂತಹ ನಿರ್ಧಾರ ಕೈಗೊಳ್ಳಲಾಗುತ್ತಿದೆ ಎಂದು ಆಪಾದಿಸಿದರು.

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : ನನ್ನ ಕ್ಲಿನಿಕ್ ವೇಳೆ ಸಂಜೆ 4 ರಿಂದ 7ರವರೆಗೆ ಎಂದು ನಿಮಗೆ ತಿಳಿದಿಲ್ಲವೆ?

ರೋಗಿ : ಗೊತ್ತಿದೆ ಡಾಕ್ಟ್ರೆ... ಆದರೆ ನನಗೆ ಕಚ್ಚಿದ ನಾಯಿಗೆ ಗೊತ್ತಿಲ್ವಲ್ಲ...

ಮೈಸೂರು ಮಿತ್ರ

ಶನಿವಾರ, 31 ಆಗಸ್ಟ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಒಬ್ಬರ ಸರಳ ಸ್ವಭಾವ ಅವರ ಬಲಹೀನತೆ ಅಲ್ಲ. ಪ್ರಪಂಚದಲ್ಲಿ ನೀರಿಗಿಂತ ಸರಳ ಯಾವುದು ಇಲ್ಲ. ಆದರೆ ಅದರ ರಭಸಕ್ಕೆ ಎಲ್ಲವನ್ನು ಸೋಲಿಸುವ ಸಾಮರ್ಥ್ಯವಿದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಣದಷ್ಟು ಮಾತಿಗಿಂತ ಕಣದಷ್ಟು ಕೆಲಸ ಲೇಸು.

ನಿಮ್ಮ ಪತ್ರಗಳು

■ ಶವ ಸಂಸ್ಕಾರಕ್ಕೂ ನೆಮ್ಮದಿ ಇಲ್ಲ ಇಲ್ಲಿ



ಮಾನ್ಯರೆ,

ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಗಾಂಧಿನಗರದ 2ನೇ ಮುಖ್ಯ ರಸ್ತೆಯಲ್ಲಿ ಆದಿಜಾಂಬವ ರುದ್ರಭೂಮಿ ಇದ್ದು, ಇಲ್ಲಿ ಶವ ಸಂಸ್ಕಾರಕ್ಕೂ ನೆಮ್ಮದಿ ಇಲ್ಲದಂತಾಗಿದೆ. ಈ ಸ್ಮಶಾನದಲ್ಲಿ ಮೂಲ ಸೌಕರ್ಯವಿಲ್ಲ. ಶವ ಸಂಸ್ಕಾರಕ್ಕೆ ಬರುವ ಜನರಿಗೆ ಸ್ಮಶಾನದ ಆವರಣದಲ್ಲಿ ಯಥೇಚ್ಛವಾಗಿ ಬೆಳೆದು ನಿಂತಿರುವ ಪಾರ್ಥೇನಿಯಂ, ಗಿಡ ಬಳ್ಳಿ, ಮುಳ್ಳುಗಳು ತರಚುತ್ತವೆ. ಇದರಿಂದ ತಮ್ಮವರನ್ನು ಕಳೆದುಕೊಂಡು ದುಃಖದಲ್ಲಿ ಬರುವವರಿಗೆ ಮತ್ತಷ್ಟು ನೋವನ್ನುಂಟು ಮಾಡುತ್ತಿದೆ. ಶವ ಸಂಸ್ಕಾರಕ್ಕೆ ಬರುವ ಜನರಿಗೆ ಕುಳಿತು ಕೊಳ್ಳಲು ಕಲ್ಲು ಬೆಂಚುಗಳಿಲ್ಲ ಹಾಗೂ ಕೈಕಾಲು ತೊಳೆದುಕೊಳ್ಳಲು ನೀರಿನ ವ್ಯವಸ್ಥೆಯಂತೂ ಇಲ್ಲವೇ ಇಲ್ಲ. ಜೊತೆಗೆ ಇಲ್ಲಿ ಸ್ವಚ್ಛತೆಯೂ ಇಲ್ಲದಂತಾಗಿದೆ. ಇಷ್ಟೆಲ್ಲಾ ಅವ್ಯವಸ್ಥೆಯಿಂದ ಕೂಡಿದ ಈ ರುದ್ರಭೂಮಿಯಲ್ಲಿ 'ಸ್ಮಶಾನ ಅಭಿವೃದ್ಧಿ ಯೋಜನೆ'ಯಡಿ ಮೈಸೂರು ಮಹಾನಗರ ಪಾಲಿಕೆ ಕೂಡಲೇ ಬೆಳೆದು ನಿಂತಿರುವ ಗಿಡಗಂಟಿಗಳನ್ನು ಸ್ವಚ್ಛಗೊಳಿಸಿ ಹಾಗೂ ಕೈಕಾಲು ತೊಳೆದು ಕೊಳ್ಳಲು ಸಾಲು ನಲ್ಲಿಗಳನ್ನು, ಕುಳಿತುಕೊಳ್ಳಲು ಕಲ್ಲು ಬೆಂಚುಗಳನ್ನು ಹಾಕಿ ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡಬೇಕೆಂದು ಪಾಲಿಕೆ ಆಯುಕ್ತರಲ್ಲಿ ಮನವಿ. **–ಎಸ್. ರಾಜಗೋಪಾಲ್, ಗಾಂಧಿನಗರ, ಮೈಸೂರು.**

■ ಕ್ರೀಡಾ ದಿನವನ್ನೇ ಮರೆತ ಮಾಧ್ಯಮಗಳು

ಮಾನ್ಯರೆ,

ವಿಶ್ವ ಕಂಡ ಅಪರೂಪದ ಹಾಕಿ ಮಾಂತ್ರಿಕ ಮೇಜರ್ ಧ್ಯಾನ್ ಚಂದ್ ಭಾರತೀಯ ಕ್ರೀಡಾರಂಗದ ಅನರ್ಘ್ಯ ರತ್ನ. ಬ್ರಿಟಿಷ್ ಆಡಳಿತದ ವ್ಯವಸ್ಥೆಯಲ್ಲೂ ಭಾರತದ ಕ್ರೀಡಾರಂಗವನ್ನು ಎತ್ತರಕ್ಕೇರಿಸಿದ ಅದ್ಭುತ ಹಾಕಿ ಆಟಗಾರ ಧ್ಯಾನ್ ಚಂದ್. ಭಾರತದ ಕ್ರೀಡಾ ಭೂಪಟದಲ್ಲಿ ಈ ಮಹಾನ್ ಆಟಗಾರನಿಗೆ ಸರಿಸಾಟಿಯಾದ ಆಟಗಾರ ಮತ್ತೊಬ್ಬರಿಲ್ಲ. ಇಂತಹ ಮಹಾನ್ ಕ್ರೀಡಾಪಟುವನ್ನು ಸ್ಮರಿಸುವ ಉದ್ದೇಶದಿಂದ ಭಾರತ ಸರ್ಕಾರ ಧ್ಯಾನ್ ಚಂದ್ ಅವರ ಜನ್ಮದಿನವಾದ ಆಗಸ್ಟ್ 29ರಂದು ರಾಷ್ಟ್ರೀಯ ಕ್ರೀಡಾ ದಿನವನ್ನಾಗಿ ಆಚರಿಸುತ್ತಿದೆ. ರಾಜಕೀಯ ಕೆಸರಾಟವನ್ನು ಪ್ರಸಾರ ಮಾಡುವ ನಮ್ಮ ಮಾಧ್ಯಮಗಳು, ದಿನಪತ್ರಿಕೆಗಳು ಇಂದು ರಾಷ್ಟ್ರೀಯ ಕ್ರೀಡಾ ದಿನವನ್ನೇ ಮರೆತಿವೆ. ಯಾವುದೇ ಮಾಧ್ಯಮಗಳಲ್ಲಿಯೂ ಇದರ ಬಗ್ಗೆ ಸುದ್ದಿಯೇ ಇಲ್ಲ. ಇನ್ನೂ ಕ್ರೀಡಾ ಕ್ಷೇತ್ರಕ್ಕೆ ಮಾನ್ಯತೆ ಎಲ್ಲಿ ದೊರಕುತ್ತದೆ. ಒಲಂಪಿಕ್ಸ್ ಮತ್ತು ವಿಶ್ವ ದರ್ಜೆಯ ಕ್ರೀಡಾಕೂಟದಲ್ಲಿ ಪದಕಗಳನ್ನು ಗೆಲ್ಲಬೇಕು ಎಂದು ಬಯಸುವ ಈ ದೇಶದಲ್ಲಿ ಕ್ರೀಡೆಗೆ ದೊರಕುವ ಬೆಂಬಲ ಇದೇ ಅಲ್ಲವೇ.

–ಕೆ.ಎಸ್.ಸುರೇಶ್, ಮುಖ್ಯ ಶಿಕ್ಷಕರು, ಸರಗೂರು.

■ ಗೃಹಲಕ್ಷ್ಮಿಯ ಲಕ್ಷ್ಮಿ ಬೇಕೆ?!

ಮಾನ್ಯರೆ,

ಗಂಗಾವತಿಯ ರಸ್ತೆ ಬದಿಯಲ್ಲಿ ಅಳವಡಿಸಿದ್ದ ವಿದ್ಯುತ್ ಕಂಬದಲ್ಲಿ ತಿರುಪತಿಯ ಮಾದರಿ ಚಿಹ್ನೆ ಇದ್ದುದರಿಂದ ಅವುಗಳನ್ನು ತೆರವುಗೊಳಿಸುವಂತೆ ಸಂಘಟನೆಯೊಂದರ ಕಾರ್ಯಕರ್ತರು ಮನವಿ ಸಲ್ಲಿಸಿದ ಮೇರೆಗೆ ಅಲ್ಲಿನ ತಹಸೀಲ್ದಾರ್ ಯು.ನಾಗರಾಜ್ ಅದನ್ನು ತೆರವುಗೊಳಿಸುವಂತೆ ಆದೇಶಿಸಿದ್ದು, ಇದಕ್ಕೆ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಅದೇ ದಿನ ಸಂಜೆ ಆದೇಶ ರದ್ದುಪಡಿಸಿದ್ದಾರೆ.

ಹಿಂದೂ ದೇವಾನುದೇವತೆಗಳ ಲಾಂಛನ, ಚಿಹ್ನೆಗಳನ್ನು ಪ್ರದರ್ಶಿಸಿದರೆ ಬೇರೆ ಧರ್ಮದವರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟಾಗುವುದಾದರೆ... ಕರ್ನಾಟಕ ಸರಕಾರದ ಮಹತ್ವಾಕಾಂಕ್ಷಿ ಯೋಜನೆಯಾದ 'ಗೃಹಲಕ್ಷ್ಮಿ' ಯೋಜನೆಯಲ್ಲಿರುವ ಹಿಂದೂ ದೇವತೆ 'ಲಕ್ಷ್ಮಿ'ಯ ಹೆಸರಿನಿಂದ ಬೇರೆ ಧರ್ಮದವರ ಧಾರ್ಮಿಕ ಭಾವನೆಗೆ ಧಕ್ಕೆ ಉಂಟಾಗುವುದಿಲ್ಲವೇ?

ಈ ವಿಚಾರವಾಗಿ ಆ ಸಂಘಟನೆಯ ಕಾರ್ಯಕರ್ತರು ಮನವಿ ಸಲ್ಲಿಸಿದರೆ ಗೃಹಲಕ್ಷ್ಮಿ ಯೋಜನೆಯನ್ನೂ ನಿಲ್ಲಿಸಲಾಗುವುದೇ? ಹಸುವು ಕಪ್ಪಾದರೇನು ಹಾಲು ಕಪ್ಪೇ ವಿಠಲಾ... ಎಂಬಂತೆ ವಿದ್ಯುತ್ ಕಂಬದಲ್ಲಿ ದೇವರ ಚಿಹ್ನೆಗಳಿದ್ದ ಮಾತ್ರಕ್ಕೆ ಆ ಕಂಬದಲ್ಲಿರುವ ವಿದ್ಯುದ್ದೀಪದ ಬೆಳಕು ಯಾರ ಭಾವನೆಗಾದರೂ ಧಕ್ಕೆ ತರುವುದೇ?

ಗೃಹಲಕ್ಷ್ಮೀ ಯೋಜನೆಯಲ್ಲಿರುವ ಲಕ್ಷ್ಮಿಯನ್ನು ಪ್ರೀತಿಸುವವರು ವಿದ್ಯುತ್ ಕಂಬದಲ್ಲಿರುವ ದೇವರನ್ನು ವಿರೋಧಿಸಲು ಹೇಗೆ ಸಾಧ್ಯವಾಯಿತು?

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು

■ ವ್ಯಕ್ತಿಯನ್ನು ಜಾತಿಯಿಂದ ಬಿಂಬಿಸುವುದನ್ನು ಬಿಡಬೇಕಿದೆ

ಮಾನ್ಯರೆ,

ರಾಜ್ಯದ ರಾಜಕೀಯದಲ್ಲಿ ಇದೀಗ ಜಾತಿ ಅಸ್ತ್ರವನ್ನು ಮುಂದಿಟ್ಟುಕೊಂಡು ಆಡಳಿತ ಹಾಗೂ ಪ್ರತಿಪಕ್ಷಗಳು ಜಟಾಪಟಿಗೆ ಇಳಿದಿರುವುದು ವಿಪರ್ಯಾಸ. ರಾಷ್ಟ್ರಕವಿ ಕುವೆಂಪು ಅವರು ಹೇಳಿರುವಂತೆ ನಾವೆಲ್ಲರೂ ವಿಶ್ವಮಾನವರು. ಹೀಗಾಗಿ ಮನುಷ್ಯನೊಬ್ಬನನ್ನು ಜಾತಿ–ಧರ್ಮಗಳ ಅಡಿಯಲ್ಲಿ ಬಿಂಬಿಸುವ ನೀಚತನ ಯಾರಿಗೂ ಇರಬಾರದು. ಏಕೆಂದರೆ ಜಾತಿ–ಧರ್ಮಗಳ ಹೆಸರಿನಲ್ಲಿ ವ್ಯಕ್ತಿಯನ್ನು ಬಿಂಬಿಸಿದರೆ ವಿಶ್ವಮಾನವ ಸಂದೇಶಕ್ಕೆ ಚ್ಯುತಿ ತಂದಂತಾಗುತ್ತದೆ. ಜಾತಿಯಿಂದ ಯಾರೂ ಮನುಷ್ಯರಾಗುವುದಿಲ್ಲ. ಇಷ್ಟಕ್ಕೂ ಈ ವ್ಯಕ್ತಿ ಇಂತಹ ಜಾತಿಯಾದ ಕಾರಣಕ್ಕೆ ಆತನನ್ನು ಜರಿಯಲಾಗುತ್ತಿದೆ, ಹೀಯ್ಯಾಳಿಸಲಾಗುತ್ತಿದೆ... ಅಂತ ನಾವುಗಳೇ ಬಿಂಬಿಸಿದರೆ ನಿಜಕ್ಕೂ ಅಂತಹ ಹೇಳಿಕೆಗಳಿಂದಲೇ ಆತನ ಜಾತಿಹರಣ ಮಾಡಿದಂತಾಗುವುದಿಲ್ಲವೇ? ಇಷ್ಟಕ್ಕೂ ಜಾತಿ ಸೂಚಕದಿಂದ ವ್ಯಕ್ತಿಯನ್ನು ಅಳೆಯುವುದರಿಂದ ನಾವುಗಳು ಸಾಧಿಸುವುದಾದರೂ ಏನಿದೆ? ಸಮಾಜದ ಸಾಮರಸ್ಯ ಹದಗೆಡಿಸಿ, ಮತೀಯ ಗಲಭೆಗಳನ್ನು ಸೃಷ್ಟಿಸಿ ಜಾತಿ ಜಾತಿಗಳ ಮಧ್ಯೆ ಭಿನ್ನಾಭಿಪ್ರಾಯಗಳನ್ನು ಸೃಷ್ಟಿಸಿದಂತಾಗುವುದಿಲ್ಲವೇ?

ಪ್ರತಿ ಜಾತಿಗೂ ತನ್ನದೇ ಆದಂತಹ ನೆಲೆ ಚೌಕಟ್ಟಿದೆ. ಹೀಗೆ ಪ್ರತಿ ಜಾತಿಗೂ ವ್ಯಕ್ತಿಯ ಲೇಪನ ಬಳಸಿ ಇಂತಹ ವ್ಯಕ್ತಿಯನ್ನು ಪ್ರಶ್ನಿಸುವುದರಿಂದ ಆತನ ಜಾತಿಯನ್ನೇ ಹರಣ ಮಾಡಿದಂತಾಗುತ್ತದೆ ಅಂತ ಬಿಂಬಿಸುವುದು ಮೂರ್ಖತನವಾದೀತು. ಹೀಗಾಗಿ ಯಾವುದೇ ವ್ಯಕ್ತಿಯನ್ನು ಜಾತಿಯಿಂದ ಬಿಂಬಿಸುವ ಪರಿಪಾಟ ತಪ್ಪಿಸಬೇಕಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ



ಬಿಚ್ಚು ನುಡಿ

ವಿಕ್ರಂ ಮುತ್ತಣ್ಣ

ಮುಡಾ ಹಗರಣ: ಆಯುಕ್ತರಿಬ್ಬರ ತನಿಖೆ ಆಗಬೇಕಲ್ಲವೇ?



ಒಂದರ ಹಿಂದೆ ಒಂದು ಹಗರಣ ಬಯಲಾಗುತ್ತಿದ್ದಂತೆ ಜೆಎಲ್‌ಬಿ ರಸ್ತೆಯ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಪ್ರಧಾನ ಕಚೇರಿಗೆ ಬಿಗಿ ಪೊಲೀಸ್ ಭದ್ರತೆ ಕಲ್ಪಿಸಲಾಗಿದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) ಭ್ರಷ್ಟಾಚಾರದ ದುರ್ವಾಸನೆ ಹೊರ ಸೂಸುತ್ತಿದ್ದ ಹಾಗೆ ಕರ್ನಾಟಕ ಆಡಳಿತ ಸೇವೆ (ಕೆಎಎಸ್)ಯ ಇಬ್ಬರು ಅಧಿಕಾರಿಗಳೇ ಇದರ ಸೂತ್ರದಾರರೆಂದು ದೂರಲಾಗುತ್ತಿದೆ.

ಅದು, ಹಿಂದೆ ಆಯುಕ್ತರಾಗಿದ್ದ ಡಾ. ಡಿ.ಬಿ. ನಟೇಶ್ ಹಾಗೂ ಜಿ.ಟಿ. ದಿನೇಶ್ ಕುಮಾರ್. ಇವರಲ್ಲಿ ಒಬ್ಬರು ಅವ್ಯವಹಾರ ಬಯಲಿಗೆ ಬರುವ ಮುನ್ನ ವರ್ಗಾವಣೆಗೊಂಡು ಸುರಕ್ಷಿತ ಗೂಡು ಸೇರಿದ್ದಾರೆ.

ಇನ್ನು ದಿನೇಶ್‌ಕುಮಾರ್, ಹಗರಣ ಬೆಳಕಿಗೆ ಬರುತ್ತಿದ್ದಂತೆ ಸಂಬಂಧಿಸಿದ ಇಲಾಖಾ ಸಚಿವರು 'ವರ್ಗಾವಣೆ ಮಂತ್ರ' ಜಪಿಸಿ ಅವರನ್ನು ರಾಜಧಾನಿ ಸೇರಿಸಿದರು. ಈಗ ಅವರಿಗೆ ಹಾವೇರಿ ವಿಶ್ವವಿದ್ಯಾನಿಲಯದಲ್ಲಿ ಪ್ರತಿಷ್ಠಿತ ಕುಲಸಚಿವ ಹುದ್ದೆ ದಯಪಾಲಿಸಲಾಗಿದೆ. ಏನಿದೇನಿದು...!

ಮುಡಾ ನಿವೇಶನ ಹಂಚಿಕೆ ಹಗರಣದಲ್ಲಿ ಇವರ ಪಾತ್ರ ಬೆಳಕಿಗೆ ಬರುತ್ತಿದ್ದಂತೆ ಅಬ್ಬಾ... ಎಂತಹ ಪ್ರಳಯಾಂತಕರಪ್ಪಾ ಎಂದು ಜನ ಉದ್ಗಾರ ತೆಗೆದರು.

ಆಯುಕ್ತರಾಗಿದ್ದ ಡಾ.ಡಿ.ಬಿ.ನಟೇಶ್ ಅತ್ಯಂತ ಘೋರ ನಿರ್ಧಾರಕ್ಕೆ ಹೆಸರುವಾಸಿಯಾದರೆ, ಅವರ ಉತ್ತರಾಧಿಕಾರಿಯಾಗಿ ಬಂದ ಜಿ.ಟಿ.ದಿನೇಶ್‌ಕುಮಾರ್, ತಾನೇನು ಕಮ್ಮಿಯಲ್ಲ ಎಂಬಂತೆ ಭಯಾನಕ ತೀರ್ಮಾನ ಕೈಗೊಂಡಂತಹವರು.

ಈ ಇಬ್ಬರು ಅಧಿಕಾರಿಗಳ ನಿರಂಕುಶ ಮತಿ, ಅಜಾಗರೂಕ ನಿರ್ಧಾರಗಳು ರಾಜ್ಯಕ್ಕೆ ಭಾರೀ ಪ್ರಮಾಣದ ಆದಾಯ ನಷ್ಟ ಉಂಟು ಮಾಡಿದ್ದು, ಜೊತೆಗೆ ಮೈಸೂರಿನ ಅಸಂಖ್ಯಾತ ನಿವಾಸಿಗಳಿಗೆ ಸೂರಿಲ್ಲದಂತೆ ಮಾಡಿದೆ.

ಒಂದು ಕಾಲದಲ್ಲಿ ಐಎಎಸ್, ಐಪಿಎಸ್ ಹಾಗೂ ಕೆಎಎಸ್ ಹುದ್ದೆಗಳಿಗಿದ್ದ ಘನತೆ ಮತ್ತು ಗೌರವಗಳು ಕೆಲವು ವರ್ಷಗಳಿಂದೀಚೆಗೆ ಗಮನಾರ್ಹವಾಗಿ ಕುಸಿಯುತ್ತಾ ಬಂದಿದೆ.

1935ರಲ್ಲಿಯೇ ಪಂಡಿತ್ ಜವಾಹರಲಾಲ್ ನೆಹರೂ ಅವರು ಉನ್ನತ ಸೇವೆಗಳಲ್ಲಿ ಅದರಲ್ಲೂ ವಿಶೇಷವಾಗಿ ಭಾರತೀಯ ನಾಗರಿಕ ಸೇವೆಯಲ್ಲಿ ಪ್ರಗತಿ ಶೀಲತೆ, ನೈತಿಕತೆ ಹಾಗೂ ಬೌದ್ಧಿಕತೆ ಕುಸಿಯುತ್ತಿದೆ ಎಂದು ಹೇಳಿದ್ದರು.

ಅದಾಗ್ಯೂ, ಅವರ ಸಮಕಾಲೀನರೇ ಆದ, ಗೃಹ ಸಚಿವ ವಲ್ಲಭಬಾಯ್ ಪಟೇಲರು ನೆಹರೂರವರ ಅಭಿಪ್ರಾಯಗಳಿಗೆ ಅಸಮ್ಮತಿಸಿ, ಇವರು ರಾಷ್ಟ್ರೀಯ ಐಕ್ಯತೆಯ ರೂವಾರಿಗಳು, ಆಡಳಿತದಲ್ಲಿ ಅವರ ಪರಿಣತಿ ಇಲ್ಲದೆ ಹೋಗಿದ್ದರೆ, ಆಗಷ್ಟೇ ಸ್ವತಂತ್ರಗೊಂಡ ಭಾರತದಲ್ಲಿ (1947) ಅರಾಜಕತೆ ಉಂಟಾಗುತ್ತಿತ್ತು ಎಂದು ನಾಗರಿಕ ಸೇವಾ ವರ್ಗವನ್ನು ಸಮರ್ಥಿಸಿಕೊಂಡಿದ್ದರು.

ದುರದೃಷ್ಟವಶಾತ್, ಇಂದಿನ ಅಧಿಕಾರಿ ವರ್ಗ ಆಗಿಂದಾಗ್ಗೆ ಎಚ್ಚೆತ್ತು ತಡೆಗಟ್ಟಬೇಕಿದ್ದ ಅವ್ಯವಸ್ಥೆಯನ್ನು ಶಾಶ್ವತಗೊಳಿಸುತ್ತಿದ್ದಾರೆ. ಅಲ್ಲದೇ ರಾಜಕೀಯ ಪ್ರಭಾವದ ಸೂತ್ರಧಾರಿಗಳಾಗಿ, ಸಾರ್ವಜನಿಕ ಸೇವೆಗೆ ಬದಲಾಗಿ ಭ್ರಷ್ಟಾಚಾರದ ಮೂಲಕ ಸ್ವಯಂ ಸೇವೆಯಲ್ಲಿ ತೊಡಗಿದ್ದಾರೆ.




ಡಾ. ಡಿ.ಬಿ. ನಟೇಶ್ ದಿನೇಶ್ ಕುಮಾರ್

ಎನ್‌ಡಿಎ ಅಧಿಕಾರಾವಧಿಯಲ್ಲಿ, ಕೇಂದ್ರ ಸಚಿವರಾಗಿದ್ದ ಸುರೇಶ್ ಪ್ರಭು ಅಧಿಕಾರಿ ವರ್ಗವು ವ್ಯವಸ್ಥೆಯ ಚೆಕ್ (Checks- ಪರಿಶೀಲಕ) ಆಗಿರಬೇಕೆಂದು ಹೇಳಿದ್ದರು. ಆದರೆ, ಈ ವರ್ಗ ಬೇಲಿಯೇ ಎದ್ದು ಹೊಲ ಮೇಯ್ದಂತೆ ಚೆಕ್‌ಬುಕ್ (Cheques) ಆಗಿ ಪರಿವರ್ತನೆಗೊಂಡಿರುವುದು ದುರದೃಷ್ಟಕರ ಮಾತ್ರವಲ್ಲ ಅತ್ಯಂತ ಆತಂಕಕಾರಿ ಸಂಗತಿ.

ಒಂದು ವೇಳೆ ಅಧಿಕಾರಿ ವರ್ಗ ರಾಜಕೀಯ ನಾಯಕರ ಬೆಂಬಲ ಹೊಂದಿದ್ದರಂತೂ ಮುಗಿಯಿತು. ಸಂಪೂರ್ಣವಾಗಿ ಭ್ರಷ್ಟಾಚಾರದಲ್ಲಿ ತೊಡಗಿ, ಕಾನೂನುಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗಿ ಬಿಡುತ್ತದೆ.

> **"ಈ ಇಬ್ಬರು ಅಧಿಕಾರಿಗಳ ಬ್ರಹ್ಮಾಂಡ ಭ್ರಷ್ಟಾಚಾರ, ಗೋಲ್‌ಮಾಲ್ ಸಾಕಷ್ಟು ಪ್ರಮಾಣದಲ್ಲಿ ಬಹಿರಂಗಗೊಂಡರೂ, ಇದುವರೆಗೂ ಅವರನ್ನು, ಸೇವೆಯಿಂದ ಅಮಾನತು ಪಡಿಸುವುದಿರಲಿ, ಕಡ್ಡಾಯ ರಜೆಯ ಮೇಲೆ ತೆರಳುವಂತೆಯೂ ಸೂಚಿಸದಿರುವುದು ಅವರಿಗೆ ರಾಜಕೀಯ ಪ್ರಭಾವ ಎಷ್ಟರಮಟ್ಟಿಗಿದೆ ಎಂಬುದರ ದ್ಯೋತಕವಾಗಿದೆ.**

ಡಾ.ನಟೇಶ್ ಅವರ ವಿವಾದಾತ್ಮಕ ಕ್ರಮಗಳು, ಬಿಜೆಪಿ ಅಧಿಕಾರಾವಧಿಯಲ್ಲಿ ನಡೆದಿವೆ. ಪಕ್ಷದ ಓರ್ವ ಹಿರಿಯ ಮುಖಂಡರ ಅಭಿರಕ್ಷೆಯಲ್ಲೇ ಎಲ್ಲವೂ ನಡೆಯಿತು ಎಂದು ಆರೋಪಿಸಲಾಗುತ್ತಿದೆ.

ಅದೇ ರೀತಿಯಲ್ಲಿ ದಿನೇಶ್ ಕುಮಾರ್ ಅಕ್ರಮಗಳು ಕಾಂಗ್ರೆಸ್ ಆಡಳಿತಾವಧಿಯಲ್ಲಿ, ಅದು ಸಂಬಂಧಿಸಿದ ಹಾಲಿ ಪ್ರಭಾವಿ ಸಚಿವರೊಬ್ಬರ ಬೆಂಗಾವಲಿನಲ್ಲೇ ನಡೆದಿವೆ ಎಂದು ದೂರಲಾಗುತ್ತಿದೆ.

ಮೈಸೂರಿನ ಹಿಂದಿನ ಜಿಲ್ಲಾಧಿಕಾರಿ ಡಾ. ರಾಜೇಂದ್ರ, ಈ ಅಧಿಕಾರಿಗಳು ಮಾಡುತ್ತಿದ್ದ ಕಾನೂನುಬಾಹಿರ ಕೆಲಸವನ್ನು ನಿಲ್ಲಿಸುವಂತೆ ಬರೆದಿದ್ದ ಪತ್ರವನ್ನು ನಿರ್ಲಕ್ಷಿಸುವ ಉದ್ಧಟತನವನ್ನು ಈ ಅಧಿಕಾರಿಗಳು ತೋರಿಸಿದ್ದರ ಹಿಂದೆ ಇವರಿಗೆ ರಾಜಕೀಯ ನಾಯಕರ ಕೃಪಾಕಟಾಕ್ಷ ಇದ್ದದ್ದನ್ನು ರುಜುವಾತುಪಡಿಸುತ್ತದೆ.

ಈ ಇಬ್ಬರು ಅಧಿಕಾರಿಗಳ ಬ್ರಹ್ಮಾಂಡ ಭ್ರಷ್ಟಾಚಾರ, ಗೋಲ್‌ಮಾಲ್ ಸಾಕಷ್ಟು ಪ್ರಮಾಣದಲ್ಲಿ ಬಹಿರಂಗಗೊಂಡರೂ, ಇದುವರೆಗೂ ಅವರನ್ನು ಸೇವೆಯಿಂದ ಅಮಾನತು ಪಡಿಸುವುದಿರಲಿ, ಕಡ್ಡಾಯ ರಜೆಯ ಮೇಲೆ ತೆರಳುವಂತೆಯೂ ಸೂಚಿಸದಿರುವುದು ಅವರಿಗೆ ರಾಜಕೀಯ ಪ್ರಭಾವ ಎಷ್ಟರಮಟ್ಟಿಗಿದೆ ಎಂಬುದರ ದ್ಯೋತಕವಾಗಿದೆ.

ಅಧಿಕಾರಿ ವರ್ಗದ ಸುಧಾರಣೆಯ ಅಗತ್ಯವನ್ನು ಈ ಪ್ರಕರಣ ಕಣ್ಣಿಗೆ ರಾಚುವಂತೆ ಮಾಡಿದೆ. ಒಂದು ಕಾಲದಲ್ಲಿ ಭಾರತದ ಉಕ್ಕಿನ ಕವಚ ಎಂದೇ ಭಾವಿಸಲಾಗಿದ್ದ ನಾಗರಿಕ ಸೇವೆಗಳು ಈಗ ತುಕ್ಕು ಹಿಡಿದಿದೆ.

ಪ್ರಾಮಾಣಿಕತೆ ಮತ್ತು ಉತ್ತರದಾಯಿತ್ವವನ್ನು ಪುನರ್ ಸ್ಥಾಪಿಸಲು ಸಾರ್ವಜನಿಕ ಸೇವಾ ವರ್ಗದಲ್ಲಿ (public servant) ಪ್ರಾಸಿಕ್ಯೂಷನ್ (ಅಭಿಯೋಜನೆ) ಎಂಬ ಭಯ ಇರಬೇಕು. ಆದರೂ ಭ್ರಷ್ಟ ಅಧಿಕಾರಿಗಳನ್ನು ಶಿಕ್ಷೆಗೆ ಒಳಪಡಿಸುವುದು ಒಂದು ರೀತಿ ಸುರುಳಿಯಂತೆ ಸುತ್ತಿಕೊಂಡಿರುವ ಪ್ರಕ್ರಿಯೆಯಾಗಿದೆ. ಇಂತಹ ಕ್ಲಿಷ್ಟಕರ ಪ್ರಕ್ರಿಯೆ ಭ್ರಷ್ಟ ನೌಕರರಲ್ಲಿ ಧೈರ್ಯ ತುಂಬುತ್ತದೆ.

ಕೆಎಎಸ್ ಅಧಿಕಾರಿಗಳಾದ ಈ ಇಬ್ಬರು ಆಯುಕ್ತರನ್ನು ಒಳಗೊಂಡ ಪ್ರಸಕ್ತ ಪ್ರಕರಣದಲ್ಲಿ, ಕ್ರಮಕ್ಕೆ ಮುಂದಾದರೆ ಇವರ ದುರ್ನಡತೆ, ಕರ್ತವ್ಯಲೋಪಕ್ಕೆ ಸಂಬಂಧಿಸಿದಂತೆ ಪೂರಕ ದಾಖಲೆಗಳ ಸಹಿತ ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಯವರಿಗೆ ಪತ್ರ ಬರೆಯುವುದರೊಂದಿಗೆ ಕ್ರಮದ ಪ್ರಕ್ರಿಯೆ ಪ್ರಾರಂಭವಾಗುತ್ತದೆ.

ಈ ದೂರು ನಂತರ, ಕೆಎಎಸ್ ಅಧಿಕಾರಿಗಳ ನಿಯಂತ್ರಣಾಧಿಕಾರಿಗಳಾದ ಮುಖ್ಯ ಕಾರ್ಯದರ್ಶಿಯವರಿಗೆ ಹೋಗುತ್ತದೆ. ದೂರಿನ ಪ್ರತಿಯನ್ನು ರಾಜ್ಯಪಾಲರು ಹಾಗೂ ಲೋಕಾಯುಕ್ತರಿಗೂ ಸಲ್ಲಿಸಲಾಗುತ್ತದೆ.

ಒಂದು ವೇಳೆ, ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಯವರು ಆರೋಪಿತ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲು ಸಕಾರಣಗಳಿವೆ ಎಂದು ಮನಗಂಡರೆ, ಆಗ ರಾಜ್ಯದ ಮುಖ್ಯ ಕಾರ್ಯದರ್ಶಿಗಳು ಆರೋಪಿತ ಅಧಿಕಾರಿಗಳಿಗೆ "ಕಾರಣ ಕೇಳಿ ನೋಟಿಸ್" (show cause notice) ನೀಡಬಹುದು.

ಅಂತಹ ಸಮಯದಲ್ಲಿ ಸದರಿ ಆರೋಪಿತ ಅಧಿಕಾರಿಗಳು ನೋಟಿಸ್‌ಗೆ ಸಮಜಾಯಿಷಿ (explanation) ನೀಡಬೇಕಾಗುತ್ತದೆ.

ಅಂತಹ ಅಧಿಕಾರಿ ನೀಡುವ ವಿವರಣೆ ಒಂದು ವೇಳೆ ತೃಪ್ತಿಕರವಾಗಿಲ್ಲವೆಂದು ಕಂಡು ಬಂದರೆ, ಸದರಿ ಅಧಿಕಾರಿ ವಿರುದ್ಧ–ಆಂತರಿಕ ಇಲ್ಲವೆ ಬಾಹ್ಯ–ಇಲಾಖಾ ವಿಚಾರಣೆ ನಡೆಸಲಾಗುವುದು.

ಅಂತಹ ವಿಚಾರಣೆಯಲ್ಲಿ, ಸಿವಿಲ್ ಸ್ವರೂಪದ ಅಪರಾಧಗಳು ಕಂಡು ಬಂದರೆ ಸದರಿ ಅಧಿಕಾರಿಯು, ಸೇವಾ ನಿಯಮಗಳ ಅಡಿಯಲ್ಲಿ ಶಿಕ್ಷೆಗೆ ಒಳಗಾಗಬೇಕಾಗುತ್ತದೆ. ಒಂದು ವೇಳೆ ಅಪರಾಧದ ಸ್ವರೂಪವು 'ಕ್ರಿಮಿನಲ್' ಆಗಿದ್ದರೆ, ಅಂತಹ ಪ್ರಕರಣವನ್ನು ನ್ಯಾಯಾಲಯದ ಮುಂದೆ ಕೊಂಡೊಯ್ಯಲಾಗುತ್ತದೆ. ಇದು ಸೇವೆಯಿಂದ ವಜಾ ಹಾಗೂ ಶಿಕ್ಷೆಯನ್ನು ಒಳಗೊಂಡಿರುತ್ತದೆ.

ಶೀಘ್ರ ಕ್ರಮಕ್ಕಾಗಿ, ರಾಜ್ಯದ ಲೋಕಾಯುಕ್ತರು ವಿಚಾರಣೆ ನಡೆಸಿ, ತಮ್ಮ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಬಹುದು. ಆದರೆ ಇದಕ್ಕೆ ರಾಜ್ಯ ಸರ್ಕಾರದ ಒಪ್ಪಿಗೆ ಬೇಕಾಗುತ್ತದೆ. ಸದರಿ ಮುಡಾ ಪ್ರಕರಣದಲ್ಲಿ ಈ ಸಾಧ್ಯತೆ ಇರಲಿಕ್ಕಿಲ್ಲ ಎಂದು ತೋರುತ್ತದೆ.

> **"ಈ ನಡುವೆ ಬಿಜೆಪಿ ವಲಯದ ಮೌನವು ಕಿವುಡುತನದಂತಿದೆ. ಭಾರತೀಯ ಜನತಾ ಪಕ್ಷ ಈ ವಿಷಯವಾಗಿ ಕನಿಷ್ಠ ಒಂದು ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ (ಪಿಐಎಲ್) ಯನ್ನೂ ಸಕ್ಷಮ ನ್ಯಾಯಾಲಯದಲ್ಲಿ ದಾಖಲಿಸಿಲ್ಲ ಇಲ್ಲವೇ ಸಿಬಿಐ ತನಿಖೆಗೆ ಆಗ್ರಹ ಪಡಿಸಿಲ್ಲವೇಕೆ? ಈ ವಿಷಯವಾಗಿ ಬಿಜೆಪಿ 'ಬೊಬ್ಬೆ ಜನತಾ ಪಾರ್ಟಿ' ಅಷ್ಟೇ ಎಂದು ಜನ ಆಡಿಕೊಳ್ಳುವಂತಾಗಿದೆ.**

ಬದಲಾಗಿ, ರಾಜ್ಯಪಾಲರು ಪ್ರಕರಣವನ್ನು ತನಿಖೆ ಮಾಡಲು ಮುಖ್ಯ ಕಾರ್ಯದರ್ಶಿಯವರಿಗೆ ಸೂಚಿಸಿ, ವರದಿಯನ್ನು ಕಾಲ ಮಿತಿಯೊಳಗೆ ಸಲ್ಲಿಸಲು ಆದೇಶಿಸಬಹುದು. ಇಂತಹ ಕ್ರಮ ಅಭಿಯೋಜನೆಗೆ ಪೂರಕವಾಗಬಹುದು.

ಅಂತಿಮವಾಗಿ, ಕರ್ನಾಟಕ ಆಡಳಿತ ಸೇವೆಯ (ಕೆಎಎಸ್) ಅಧಿಕಾರಿಗಳ ಉತ್ತರ ದಾಯಿತ್ವ (accountability) ಇವರ ಮೇಲಧಿಕಾರಿಗಳಾಗಿರುವ ಐಎಎಸ್ ಅಧಿಕಾರಿಗಳನ್ನು ಅಥವಾ ಬಾಹ್ಯ ನ್ಯಾಯಾಧೀಶರನ್ನು ಅವಲಂಭಿಸಿರುತ್ತದೆ. ಇವರು ಆರೋಪಿತ ಅಧಿಕಾರಿಗಳನ್ನು ಹೊಣೆಗಾರರನ್ನಾಗಿಸುತ್ತಾರೆಯೇ? ಯಾವ್ದೋ ವರ್ಗನೂ ಹಾಗೆ ಆಶಿಸಬಹುದು ಮಾತ್ರ.

ಈ ನಡುವೆ ಬಿಜೆಪಿ ವಲಯದ ಮೌನವು ಕಿವುಡುತನದಂತಿದೆ. ಭಾರತೀಯ ಜನತಾ ಪಕ್ಷ ಈ ವಿಷಯವಾಗಿ ಕನಿಷ್ಠ ಒಂದು ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ (ಪಿಐಎಲ್) ಯನ್ನು ಸಕ್ಷಮ ನ್ಯಾಯಾಲಯದಲ್ಲಿ ದಾಖಲಿಸಿಲ್ಲ ಇಲ್ಲವೇ ಸಿಬಿಐ ತನಿಖೆಗೆ ಆಗ್ರಹಪಡಿಸಿಲ್ಲವೇಕೆ? ಈ ವಿಷಯವಾಗಿ ಬಿಜೆಪಿ 'ಬೊಬ್ಬೆ ಜನತಾ ಪಾರ್ಟಿ' ಅಷ್ಟೇ ಎಂದು ಜನ ಆಡಿಕೊಳ್ಳುವಂತಾಗಿದೆ.

ಈ ನಿಟ್ಟಿನಲ್ಲಿ ರಾಜ್ಯದ ಪ್ರಮುಖ ವಿರೋಧ ಪಕ್ಷ ಹಾಗೂ ಕೇಂದ್ರದಲ್ಲಿ ಆಡಳಿತ ಪಕ್ಷವಾಗಿರುವ ಭಾರತೀಯ ಜನತಾ ಪಕ್ಷದ ನಿಷ್ಕ್ರಿಯತೆಯು ದಿಗ್ಭ್ರಮೆ ಉಂಟು ಮಾಡುವಂತಿದೆ.

ಭ್ರಷ್ಟಾಚಾರ ವಿಚಾರಕ್ಕೆ ಸಂಬಂಧಿಸಿದ ಹಾಗೆ ಮಾಜಿ ಪ್ರಧಾನಿ ಮನಮೋಹನ್ ಸಿಂಗ್‌ರವರ ಮೌನವನ್ನು ಲೇವಡಿ ಮಾಡುತ್ತಾ ಅವರನ್ನು "ಮೌನ ಮೋಹನ್ ಸಿಂಗ್" ಎಂದು ಬಿಜೆಪಿ ಅಪಹಾಸ್ಯ ಮಾಡುತ್ತಿತ್ತು.

ಅದೇ ಭ್ರಷ್ಟಾಚಾರ ವಿಷಯಕ್ಕೆ ಸಂಬಂಧಿಸಿದಂತೆ, ಹಾಲಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಸಹ " ಮೌನ ದಾಮೋದರದಾಸ್ ಮೋದಿ" ಆಗಿದ್ದಾರೇನೋ ಎಂದು ತೋರುತ್ತದೆ. ಇದೊಂದು ರೀತಿ ದುರದೃಷ್ಟಕರ ಸಂಗತಿ.

ಒಂದು ವೇಳೆ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ವಿಕಾಸ ಭಾರತ (ಅಭಿವೃದ್ಧಿ ಹೊಂದಿದ ಭಾರತ) ನೋಡ ಬಯಸುವುದಾದರೆ, ಅವರು ಮೊದಲು ಭಾರತೀಯ ಅಧಿಕಾರಿ ವರ್ಗದಲ್ಲಿನ ಅಪನಂಬಿಕೆಯನ್ನು ಕೊನೆಗೊಳಿಸಲು ಪ್ರಯತ್ನಿಸಬೇಕಿದೆ.

ಅಲ್ಲಿಯವರೆಗೆ, ಅತ್ಯಂತ ಭಯಾನಕ ಹಾಗೂ ಘೋರವಾದ ನಾಗರಿಕ ಸೇವಾ ವರ್ಗದ ಜೊತೆ ನಾವು ಹೆಣಗಾಡಲೇಬೇಕಿದೆ.

email: vikram@starofmysore.com

ಜನರ ಆಶೀರ್ವಾದ ಇರುವವರೆಗೆ ನನ್ನ ಯಾರೂ ಅಲುಗಾಡಿಸಲಾಗಲ್ಲ



ರಾಣೆಬೆನ್ನೂರು, ಆ.30– ಜನರ ಆಶೀರ್ವಾದ ಇರುವವರೆಗೆ ನನ್ನನ್ನು ಯಾರೂ ಅಲುಗಾಡಿಸಲು ಸಾಧ್ಯವಿಲ್ಲ ಎಂದು ಸಿಎಂ ಸಿದ್ದರಾಮಯ್ಯ ಅವರು ವಿಪಕ್ಷಗಳಿಗೆ ಟಾಂಗ್ ನೀಡಿದರು. ರಾಣೆಬೆನ್ನೂರು ತಾಲೂಕು ದೇವರಗುಡ್ಡದಲ್ಲಿ ಸಂಗೊಳ್ಳಿ ರಾಯಣ್ಣ ಪ್ರತಿಮೆ ಉದ್ಘಾಟಿಸಿ ಮಾತನಾಡಿದ ಅವರು, ಜಾತಿ ವ್ಯವಸ್ಥೆಯ ಈ ಸಮಾಜದಲ್ಲಿ ಅತ್ಯಂತ ಕಟ್ಟಕಡೆಯ ವ್ಯಕ್ತಿಗೂ ಅವಕಾಶ ಸಿಗಬೇಕು ಎಂದು ಮಹಾತ್ಮಾಗಾಂಧಿ ಹೇಳಿದ್ದರು. ಇದರಲ್ಲಿ ನಂಬಿಕೆ ಇಟ್ಟು ಕಾರ್ಯಕ್ರಮ ರೂಪಿಸುತ್ತಿದ್ದೇನೆ. ಇದೇ ವಿಪಕ್ಷದವರಿಗೆ ಹೊಟ್ಟೆಕಿಚ್ಚು. ಈ ಹೊಟ್ಟೆಕಿಚ್ಚಿನಿಂದ ಅವರೇ ನಾಶ ಆಗುತ್ತಾರೆಯೇ ಹೊರತು ನನ್ನನ್ನು ಅಲುಗಾಡಿಸಲು ಸಾಧ್ಯವಿಲ್ಲ ನಾನು ಯಾರಿಗೂ, ಯಾವುದೇ ಪಿತೂರಿ, ಷಡ್ಯಂತ್ರಕ್ಕೂ ಭಯಪಡುವವನಲ್ಲ. ಬ್ರಿಟಿಷರಿಗೆ ಸಿಂಹಸ್ವಪ್ನವಾಗಿದ್ದ ಗೆರಿಲ್ಲಾ ಸೇನಾನಿ ರಾಯಣ್ಣನನ್ನು ಬ್ರಿಟಿಷರಿಗೆ ಮೋಸದಿಂದ ಹಿಡಿದುಕೊಟ್ಟವರು ನಮ್ಮವರೇ. ಇಂಥಾ ದೇಶದ್ರೋಹಿಗಳು ನಮ್ಮೊಳಗೆ ಈಗಲೂ ಇದ್ದಾರೆ. ಇಂಥಾ ದೇಶದ್ರೋಹಿಗಳು ಎಲ್ಲಾ ಕಾಲದಲ್ಲೂ ಇರುತ್ತಾರೆ. ಇಂಥವರನ್ನು ನಾವು ಒಗ್ಗಟ್ಟಿನಿಂದ ಎದುರಿಸಬೇಕು, ಸೋಲಿಸಬೇಕು. ಸಂಗೊಳ್ಳಿ ರಾಯಣ್ಣನವರ ದೇಶಪ್ರೇಮ, ಹೋರಾಟ ಮನೋಭಾವವನ್ನು ನಾವು ರೂಢಿಸಿಕೊಂಡಾಗ ಮಾತ್ರ ರಾಯಣ್ಣನ ಆಶಯ ಈಡೇರುತ್ತದೆ ಎಂದಿದ್ದಾರೆ.

ಆಪರೇಷನ್ ಕಮಲದ ಮೂಲಕ ಸರ್ಕಾರವನ್ನು ಅಸ್ಥಿರಗೊಳಿಸಲು ಬಿಜೆಪಿ ಪ್ರಯತ್ನಿಸುತ್ತಿದ್ದು, ನಮ್ಮ ಶಾಸಕರು ದುಡ್ಡಿನ ಆಸೆಗೆ ಬಲಿಯಾಗುವುದಿಲ್ಲ. ಬಿಜೆಪಿಯವರು ಈ ನಿಟ್ಟಿನಲ್ಲಿ ಪ್ರಯತ್ನಿಸುತ್ತಿರುವುದು ನಿಜ ಎಂದು ಶಾಸಕ ರವಿ ಗಣಿಗ ನನ್ನ ಬಳಿಯೂ ಹೇಳಿದ್ದಾರೆ. ರಾಜ್ಯದಲ್ಲಿ ಬಿಜೆಪಿಯವರು ಎಂದಿಗೂ ಜನರ ಆಶೀರ್ವಾದದಿಂದ ಅಧಿಕಾರಕ್ಕೆ ಬಾರದೇ, ಆಪರೇಷನ್ ಕಮಲ ಮೂಲಕ, ಹಿಂಬಾಗಿಲಿನಿಂದ 2008, 2018ರಲ್ಲಿ ಅಧಿಕಾರಕ್ಕೆ ಬಂದಿದ್ದಾರೆ. ಬಿಜೆಪಿಯವರು ಇಂತಹ ಪ್ರಯತ್ನಕ್ಕೆ ಈಗಲೂ ಕೈಹಾಕಿದ್ದು, 136 ಶಾಸಕರ ಬಲವಿರುವ ನಮ್ಮ ಸರ್ಕಾರವನ್ನು ಅಭದ್ರಗೊಳಿಸುವುದು ಸುಲಭದ ಮಾತಲ್ಲ ಎಂದು ಹೇಳಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ
ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮನೆ ಬಾಡಿಗೆಗಿದೆ
2BHK, G/F, N/F
ಗಿರಿದರ್ಶಿನಿ ಲೇಔಟ್‌ನಲ್ಲಿ (ಟಿ.ನರಸೀಪುರ ರಸ್ತೆ, ಆಲನಹಳ್ಳಿ ಪಕ್ಕ) ಎಲ್ಲಾ ಸೌಕರ್ಯವುಳ್ಳ ಕಾರ್ನರ್ ಮನೆ ಬಾಡಿಗೆಗೆ ಇದೆ
9591901974, 9449082228

ಬೇಕಾಗಿದ್ದಾರೆ
ಜ್ಯೂಸ್ ಸೆಂಟರ್‌ನಲ್ಲಿ ಜ್ಯೂಸ್ ಮಾಡುವವರು ಬೇಕಾಗಿದ್ದಾರೆ. ಸಂಪರ್ಕಿಸಿ:
6362495993

ತಕ್ಷಣ ಬೇಕಾಗಿದ್ದಾರೆ
ಕಂಪನಿಯಲ್ಲಿ ಕೆಲಸ ಮಾಡಲು Electrician ಬೇಕಾಗಿದ್ದಾರೆ ಸಂಬಳ 23 ಸಾವಿರ ಸಂಪರ್ಕಿಸಿ: ಹರೀಶ್
9663311557

WANTED
CASHIER (MALE & FEMALE CANDIDATES)-2
CLEANING -4
FOR RESTAURANT
7022882207

HOUSE FOR SALE
ಮನೆ ಮಾರಾಟಕ್ಕಿದೆ
30x40 ಅಳತೆಯಲ್ಲಿ ನಿರ್ಮಿಸಿರುವ ಹೊಸ ವಾಸ್ತುವುಳ್ಳ ಮನೆ ಚಾಮುಂಡೇಶ್ವರಿ ರೈಲ್ವೆ ಲೇಔಟ್‌ನಲ್ಲಿ ಮಾರಾಟಕ್ಕಿದೆ. (ಕೆ.ಆರ್.ಎಸ್.ರೋಡ್)
Available with Clear Title & Cauvery Water Facility
9482746287

ಮಾರಾಟಕ್ಕಿದೆ
30x40 ಸೈಟ್ ಆದಿತ್ಯ ಸರ್ಕಲ್ ಹತ್ತಿರ
20x30 ಸೈಟ್ ದಟ್ಟಗಳ್ಳಿ
20x30 ಮನೆ+ಸೈಟ್ ಬೋಗಾದಿ 2ನೇ ಹಂತ. ಹಳೆ ಮನೆ ಹೊಸ ಮನೆ ಸೈಟ್ ಮಾರುವವರು, ಕೊಳ್ಳುವವರು ಸಂಪರ್ಕಿಸಿ:
9945042875

MUDA APPROVED SITES FOR SALE
ಗದ್ದಿಗೆ ರಸ್ತೆಯಲ್ಲಿರುವ ಸೆಂಟ್ ಫ್ರಾನ್ಸಿಸ್ ಸ್ಕೂಲ್ ಹಿಂಭಾಗದಲ್ಲಿರುವಂತಹ ಸುವರ್ಣ ನಗರ ಬಡಾವಣೆಯ ಪಕ್ಕದಲ್ಲಿರುವಂತಹ ಸಾನ್ವಿ ಬಡಾವಣೆಯಲ್ಲಿ 30x40, 30x43 ಅಳತೆಯ ಸೈಟ್‌ಗಳು ಮಾರಾಟಕ್ಕಿವೆ ಬೆಲೆ 24 ಲಕ್ಷ ನೆಗೋಷಿಯೆಬಲ್ ಸಂಪರ್ಕಿಸಿ:
7892846068, 9483862050
7829779070

SITE FOR SALE
30X50 S/F
Brammanandha sagara phase-1
8050821108

ಕೆಲಸಕ್ಕೆ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ ಪುರುಷರು:
ಇಲವಾಲ, ಬೆಳವಾಡಿ ಮನುಗನಹಳ್ಳಿ ಚೆಕ್ ಪೋಸ್ಟ್, ಜಟ್ಟಿಹುಂಡಿ, ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ಹೂಟಗಳ್ಳಿ, ಇಂಡಸ್ಟ್ರಿಯಲ್ ಏರಿಯಾ, ಮಾದಹಳ್ಳಿ, ಬೋಗಾದಿ ರೋಡ್, ಜವನಹಳ್ಳಿ, ದಾಸನಕೊಪ್ಪಲು, ರೂಪನಗರ ಆಸ್ಥಿ ಇದ್ದವರು ಸಂಪರ್ಕಿಸಿ:
8310098788

ಜಮೀನುಗಳು ಬೇಕಾಗಿದೆ
ಮೈಸೂರು ತಾಲ್ಲೂಕು ಜಯಪುರ ಇಲವಾಲ ವರುಣಾ ಹೋಬಳಿ ಸುತ್ತಮುತ್ತ ಬಡಾವಣೆ ಉದ್ದೇಶಕ್ಕಾಗಿ SC, ST ಜಮೀನುಗಳು ಪಿತ್ರಾರ್ಜಿತ ಸ್ವಯಾರ್ಜಿತ ಚಕ್ರ ಇನಾಂ ಮತ್ತು ಭೂಸುಧಾರಣೆ ಕಾಯ್ದೆ ಜಮೀನುಗಳು ಬೇಕಾಗಿದೆ.
9980710905
8310076853

SITE FOR SALE
ಆತ್ಮಾನಂದ ಸಾಗರ ಲೇಔಟ್ ಫೇಸ್ ನಂ.1, 1779 ಸ್ಕೇರ್ ಫೀಟ್
9620507480

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

FOR SALE
MUDA APPROVED Sites @ Bogadi, Rainbow School
2. 30x40, Sites Attach to Brahmins Layout, HD Kote Rd.
3. 70x140 Farm House Plots @ KRS Back Water Attach
4. 2 & 3 BHK Apartments at Ramakrishna Nagar, Mysore.
PRAKRUTHI PROPERTIES
95386 90359, 90359 90359

Sudarshan Saur
SOLAR WATER HEATER
ATTRACTIVE OFFER
ಸೇಲ್ಸ್ & ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಸೂಪರ್‌ವೈಸರ್ (8hrs/12hrs)
2) ಸೆಕ್ಯೂರಿಟಿ ಗಾರ್ಡ್ (8hrs/12hrs)
(ಹೂಟಗಳ್ಳಿ, ಒಂಟಿಕೊಪ್ಪಲ್, ವಿಜಯನಗರ, ಹೆಬ್ಬಾಳು, ಬಂಬೂಬಜಾರ್, ಬನ್ನಿಮಂಟಪ)
9739166772

ಕೆಲಸಕ್ಕೆ ಬೇಕಾಗಿದ್ದಾರೆ
ಉನ್ನತ ಕಂಪನಿ ಹಾಗೂ ಕಾರ್ಖಾನೆ, ಹೆಬ್ಬಾಳ ಮೇಟಗಳ್ಳಿ, ಹಿನಕಲ್ ಇಲ್ಲಿ ಕೆಲಸ ಮಾಡಲು Helper, Electrical work, ಹೌಸ್ ಕೀಪಿಂಗ್ ಸೆಕ್ಯೂರಿಟಿ ಮಹಿಳೆಯರು/ಪುರುಷರು ಬೇಕಾಗಿದ್ದಾರೆ. ವಿದ್ಯಾಭ್ಯಾಸ: 7th, 10th, PUC, Any Degree & ITI, Diploma, ESI, PF ಸೌಲಭ್ಯ ವಿರುತ್ತದೆ. ಕೋ-ಆಪರೇಟಿವ್ ಸೊಸೈಟಿ ಹಿನಕಲ್ ಇಲ್ಲಿ ಪಿಗ್ಮಿ ಕಲೆಕ್ಟರ್ ಕೆಲಸ ಮಾಡಲು ತಕ್ಷಣ ಬೇಕಾಗಿದ್ದಾರೆ.
9036461347, 9611208553

ITI ಗೆ ಪ್ರವೇಶಾವಕಾಶ
ITI (Fitter - NSQF) ವೃತ್ತಿಗೆ SSLC / PUC pass or fail ಅಭ್ಯರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ. NCVT ಭಾರತ ಸರ್ಕಾರದಿಂದ ಸಂಯೋಜನೆಗೊಂಡಿರುತ್ತದೆ.
Benaka ITI College, Near Cauvery Circle, Dr. Rajkumar Road, Raghavendra Nagar, Mysore.
9342123467, 9141756695

ಬಸವ ಮಾರ್ಗ ಫೌಂಡೇಶನ್
42ನೇ ಉಚಿತ ಕುಡಿತ ಬಿಡಿಸುವ ಶಿಬಿರ.
ದಿನಾಂಕ: 12–09–24 ರಿಂದ 22–09–24 ರವರೆಗೆ
8803344999
9742919191

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು/ ಮಹಿಳೆಯರು ಕಂಪ್ಯೂಟರ್ ಬಿಲ್ಲಿಂಗ್ ಮಾಡಲು ಕ್ಯಾಷಿಯರ್ ಬೇಕಾಗಿದ್ದಾರೆ.
ಇಚ್ಛೆ ಉಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು
9739816440

100% TEAK WOOD
FACTORY FINISH DOORS & FRAMES
@ FACTORY DEPOT RATES
10 YEARS WARRANTY*
9845426862
9901291267

ನೀವು ಒಬ್ಬ ಟೀಚರ್ ಆಗ ಬೇಕೇ?
SSLC ಪಾಸ್ PUC, Degree ಪಾಸ್/ಫೇಲ್ NURSERY TEACHERS TRAINING ಟ್ರೈನಿಂಗ್ ನಂತರ ತಕ್ಷಣ ಕೆಲಸ ಬನ್ನಿ, ಸೇರಿ, ಪಾಸಾಗಿ, ಸಂಪಾದಿಸಿ PUC ಓದುತ್ತಿರುವವರು ಸಹ ಸೇರಬಹುದು. Jnana Gangothri Convent Rajendra Nagara Mysore Whatsapp/call
9113980741

ಮನೆ ಬಾಡಿಗೆಗೆ ಇದೆ
ಶ್ರೀರಾಂಪುರ ರಿಂಗ್ ರಸ್ತೆ (ಯುನಿವರ್ಸಿಟಿ ಲೇಔಟ್) ಎದುರು ಗಾಯತ್ರಿ ಬಡಾವಣೆಯಲ್ಲಿ 2BHK 1ನೇ ಮಹಡಿ, 1BHK 2ನೇ ಮಹಡಿಯಲ್ಲಿ ಲಭ್ಯವಿದೆ. ಸಂಪರ್ಕಿಸಿ:
9108946647
9448092818

ನಿವೃತ್ತ ನೌಕರರಿಗೆ ಉದ್ಯೋಗಾವಕಾಶ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. Benifits (1) Fixed Salary+PF+ESI+ ಇತರೆ ಭತ್ಯೆಗಳು ಲಭ್ಯವಿರುತ್ತದೆ. ಬೇಕಾಗುವ ದಾಖಲಾತಿಗಳು: 1) ಫೋಟೋ, 2) ಪಾನ್ ಕಾರ್ಡ್, 3) ಆಧಾರ್ ಕಾರ್ಡ್, 4) ಬ್ಯಾಂಕ್ ಪಾಸ್ ಪುಸ್ತಕ, ಸ್ಥಳ: ಮೌರ್ಯ ರೆಸಿಡೆನ್ಸಿ, ಶ್ರೀ ಹರ್ಷ ರೋಡ್, ಮೈಸೂರು-01, ಸಮಯ: ಬೆಳಿಗ್ಗೆ 11 ಗಂಟೆಗೆ ದಿನಾಂಕ: 03–09–2024 ಮಂಗಳವಾರ, (Followed by Lunch)
9448376423, 9886883858

ವಿಶೇಷತೆ ಆರ್ಥೋಪೆಡಿಕ್ ಕ್ಲಿನಿಕ್
ಪಾದ ಮತ್ತು ಪಾದದ ಕೀಲಿನ ಸಮಸ್ಯೆಗಳಿಗೆ
ಭೇಟಿ ಕೊಡಿ: ಮಹಾವೀರ್ ಪಾದ ಮತ್ತು ಪಾದದ ಕೀಲಿನ ಸೆಂಟರ್ ನಂ.926, ವಿಶ್ವಧಾತ್ರಿ ರಸ್ತೆ, ವಿವೇಕಾನಂದನಗರ, ವಿವೇಕಾನಂದ ವೃತ್ತ, ಮೈಸೂರು–23
ಪ್ರತಿ ಮಂಗಳವಾರ ಬೆ:9 ರಿಂದ ಮ:12
ಫಿಸಿಯೋಥೆರಪಿ ಪ್ರತಿ ದಿನ ಸಂಜೆ 5.30pm-8pm
ಸಂದರ್ಶನಕ್ಕೆ ಕರೆ ಮಾಡಿ
7204080539, 0821-4000961
Main Clinic ಬೆಂಗಳೂರಿನಲ್ಲಿ

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular/ Saturday / Correspondence Courses with practical training.
www: imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

ಬೋಳು ತಲೆಯ ಸಮಸ್ಯೆಯೇ?

ಕಿಮೋಥೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 BANGALORE 9343142258

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ಕೆಲಸಕ್ಕೆ ಬೇಕಾಗಿದ್ದಾರೆ
ಸಮಯ : ಬೆಳಿಗ್ಗೆ 8 ರಿಂದ ಸಂಜೆ 6ರ ತನಕ
ವಯೋಮಿತಿ: 18 ರಿಂದ 50 ವರ್ಷಗಳು
ಸಂಬಳ: 12000 ರಿಂದ 20000
ಸ್ಥಳ : ಮೈಸೂರು
9606714441
7349278501

SITE FOR SALE
40x60 North Site Sale Roopa Nagar (Muda Khatha)
9880273834

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

WANTED
Graphic Designer
Corel Draw, Photoshop
Experienced / Fresher
Send your resume / Contact
rajesh@bluecanvas.in
+91 9900158722
bluecanvas

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9108566022

ಬೇಕಾಗಿದ್ದಾರೆ
ಹಳೆ ಆರ್.ಎಂ.ಸಿ. ಸರ್ಕಲ್‌ನ ಪೆಟ್ರೋಲ್ ಬಂಕ್‌ಗೆ ಕ್ಯಾಷಿಯರ್ & ಹೆಲ್ಪರ್ಸ್ (ಪುರುಷ / ಮಹಿಳೆ), ವಯಸ್ಸು: 18 ರಿಂದ 40 ಬೇಕಾಗಿದ್ದಾರೆ.
9035541774

ಗೃಹ ನಿರ್ಮಿತ ಚಟ್ನಿ ಪುಡಿ
"ರಾಂ ಚಟ್ನಿಪುಡಿ"
ನಿಮ್ಮ ಆಹಾರಕ್ಕೆ ರುಚಿಯ ಸಂಯೋಜನೆ! ಮನೆ ಮಾತುಗಳು ತಯಾರಿಸಿದ ಸಾಂಪ್ರದಾಯಿಕ ಚಟ್ನಿ ಪುಡಿ! ನೈಸರ್ಗಿಕ ವಸ್ತುಗಳಿಂದ, ಯಾವುದೇ ಕೃತಕ ವಸ್ತುಗಳು ಇಲ್ಲದೆ ತಯಾರಿಸಿರುವ ಶುದ್ಧತೆಯ ರುಚಿ. 1. ಅಗಸೆ ಬೀಜದ ಚಟ್ನಿಪುಡಿ, 2 ಗುರೆಳ್ ಚಟ್ನಿಪುಡಿ, 3 ಶೇಂಗಾ ಚಟ್ನಿಪುಡಿ, 4 ಕೊಬ್ರಿ ಚಟ್ನಿಪುಡಿ. 100g 200g 500g ಪ್ಯಾಕೆಟ್ಟಲ್ಲಿ ಲಭ್ಯ. "ರಾಂ ಹೋಮ್ಮೇಡ್ ಚಟ್ನಿಪುಡಿ", ಹೋಟೆಲ್, ಡಾಬಾ, ಬೇಕರಿ, ಸಂಪರ್ಕಿಸಿ.
Mob: 9141764948

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 35 ವರ್ಷ ವಿದ್ಯಾರ್ಹತೆ: 7 ರಿಂದ PUC ಮತ್ತು ITI ರಿಯಾಯಿತಿ ದರದಲ್ಲಿ ಊಟ ಮತ್ತು ವಸತಿ ಸೌಲಭ್ಯವಿರುತ್ತದೆ.
9480404036

ಸದ್ಗುರು ಮ್ಯಾರೇಜಸ್
ಡಾಕ್ಟರ್, ಇಂಜಿನಿಯರ್ ಮತ್ತು ಎಲ್ಲಾ ವಿದ್ಯಾವಂತ ಸುಂದರ ಶ್ರೀಮಂತ ವಧುವರರಿಗೆ ನೇರ ಸಂಪರ್ಕಿಸಿ
ಡಾ|| ಗುರೂಜಿ
ಆಧ್ಯಾತ್ಮಿಕ ಗುರುಗಳು & ಸಮಾಜ ಸೇವೆ
9448229184
7899625268

KHB Site for Sale
60x40 South Face
58 Lakhs.
KHB Kenchalagudu.
Mob: 9632102676

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ, ಶ್ರೀ ಸಿದ್ದಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ದಾರ್ಥ ನಗರ, ಮೈಸೂರು

COMMERCIAL SPACE FOR RENT
Spaces available.
From 1,000 sq.ft. to 12,000 sq.ft.
at Prime Locations.
96206 14970

GANESH CABS
73377 88771
TAXI SERVICES
One Way
Pick Up & Drops
Out Station Round Trip
Airport Pick and Drop
Spare Driver Facility
Mysuru to Bengaluru For Drop or Pickup
Rs. 2500 Rs. 4000

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾಹ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ತಿಳಿದು. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಕೆಫೆ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳೇಕೆರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಸುಪ್ತಾವಾ ಇರಲಾಗುತ್ತದೆ.

SITE FOR SALE
40X60, East Face, Sarada Layout Next to JP NAGARA Mysore Rate: 72 Lakhs
PRAGATHI PROPERTIES
9900146468

HOUSE FOR RENT
(Owners Advt)
2BHK / 1BHK EF, Car Parking Big Hall, Attached Bath Vijayanagar 1st Stage, Mysore
9845293278

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟಾಂಡ್, ಮೈಸೂರು-1

ಬೇಕಾಗಿದ್ದಾರೆ
ಡ್ರೈವರ್ಸ್ – ಆರು ಮತ್ತು ನಾಲ್ಕು ಚಕ್ರದ ಕಂಪನಿ ಗೂಡ್ಸ್ ವಾಹನ ಚಲಾಯಿಸಲು ಡಿಎಲ್ ಹೊಂದಿರುವ ಅಭ್ಯರ್ಥಿಗಳು. ಆಕರ್ಷಕ ಸಂಬಳ, ಇಎಸ್‌ಐ, ಪಿಎಫ್ ಸೌಲಭ್ಯವಿರುತ್ತದೆ. ಸಂಪರ್ಕಿಸಿ:
Mob: 9148851387

ಮುಡಾ ಅಪ್ರೂವ್ಡ್ ಸೈಟ್ ಮಾರಾಟಕ್ಕಿದೆ
ಬ್ರಾಹ್ಮಿನ್ ಲೇಔಟ್ "ಎ" ಬ್ಲಾಕ್, 60 ಅಡಿ ರಸ್ತೆಗೆ ಒಂದೇ ಸೈಟ್‌ನಲ್ಲಿ 40x30, 30x20 ಹಾಗೂ 4 ಅಂಗಡಿ ಮಳಿಗೆಗೆ ಸ್ಥಳಾವಕಾಶವುಳ್ಳ ಸೈಟ್ ಮಾರಾಟಕ್ಕಿದೆ. ಒಟ್ಟು ವಿಸ್ತೀರ್ಣ 2900 Sq.ft. ಚ.ಅಡಿಗೆ 1850.
8618644886, 9880280299

ಪ್ರಸಿದ್ಧ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಪಂ|| ಕುಮಾರ್ ಪ್ರಸಾದ್ ಗುರೂಜಿ
Mob: 9731839596
ಸ್ತ್ರೀ–ಪುರುಷಪ್ರೇಮ, ಸಂತಾನ, ದಾಂಪತ್ಯ, ಸಮಸ್ಯೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ, ಅಷ್ಟಮಂಗಳ, ಪ್ರಶ್ನೆಯಿಂದ, ನೇರ ಉತ್ತರ ಹಾಗೂ ಶಾಶ್ವತ, ಪರಿಹಾರಕ್ಕಾಗಿ, ಚೋಟನಿಕ್ಕರ, ಭಗವತಿ ದೇವಿ, ರಾಜರಾಜೇಶ್ವರಿ, ಕುಟ್ಟಿಚೇತನ್, ಕೇರಳದ, ಮಾಂತ್ರಿಕ ಶಕ್ತಿಯಿಂದ, 7 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ಮನೆ ವಿಳಾಸ: ಲಕ್ಷ್ಮಿ ನಿವಾಸ ನಂ.19/D2, ಬುದ್ಧ ಮಾರ್ಗ, ಹೋಟೆಲ್ ದೋಸೆ ಕಾರ್ನರ್ ಪಕ್ಕ, ಹೊಸ DC ಆಫೀಸ್ ಎದುರು, ಸಿದ್ಧಾರ್ಥ ಲೇಔಟ್, ಮೈಸೂರು

ಸೈಟು ಮಾರಾಟಕ್ಕಿದೆ
28x40, S/W ಕಾರ್ನರ್ DTCP "A" ಖಾತೆ (ರೇರಾ ಅಪ್ರೂವ್) ಸೈಟು ಮಾರಾಟಕ್ಕಿದೆ. 15 ಲಕ್ಷಗಳು. TVS ಫ್ಯಾಕ್ಟರಿ ಹತ್ತಿರ, ಮೈಸೂರು.
Mob: 9742198093

New Semi Commercial Building for Sale
Police Layout 3rd Stage Mysore. 1.75 Cr
PRAGATHI PROPERTIES
9900146468

ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್ (ಪುರುಷರು)
ಸ್ಥಳ: ರಾಮಕೃಷ್ಣನಗರ, ಹೆಬ್ಬಾಳು (ಮೈಸೂರು)
ವಿದ್ಯಾರ್ಹತೆ: SSLC Pass/ Fail
ವಯಸ್ಸು: 50 ವರ್ಷದೊಳಗಿನವರು
ESI PF and W/off ಸೌಲಭ್ಯ
9739199355

ಬೇಕಾಗಿದ್ದಾರೆ
ಕುವೆಂಪು ನಗರದ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪ ಹಾಗು ವಿಜಯನಗರದ ಯೋಗಾನರಸಿಂಹ ದೇವಸ್ಥಾನದ ಹತ್ತಿರದ ಏರಿಯಾಗಳಲ್ಲಿ ಕರ್ತವ್ಯ ನಿರ್ವಹಿಸಲು ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.
9035050653, 9035050654

SITE FOR SALE
EAST FACING CORNER SITE, 28x40, MUDA khata, 36 Lacs.
Mob: 9342123373

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಫ್ಲೆಕ್ಸ್ ಪ್ರಿಂಟಿಂಗ್ ಕಂಪನಿಗೆ
ಹೆಲ್ಪರ್ಸ್ ಹುಡುಗರು ಬೇಕಾಗಿದ್ದಾರೆ
ಅಶೋಕ ರೋಡ್, ಮೈಸೂರು
Call: 0821-4267800
95382 22384

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

SITES for SALE
JP Nagar Ring Road
30x40
33 Lakhs
Near Gurur Bus Stop, Ramabainagar, Mysore.
DTCP approved (Corporation limits)
1.5 Kms from JP Nagar Ring Road
8660105902

WANTED
Civil Supervisor for Residential Building Mysore
Wanted Civil Engineer (Diploma) or BE)
Preferably by with Fire +Safety Certificate for a New project in Kushal nagar
9449452888

ಸೈಟುಗಳು ಮಾರಾಟಕ್ಕಿವೆ
(ಬ್ಯಾಂಕ್ ಲೋನ್ ದೊರೆಯುತ್ತದೆ)
20x30, 30x40
ಶ್ರೀರಾಂಪುರ ರಿಂಗ್ ರೋಡ್ ಹತ್ತಿರ, ಮೈಸೂರು
8050345574

HOUSE FOR RENT
Duplex 2BHK I and II Floor, Independent, Corner house, with Solar, Kitchen Chimany, Carparking, Layout Borewater facility, Near Christ Public Shool, Bogadi, Mysuru Small Family without pet animal is required only employees need to contact.
9916777948
Brokers Excuse

FOR RENT
1 BHK with attached Bath, Solar, UPS, Borewell at 5060, 3rd Floor, 2nd Phase, Vijayanagara 4th Stage, Near canara bank (Vegetarian Family only)
9880870370

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳ್ L&T & Theorem ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಮತ್ತು ಲೇಡಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ: PUC ಮತ್ತು ಮೇಲ್ಪಟ್ಟು
ಸಂಬಳ: 22000+W/o (8 hrs)
9620667819
9880727819

SITE FOR SALE
Muda Allotted Satagalli 2nd Stage, 40x60 South Facing 40ft Road, Direct Owner Meeting
9844865607

ಬೇಕಾಗಿದ್ದಾರೆ
ಮೈಸೂರಿನ ಕಾಳಿದಾಸ ರಸ್ತೆ, ಜಯಲಕ್ಷ್ಮಿಪುರಂನಲ್ಲಿ ಇರುವ ಶುದ್ಧ ಸಸ್ಯಾಹಾರಿ ಹೋಟೆಲ್ ಒಂದಕ್ಕೆ ಸೌತ್ ವೆಜ್ ಭಟ್ರು–1, ಸೌತ್ ವೆಜ್ ಭಟ್ರುಗೆ ಸಹಾಯಕ–1, ಕೌಂಟರ್ (ಪ್ಯಾಕಿಂಗ್) ಬಾಯ್ಸ್ –2, ಸರ್ವಿಸ್–2, ದೋಸಾ ಭಟ್ರು–1, ನಾರ್ತ್ ಭಟ್ರುಗೆ ಸಹಾಯಕ –1, ಉತ್ತಮ ಸಂಬಳ, ಊಟ ಮತ್ತು ವಸತಿ ಸೌಲಭ್ಯ ಇದೆ.
9019916266

SITE FOR SALE
Muda Approved Sharadanagar Railway Layout Bogadi, Near Hari Vidyalaya. 30x40 West facing
9886653258

ಮನೆ ಮಾರಾಟಕ್ಕಿದೆ
30x40 ಗ್ರೌಂಡ್ ಫ್ಲೋರ್ ಮತ್ತು ಫಸ್ಟ್ ಫ್ಲೋರ್ SBM ಲೇಔಟ್ ಬೋಗಾದಿ, ಮೈಸೂರು
9844612333

YUKTHA CONSTRUCTIONS
ಮೈಸೂರಿನಲ್ಲಿ ಜೆ.ಪಿ.ನಗರ ಶ್ರೀರಾಂಪುರ, ಶ್ರೀನಗರ, Construction ನಡೆಯುತ್ತದೆ.
20x30, 30x40, 40x60 35x50, 30x50
Broker Excuse
7892381659
9986603572

ಗೋಲ್ಡ್ ಕಂಪನಿಯಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ
ಆಕರ್ಷಕ ಸಂಬಳ & ಇನ್‌ಸೆಂಟೀವ್ ಇರುತ್ತದೆ. ಆಸಕ್ತಿಯುಳ್ಳವರು ಸಂಪರ್ಕಿಸಿ
9148436811
6362895985

MUDA ಸೈಟ್ ಮಾರಾಟಕ್ಕಿದೆ
30x30 ಅಳತೆಯ MUDA ಸೈಟ್, ಜೆ.ಪಿ.ನಗರ ರಿಂಗ್ ರಸ್ತೆ, ಇಂದ 50 Meter ದೂರದಲ್ಲಿ 65 ಲಕ್ಷಗಳಿಗೆ ಮಾರಾಟಕ್ಕಿದೆ.
Direct Owner
7411848108

ಸೆಕ್ಯೂರಿಟಿ ಗಾರ್ಡ್
25 ರಿಂದ 55 ವರ್ಷದವರಿಗೆ ಮೈಸೂರು ಸಿಟಿ ಹತ್ತಿರ ಗಾರ್ಡ್ ಕೆಲಸ/ಪಾರ್ಕಿಂಗ್ ಕೆಲಸ. (ಸಂಪರ್ಕಿಸಿ)
9900749104

SITE FOR SALE
40X60 NORTH FACING, 40 ft Road SUVARNA NAGARA BOGADI ROAD DIRECT OWNER MEETING
9844865607

ಜಮೀನು ಮಾರಾಟಕ್ಕಿದೆ
ಚಾಮರಾಜನಗರದಿಂದ 10 ಕಿ. ಮೀ. ದೂರದ ವೀರನಪುರ ಬಳಿ 3 ಎಕರೆ ನೀರಾವರಿ ಪಂಪ್‌ಸೆಟ್, 3 ವರ್ಷ ತುಂಬಿದ 160 ತೆಂಗಿನ ಸಸಿಗಳಿರುವ, ವಾಸಕ್ಕೆ ಯೋಗ್ಯವಾದ ತಾರಸಿ ಮನೆ ಸಹಿತ ಜಮೀನು ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ:
9481530003

HOUSE FOR SALE
30X40 New Duplex House Sale Vijayanagar 4th Stage
9880273834

ವಧು–ವರರ ಅನ್ವೇಷಣೆ
ಒಕ್ಕಲಿಗ, ಕುರುಬ, ಲಿಂಗಾಯತ, ನಾಯಕ ಎಲ್ಲಾ ಜಾತಿಯ ವಧು–ವರರು, ವಿಚ್ಛೇದಿತರು, ವಿಧವಾ–ವಿಧವೆಯರು, ಸಂಪರ್ಕಿಸಿ:
9980273659
9731066259

PG ನಡೆಸುವವರ ಗಮನಕ್ಕೆ
12 Rooms ಮತ್ತು 3 Double Bed Rooms ಇರುವ ಮನೆಯು PG ನಡೆಸುವುದಕ್ಕೆ ಸೂಕ್ತವಾಗಿದೆ. Location: Near NIE College.
9686975845

ಇಂದೇ ಸಂಪರ್ಕಿಸಿ
ಮೈಸೂರಿನ ಪ್ರಸಿದ್ಧ Office Showroom & Company ಗಳಿಗೆ 7th, 10th, PUC, ITI, Diploma, Any Degree Pass/ Fail ಆದ ಯುವಕ/ಯುವತಿಯರು Packing, Helper, Telecalling, Data Entry, Receptionist, Line Incharge, Billing ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಷರತ್ತು ಅನ್ವಯ ಸಂಬಳ: 14500/- 39000/- (ESI+PF OT) ಸೇರಿ
9740468212, 6364103418

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಮೈಸೂರು ಮಿತ್ರ

ಯೋಗೇಶ್ವರ್ ಕಾಂಗ್ರೆಸ್ ಸೇರುವ ಬಗ್ಗೆ ನಮ್ಮೊಂದಿಗೆ ಯಾರೂ ಚರ್ಚಿಸಿಲ್ಲ



ಬೆಂಗಳೂರು, ಆ.30(ಕೆಎಂಶಿ)– ಬಿಜೆಪಿ ನಾಯಕ ಸಿ.ಪಿ.ಯೋಗೇಶ್ವರ್ ಕಾಂಗ್ರೆಸ್‌ಗೆ ಬರುವ ಸಂಬಂಧ ನಮ್ಮ ಬಳಿ ಯಾರೂ ಚರ್ಚೆ ಮಾಡಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚನ್ನಪಟ್ಟಣದ ಅಭ್ಯರ್ಥಿ ನಾನೇ, ಕಾಂಗ್ರೆಸ್ ಪಕ್ಷದಿಂದ ಯಾರೇ ಅಭ್ಯರ್ಥಿಯಾದರೂ ನನಗೇ ಮತ ಹಾಕಿದಂತೆ, ಕೆಪಿಸಿಸಿ ಅಧ್ಯಕ್ಷನಾಗಿ 'ಬಿ' ಫಾರಂ ಬರೆಯುವುದು, ಅದಕ್ಕೆ ಸಹಿ ಹಾಕುವುದು ನಾನು, ಮಾಧ್ಯಮದವರನ್ನು ಸ್ಪರ್ಧೆಗಿಳಿಸಿದರೂ, ಅವರ ಪರ ಚಲಾವಣೆಯಾಗುವ ಮತಗಳೂ ನನ್ನದೇ ಎಂದರು. ಪ್ರತಿಪಕ್ಷಗಳಾದ ಬಿಜೆಪಿ–ಜೆಡಿಎಸ್ ಇರಲಿ ಅಥವಾ ಮೂರು ಪಕ್ಷವಾದರೂ ಇರಲಿ, ನಮಗೆ ಸಂಬಂಧವಿಲ್ಲ, ನಾವು ಜನ ಸೇವೆ ಮಾಡುತ್ತೇವೆ, ಮತದಾರರು ತೀರ್ಮಾನ ಮಾಡುತ್ತಾರೆ.

ಚನ್ನಪಟ್ಟಣ ಉಪಚುನಾವಣೆ ದೃಷ್ಟಿಯಿಂದ ಉದ್ಯೋಗ ಮೇಳ ನಡೆಸುತ್ತಿಲ್ಲ. ಆ ಭಾಗದ ಯುವಜನರಿಗೆ ಕೆಲಸ ಕೊಡಿಸುವುದು ನಮ್ಮ ಉದ್ದೇಶ. ನಾನು ಜಿಲ್ಲೆಗೆ ಹೋದಾಗಲೆಲ್ಲಾ ಕೆಲಸ ಕೊಡಿಸಿ ಎಂದು ಯುವಜನರು ಅರ್ಜಿ ನೀಡುತ್ತಿದ್ದರು. ನಮಗೆ ಅರ್ಜಿ ಕೊಟ್ಟವರನ್ನೂ ಉದ್ಯೋಗ ಮೇಳಕ್ಕೆ ಕರೆಸುತ್ತಿದ್ದೇವೆ. ನಾವು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ.

ಶನಿವಾರ ರಾಜ್ಯಪಾಲರ ಭೇಟಿಗೆ ಅವಕಾಶ ದೊರೆತಿದ್ದು, ನಮ್ಮ ಮನವಿಯನ್ನು ಸಲ್ಲಿಸುತ್ತೇವೆ. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿರುದ್ಧದ ಪೋಕ್ಸೊ ಮೊಕದ್ದಮೆ ನ್ಯಾಯಾಲಯದ ಮುಂದಿದೆ, ತೀರ್ಪಿನ ನಂತರ ಮಾತನಾಡುತ್ತೇನೆ ಎಂದರು.

ಸಾರ್ವಜನಿಕ ಗಮನಕ್ಕೆ

ಆಗಸ್ಟ್ 26, 2024ರ ಮೈಸೂರು ಮಿತ್ರ. ಬೆಳಗ್ಗಿನ ಪ್ರಾದೇಶಿಕ ದಿನ ಪತ್ರಿಕೆಯಲ್ಲಿ ಹಾಗೂ ದಿನಾಂಕ 23/08/2024ರ ಆಂದೋಲನ ದಿನ ಪತ್ರಿಕೆ ಮತ್ತು ದಿನಾಂಕ 23/08/2024 ವಿಜಯವಾಣಿ ದಿನ ಪತ್ರಿಕೆಯಲ್ಲಿ, ಮೈಸೂರು ನಗರ ಸರಸ್ವತಿಪುರಂ, 7ನೇ ಕ್ರಾಸ್, 8ನೇ ಮುಖ್ಯ ರಸ್ತೆ, ಮನೆ ನಂ.30–1ರಲ್ಲಿ ವಾಸಿಸುತ್ತಿರುವ (1) ಶ್ರೀ ವೀರಪ್ಪ.ವೈ, ದಿವಂಗತ ಎಮ್.ವೈ.ಜಿತೇಂದ್ರಿಯಪ್ಪ ರವರ ಪುತ್ರ (2) ಶ್ರೀ ವೀರಭದ್ರ.ವೈ, ದಿವಂಗತ ಎಮ್.ವೈ.ಜಿತೇಂದ್ರಿಯಪ್ಪ ರವರ ಪುತ್ರ ಮತ್ತು (3) ಶ್ರೀ ಸಿದ್ಧಲಿಂಗೇಶ್.ಎಸ್.ವೈ, ಶ್ರೀ ಷಡಾಕ್ಷರಿರವರ ಪುತ್ರ ಇವರ ಪರವಾಗಿ ಸಾರ್ವಜನಿಕ ಪ್ರಕಟಣೆಗೆ ನನ್ನ ಕಕ್ಷಿದಾರರದ ಮೈಸೂರು ನಿವಾಸಿ ಲೇಟ್ ಶ್ರೀ ನಾರಣಪ್ಪರವರ ಪುತ್ರ ಶ್ರೀ ಎನ್. ರಾಘವೇಂದ್ರ ಮೂರ್ತಿರವರು ನೀಡುತ್ತಿರುವ ಪ್ರತ್ಯುತ್ತರ. ಮೈಸೂರು ತಾಲ್ಲೂಕು ಕಸಬ ಹೋಬಳ ಚೌಡಹಳ್ಳಿ ಗ್ರಾಮದಲ್ಲಿರುವ ಸ.ನಂ.39/ಎ. ವಿಸ್ತೀರ್ಣ 10 ಎಕರೆ, ಸ.ನಂ.39/ಬಿ ವಿಸ್ತಿರ್ಣ 10 ಎಕರೆ, ಒಟ್ಟು ವಿಸ್ತೀರ್ಣ 20 ಎಕರೆ ಜಮೀನುಗಳನ್ನು ಬೇರೆ ಬೇರೆ ದಿನಾಂಕಗಳಲ್ಲಿ ನೊಂದಾಯಿತ ಕ್ರಯ ಪತ್ರದ ಮೂಲಕ ನಮ್ಮ ಕಕ್ಷಿದಾರರು ಖರೀದಿಸಿರುತ್ತಾರೆ. ಸ.ನಂ.39/ಎ ಜಮೀನಿನಲ್ಲಿ ಇರುವ ವಿಸ್ತೀರ್ಣದ ಪೈಕಿ ಎರಡು ಎಕರೆ ಜಮೀನನ್ನು ಅನ್ಯಕ್ರಾಂತ ಮಾಡಿಸಿರುತ್ತಾರೆ. ದಿವಂಗತ ಎಮ್.ವೈ. ಜಿತೇಂದ್ರಿಯಪ್ಪರವರು ದಿನಾಂಕ 28/04/1994, 04/05/1994 ಮತ್ತು 13/05/1994ರಲ್ಲಿ ಸ್ವತ್ತುನ್ನು ಖರೀದಿಸುವ ಮುನ್ನ ಸ್ವತ್ತಿಗೆ ಸಂಬಂದಪಟ್ಟ ಎಲ್ಲಾ ಅಸಲು ದಾಖಲೆಗಳನ್ನು ಪರಿಶೀಲಿಸಿ ನಂತರ ಖರೀದಿಸಿರುತ್ತಾರೆ. ಸದರಿ ಜಮೀನಿನಲ್ಲಿ ಕಾನೂನು ಬಾಹಿರವಾಗಿ 1 ಎಕರೆ 04 ಗುಂಟೆ ಜಮೀನನ್ನು ಅನಧಿಕೃತವಾಗಿ ಕಬಳಸಲು ಹುನ್ನಾರ ಮಾಡಿ ಮೇಲ್ಕಂಡ ಎಮ್.ವೈ.ಜಿತೇಂದ್ರಿ ಯಪ್ಪನವರು ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 1578/2006 ಹೂಡಿರುತ್ತಾರೆ. ಸದರಿ ದಾವೆ ಇನ್ನೂ ಚಾಲ್ತಿಯಲ್ಲಿದೆ. ಮೇಲ್ಕಂಡ ಎಮ್.ವೈ.ಜಿತೇಂದ್ರಿಯಪ್ಪ ರವರು ನಮ್ಮ ಕಕ್ಷಿದಾರರ ವಿರುದ್ಧ 1 ಎಕರೆ 04 ಗುಂಟೆ ಜಮೀನನ್ನು ಒತ್ತುವರಿ ಮಾಡಿದ್ದಾರೆ ಎಂಬ ಆರೋಪ ಸುಳ್ಳಾಗಿದ್ದು ಸದರಿ ಆರೋಪವನ್ನು ಸಾರಾ ಸಗಟಾಗಿ ತಿರಸ್ಕರಿಸಿದ್ದಾರೆ. ಇದರಲ್ಲ ಯಾವುದೇ ಸತ್ಯಾಂಶವಿಲ್ಲ.

ಪ್ರಕಟಣೆಯಲ್ಲಿ ಸಮೂದಿಸಿರುವ ಕಳ್ಳಿ ಬೇಲಿ 1974ನೇ ಇಸವಿಯಿಂದ ಸ್ಥಳದಲ್ಲಿದ್ದು ಸದರಿ ಹಾಗ ನಮ್ಮ ಕಕ್ಷಿದಾರರಿಗೆ ಸೇರಿದಾಗಿರುತ್ತದೆ. ಸದರಿ ಸ್ವತ್ತು ನಮ್ಮ ಕಕ್ಷಿದಾರರ ಸಂಪೂರ್ಣ ಮಾಲಿಕತ್ವ ಮತ್ತು ಸ್ವಾಧೀನಾನುಭವದಲ್ಲಿದ್ದು ಅನುಭವಿಸುವ ಹಕ್ಕು ಸಹ ಉಳ್ಳವಾರಾಗಿದ್ದಾರೆ. ಮೇಲ್ಕಂಡ ಶ್ರೀ ವೀರಪ್ಪ ವೈ. ಮತ್ತು ಇತರರು ತಮ್ಮ ಅನುಕೂಲಕ್ಕೆ ಅನುಗುಣವಾಗಿ ಅಸಲು ದಾವಾ ಸಂಖ್ಯೆ 1578/2006 ರಲ್ಲಿ ವಾದ ಪತ್ರದ ಅನುಸೂಚಿ ಸ್ವತ್ತಿನ ವಿಸ್ತೀರ್ಣದ ತಿದ್ದುಪಡಿ ಅರ್ಜಿಯನ್ನು ಸಲ್ಲಿಸಿದ್ದು ಸದರಿ ಅರ್ಜಿ ವಜಾಗೊಂಡಿರುತ್ತದೆ. ಜಮೀನಿನ ದುರಸ್ತಿಯು ಸರ್ವೋಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಮಾಡಲಾಗಿ ಹೊಸ ನಂಬರ್ ಕೊಟ್ಟಿರುತ್ತಾರೆ.

ಮೇಲ್ಕಂಡ ಸಾರ್ವಜನಿಕ ಪ್ರಕಟಣೆಯ ಮೂಲಕ ಸಾರ್ಜನಿಕರನ್ನು ತಪ್ಪು ದಾರಿಗೆ ಎಳೆಯುವ ಉದ್ದೇಶದಿಂದ ಹಾಗು ನಮ್ಮ ಕಕ್ಷಿದಾರರ ಮಾನಹಾನಿ ಮಾಡುವ ದುರುದ್ದೇಶದಿಂದ ಮಾಡಲಾಗಿರುತ್ತದೆ. ಈ ಎಲ್ಲಾ ಕಾರಣದಿಂದ ಸಾರ್ವಜನಿಕರು ಸದರಿ ಸಾರ್ವಜನಿಕ ಪ್ರಕಟಣೆಗೆ ಯಾವುದೆ ಮಹತ್ವ ನೀಡಬಾರದೆಂದು ಈ ಮೂಲಕ ತಿಳಿಸಲಾಗಿದೆ.

ಸಹಿ/– ಶ್ರೀ ಎ. ಎಸ್. ನಟರಾಜ್, ಬಿ.ಎಸ್ಸಿ. ಎಲ್.ಎಲ್.ಎಂ.
ಎನ್ ನಂ.120/1974 ವಕೀಲರು, ನಂ.116. 1ನೇ ಮಹಡಿ,
ಬಿನುಮಯ್ಯ ಚೌಕ. ಮೈಸೂರು.
ಮೊ: 9845110636

ಪ್ರಕಟಣೆ

ವಿಜಯನಗರ ಸ್ಪೋರ್ಟ್ಸ್ ಕ್ಲಬ್ (ರಿ),
CA–12, 2ನೇ ಹಂತ, ವಿಜಯನಗರ, –570017.
PH:0821-2514823

ಮೇಲ್ಕಂಡ ವಿಳಾಸದಲ್ಲಿ ಕ್ಲಬ್‌ನ ನಿಯಮಾವಳಿಗನುಗುಣವಾಗಿ ಕ್ಯಾಂಟೀನ್ (ಸಸ್ಯಾಹಾರ ಮತ್ತು ಮಾಂಸಾಹಾರ) ನಡೆಸಲು ಅರ್ಹ ಅಡುಗೆ ಗುತ್ತಿಗೆದಾರರಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಗುತ್ತಿಗೆದಾರರು ನಿಮ್ಮ ಮನವಿ ಪತ್ರದೊಂದಿಗೆ, ದರಪಟ್ಟಿಯನ್ನು ಲಗತ್ತಿಸಿ, ಮುಚ್ಚಿದ ಲಕೋಟೆಯಲ್ಲಿ ದಿನಾಂಕ: 15/09/2024ನೇ ಭಾನುವಾರದೊಳಗೆ, ಖುದ್ದಾಗಿ ಕಚೇರಿಯಲ್ಲಿ ಅಥವಾ ಅಂಚೆ ಮೂಲಕ ಮೇಲ್ಕಂಡ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕ್ಲಬ್ ನ ಕಛೇರಿಯನ್ನು ಸಂಪರ್ಕಿಸಿ.

ಸಹಿ/– ಎನ್.ಎಲ್. ಶೇಖರ್, ಕಾರ್ಯದರ್ಶಿ

ಸಹಿ/– ಹೆಚ್.ಎಂ. ರಾಮಚಂದ್ರ, ಅಧ್ಯಕ್ಷರು

ಸೂಚನೆ: ಗುತ್ತಿಗೆದಾರರ ಆಯ್ಕೆ ಕುರಿತಂತೆ ಆಡಳಿತ ಮಂಡಳಿಯ ತೀರ್ಮಾನವೇ ಅಂತಿಮವಾಗಿರುತ್ತದೆ.

ಜೆಎಸ್‌ಎಸ್ ಮಹಾವಿದ್ಯಾಪೀಠ

ಜೆಎಸ್‌ಎಸ್ ಮಹಿಳಾ ಕಾಲೇಜು

(ಚಾಮರಾಜನಗರ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿದೆ,
ನ್ಯಾಕ್ ನಿಂದ 'ಬಿ'+ ಮಾನ್ಯತೆ ಪಡೆದಿದೆ)
ಜೋಡಿ ರಸ್ತೆ, ಚಾಮರಾಜನಗರ - 571 313 Ph: 08226-222076
web: jsscwchn.com E-mail: jsscwchnagar@gmail.com

ಟೆಂಡರ್ ಪ್ರಕಟಣೆ

ಜೆಎಸ್‌ಎಸ್ ಮಹಿಳಾ ಕಾಲೇಜು ಮತ್ತು ಜೆಎಸ್‌ಎಸ್ ಮಹಿಳಾ ವಸತಿ ನಿಲಯ, ಚಾಮರಾಜನಗರ ಇಲ್ಲಿಗೆ ಸ್ವಚ್ಛತಾ ಕಾರ್ಯನಿರ್ವಹಿಸುವವರನ್ನು ಹನ್ನೊಂದು ತಿಂಗಳ ಅವಧಿಗೆ ನೇಮಿಸಿಕೊಳ್ಳಲು ಟೆಂಡರ್ ಕರೆಯಲಾಗಿದೆ. ವಲಯ ಕಾರ್ಮಿಕ ಆಯುಕ್ತರಿಂದ ನೊಂದಾಯಿಸಲ್ಪಟ್ಟಿರುವ ಇ.ಎಸ್.ಐ ಮತ್ತು ಪಿ.ಎಫ್ ಸೌಲಭ್ಯಹೊಂದಿರುವ ಗುತ್ತಿಗೆದಾರರು ಅರ್ಜಿ ಸಲ್ಲಿಸಬಹುದಾಗಿದ್ದು, ಟೆಂಡರ್ ಅರ್ಜಿ ಫಾರಂಗಳನ್ನು ದಿನಾಂಕಃ 02.09.2024 ರಿಂದ 09.09.2024ರವರೆಗೆ ವಿತರಿಸಲಾಗುತ್ತದೆ. ಆಸಕ್ತಿಯುಳ್ಳ ಗುತ್ತಿಗೆದಾರರು ರೂ. 500/–ಗಳ ಅರ್ಜಿ ಶುಲ್ಕ ಪಾವತಿಸಿ ಕಛೇರಿ ವೇಳೆಯಲ್ಲಿ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ದಾಖಲಾತಿ ಪ್ರತಿಗಳೊಡನೆ ಹಾಗೂ ಒಂದು ತಿಂಗಳ ಮಜೂರಿಯ ಬಿಲ್ಲಿನ ಮೊತ್ತಕ್ಕೆ ಇ.ಎಂ.ಡಿ ಹಣ ಪಾವತಿಗೆ ಕಾಲೇಜಿನ ಪ್ರಾಂಶುಪಾಲರ ಹೆಸರಿಗೆ ಡಿ.ಡಿ ಯನ್ನು ಪಡೆದು ಅರ್ಜಿಯೊಡನೆ ಲಗತ್ತಿಸಿ ಮೊಹರು ಮಾಡಿದ ಲಕೋಟೆಯಲ್ಲಿ ದಿನಾಂಕ: 10.09.2024ರ ಸಂಜೆ 5.00 ಗಂಟೆಯೊಳಗೆ ಈ ಕಛೇರಿಗೆ ಸಲ್ಲಿಸಬೇಕು.

ಡಾ. ಎನ್ ಮಹದೇವಸ್ವಾಮಿ
ಪ್ರಾಂಶುಪಾಲರು
ಮೊ/ದೂ: 94496 93156 / 08226-222076

ಸಹಿ/–
ಕಾರ್ಯನಿರ್ವಾಹಕ ಕಾರ್ಯದರ್ಶಿಗಳು

ಮನೆ ಬಳಿಯೇ ಕಾಡಾನೆ ದಾಳಿಗೆ ವೃದ್ಧೆ ಬಲಿ

ಚೆನ್ನಯ್ಯನಕೋಟೆ ಮಾರಿಯಮ್ಮ ದೇವಸ್ಥಾನ ಬಳಿ ಘಟನೆ

ಸಿದ್ದಾಪುರ, ಆ.30–ಕಾಡಾನೆಯೊಂದು ಮನೆ ಸಮೀಪವೇ ವೃದ್ಧೆಯನ್ನು ತುಳಿದು ಸಾಯಿಸಿದ ಘಟನೆ ವಿರಾಜಪೇಟೆ ತಾಲೂಕಿನ ಚೆನ್ನಯ್ಯನಕೋಟೆ ಮಾರಿಯಮ್ಮ ದೇವಸ್ಥಾನದ ಬಳಿ ಶುಕ್ರವಾರ ನಡೆದಿದೆ.

ಚೆನ್ನಯ್ಯನಕೋಟೆ ಗ್ರಾಮದ ಕಾತಾಯಿ (75) ಆನೆಗೆ ಬಲಿಯಾದ ವೃದ್ಧೆ. ಈಕೆ ಬೆಳಗ್ಗೆ 6.30ರಲ್ಲಿ ತಮ್ಮ ಹಿರಿಯ ಪುತ್ರ ನಾಗರಾಜನ ಮನೆಯಿಂದ ಕಿರಿಯ ಪುತ್ರ ಶ್ರೀನಿವಾಸನ ಮನೆಗೆ ಬರುತ್ತಿದ್ದರು. ಈ ವೇಳೆ ಮನೆ ಸಮೀಪವೇ ದಿಢೀರ್ ಪ್ರತ್ಯಕ್ಷವಾದ ಕಾಡಾನೆ ಈಕೆಯನ್ನು ತುಳಿದು, ಸೊಂಡಲಿನಿಂದ ಎತ್ತಿ ಬಿಸಾಡಿದೆ. ಇದರಿಂದ ತೀವ್ರ ರಕ್ತದ ಮಡುವಿನಲ್ಲಿ ಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ನಂತರ ಕಾಡಾನೆ ಸಮೀಪದ ಕಾಫಿ ತೋಟಕ್ಕೆ ನುಸುಳಿ ಮರೆಯಾಗಿದೆ.

ಅಧಿಕಾರಿಗಳ ತರಾಟೆಗೆ: ಸ್ಥಳಕ್ಕೆ ಭೇಟಿ ನೀಡಿದ ನಾಗರಹೊಳೆ ವನ್ಯಜೀವಿ ನಿರ್ದೇಶಕಿ ಪಿ.ಎ.ಸೀಮಾ, ವಿರಾಜಪೇಟೆ ಡಿಎಫ್‌ಒ ಜಗನ್ನಾಥ್ ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳನ್ನು ಗ್ರಾಮಸ್ಥರು ತರಾಟೆಗೆ ತೆಗೆದುಕೊಂಡರು.

ಈ ಭಾಗದಲ್ಲಿ ಕೆಲ ದಿನಗಳಿಂದ ನಿರಂತರವಾಗಿ ಕಾಡಾನೆ ಕಾಣಿಸಿಕೊಂಡಿದ್ದರೂ ಅರಣ್ಯ ಅಧಿಕಾರಿಗಳು ಮತ್ತು ಸಿಬ್ಬಂದಿ ಯಾವುದೇ ಕ್ರಮ ಕೈಗೊಂಡಿಲ್ಲ. ಕಾಡಾನೆಗಳ ಹಾವಳಿ ಮಿತಿಮೀರಿದ್ದು, ಶಾಲಾ–ಕಾಲೇಜು ವಿದ್ಯಾರ್ಥಿಗಳು, ಕಾರ್ಮಿಕರು, ಬೆಳೆಗಾರರು ತಿರುಗಾಡಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅರಣ್ಯದಂಚಿನಲ್ಲಿ ಯಾವುದೇ ತಡೆಯಿಲ್ಲದೆ ನೇರವಾಗಿ ಬರುತ್ತಿರುವ ಕಾಡಾನೆಗಳು, ಕಾಫಿ ತೋಟಗಳಲ್ಲಿ ಬೀಡು ಬಿಡುತ್ತಿವೆ. ನಿರಂತರ ದಾಳಿ ನಡೆಸಿ ಫಸಲು ನಾಶಗೊಳಿಸುತ್ತಿದೆ. ಇದರಿಂದ ಹಲವು ಸಾವು–ನೋವುಗಳು ಸಂಭವಿಸಿವೆ. ಕಾಡಾನೆ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟಬೇಕೆಂದು ತರಾಟೆ ತೆಗೆದುಕೊಂಡರು.


ಕಾಡಾನೆ ದಾಳಿಯಿಂದ ವೃದ್ಧೆ ಮೃತಪಟ್ಟ ಸ್ಥಳಕ್ಕೆ ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಮೇರಿಯಂಡ ಸಂಕೇತ್ ಪೂವಯ್ಯ ಭೇಟಿ ನೀಡಿ, ಪರಿಶೀಲಿಸಿದರು.

ಪಿ.ಎಂ.ಸೀಮಾ ಮಾತನಾಡಿ, ಕಾಡುಪ್ರಾಣಿಗಳ ಹಾವಳಿ ತಡೆಗಟ್ಟುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಅನುಮತಿ ಸಿಕ್ಕಿದ ನಂತರ ದಾಳಿ ನಡೆಸಿದ ಆನೆಯನ್ನು ಸೆರೆ ಹಿಡಿಯಲು ಕ್ರಮ ಕೈಗೊಳ್ಳಲಾಗುವುದು. ಮೃತಪಟ್ಟ ವೃದ್ಧೆ ಕುಟುಂಬಕ್ಕೆ ತುರ್ತು ಪರಿಹಾರವಾಗಿ 5 ಲಕ್ಷ ರೂ. ನೀಡಲಾಗಿದ್ದು, ಮರಣೋತ್ತರ ಪರೀಕ್ಷೆ ವರದಿ ನಂತರ ಉಳಿದ 10 ಲಕ್ಷ ರೂ. ನೀಡಲಾಗುವುದು ಎಂದರು.

ನಂತರ ಸಿದ್ದಾಪುರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ, ಶವವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಯಿತು. ಇದೇ ವೇಳೆ ಗ್ರಾಪಂ ಅಧ್ಯಕ್ಷ ಮೇಕೇರಿರ ಅರುಣ್ ಕುಮಾರ್, ಜಿಪಂ ಮಾಜಿ ಸದಸ್ಯ ಗಣೇಶ್, ಎಸಿಎಫ್ ಗೋಪಾಲ್, ಅರಣ್ಯಾಧಿಕಾರಿಗಳಾದ ಮಹದೇವ, ಆರ್‌ಎಫ್‌ಒ ಶಿವರಾಮ್, ಗಂಗಾಧರ, ದೇವರಾಜ್, ವಿರಾಜಪೇಟೆ ಡಿವೈಎಸ್‌ಪಿ ಗಂಗಾಧರಪ್ಪ, ವೃತ್ತ ನಿರೀಕ್ಷಕ ಪಿ.ಕೆ.ರಾಜು, ಠಾಣಾಧಿಕಾರಿ ಶಿವಣ್ಣ, ಸಿಬ್ಬಂದಿ ಹಾಜರಿದ್ದರು.

ಇದೇ ವೇಳೆ ವಿರಾಜಪೇಟೆ ಶಾಸಕ ಎ.ಎಸ್. ಪೊನ್ನಣ್ಣ, ಹಿರಿಯ ಅರಣ್ಯಾಧಿಕಾರಿಗಳನ್ನು ಸಂಪರ್ಕಿಸಿ ಘಟನೆ ವಿವರ ಪಡೆದರು. ಆನೆ ಕಾಡಿಗಟ್ಟಲು ತುರ್ತು ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದರು. ಸ್ಥಳಕ್ಕೆ ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಮೇರಿಯಂಡ ಸಂಕೇತ್ ಪೂವಯ್ಯ ಭೇಟಿ ನೀಡಿ, ಕುಟುಂಬಕ್ಕೆ ಸಾಂತ್ವನ ಹೇಳಿ, ಕಾಡುಪ್ರಾಣಿಗಳ ಹಾವಳಿ ತಡೆಗಟ್ಟಲು ಮುಂಜಾಗ್ರತ ಕ್ರಮ ಕೈಗೊಳ್ಳುವುದರೊಂದಿಗೆ ಮೃತ ವೃದ್ಧೆ ಕುಟುಂಬಕ್ಕೆ ತಕ್ಷಣ ತುರ್ತು ಪರಿಹಾರ ನೀಡಬೇಕೆಂದು ಸೂಚನೆ ನೀಡಿದರು.

ಸಾರಿಗೆ ಬಸ್ ಚಾಲಕನ ಮೇಲೆ ಹಲ್ಲೆ



ಗೋಣಿಕೊಪ್ಪ: ಓವರ್ ಟೇಕ್ ವಿಚಾರವಾಗಿ ಸಾರಿಗೆ ಬಸ್ ಅಡ್ಡಗಟ್ಟಿ ಚಾಲಕನ ಮೇಲೆ ಖಾಸಗಿ ಬಸ್ ಚಾಲಕ ಹಾಗೂ ನಿರ್ವಾಹಕ ಹಲ್ಲೆ ನಡೆಸಿರುವ ಘಟನೆ ಪೊನ್ನಂಪೇಟೆಯಲ್ಲಿ ಶುಕ್ರವಾರ ನಡೆದಿದೆ. ಓವರ್ ಟೇಕ್ ವಿಚಾರವಾಗಿ ಸಾರಿಗೆ ಬಸ್ ಅನ್ನು ಅಡ್ಡಗಟ್ಟಿದ ಖಾಸಗಿ ಬಸ್ ಚಾಲಕ ಹಾಗೂ ನಿರ್ವಾಹಕ ಸಿನಿಮಿಯ ರೀತಿ ಸಾರಿಗೆ ಬಸ್ ಚಾಲಕ ಯಶವಂತ ಹೊಟ್ಟೆಯ ಕೆಳಭಾಗಕ್ಕೆ ಒದ್ದು, ಆತನನ್ನು ಎಳೆದಾಡಿದ್ದಾರೆ. ಅಲ್ಲದೆ ಸಾರ್ವಜನಿಕವಾಗಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಈ ದೃಶ್ಯವನ್ನು ಸಾರ್ವಜನಿಕರು ಮೊಬೈಲ್‌ನಲ್ಲಿ ಚಿತ್ರೀಕರಿಸಿದ್ದಾರೆ.

ಹಲ್ಲೆಗೊಳಗಾದ ಚಾಲಕ ಯಶವಂತ ಅವರಿಗೆ ಗೋಣಿಕೊಪ್ಪ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ. ಘಟನೆ ಬಗ್ಗೆ ಕೆಎಸ್‌ಆರ್‌ಟಿಸಿ ಸಿಬ್ಬಂದಿ ಆಕ್ರೋಶ ವ್ಯಕ್ತಪಡಿಸಿದ್ದು, ಈ ರೀತಿ ಹಲ್ಲೆ ನಡೆದರೆ, ನಮಗೆ ಸುರಕ್ಷತೆ ಎಲ್ಲಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಹಲ್ಲೆ ನಡೆಸಿದ ವ್ಯಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ.

ಕೇಂದ್ರದ ಹಿಂದುಳಿದ ವರ್ಗಗಳ ಪಟ್ಟಿಗೆ ಕೊಡವರನ್ನು ಸೇರ್ಪಡೆಗೊಳಿಸಿ

ಸಂಸದ ಯದುವೀರ್‌ರಿಗೆ ಯುಕೊ ಸಂಘಟನೆ ಮನವಿ ಸಲ್ಲಿಕೆ


ಮೈಸೂರಿನಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಯುಕೊ ಸಂಘಟನೆ ಸದಸ್ಯರು ಮನವಿ ಸಲ್ಲಿಸಿದರು.

ಮಡಿಕೇರಿ, ಆ.30–ಕೊಡವರನ್ನು ಕೇಂದ್ರದ ಹಿಂದುಳಿದ ವರ್ಗಗಳ ಪಟ್ಟಿಗೆ ಸೇರ್ಪಡೆಗೊಳಿಸುವಂತೆ ಒತ್ತಾಯಿಸಿ ಯುನೈಟೆಡ್ ಕೊಡವ ಆರ್ಗನೈಜೇಷನ್(ಯುಕೊ) ಸಂಘಟನೆ ಸದಸ್ಯರು ಕೊಡಗು–ಮೈಸೂರು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಮನವಿ ಸಲ್ಲಿಸಿದ್ದಾರೆ

ಯುಕೊ ಅಧ್ಯಕ್ಷ ಕೊಕ್ಕಲೆಮಾಡ ಮಂಜು ಚಿಣ್ಣಪ್ಪ ನೇತೃತ್ವದಲ್ಲಿ ಮೈಸೂರಿನಲ್ಲಿ ಸಂಸದ ಯದುವೀರ್ ಅವರನ್ನು ಭೇಟಿ ಮಾಡಿದ ನಿಯೋಗ, ಕೊಡವ ಜನಾಂಗ ರಾಜ್ಯದ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಪ್ರವರ್ಗ 3ಎ ಅಡಿಯಲ್ಲಿ ವರ್ಗೀಕರಣಗೊಂಡು ಶೈಕ್ಷಣಿಕ ಹಾಗೂ ಔದ್ಯೋಗಿಕ ಮೀಸಲಾತಿಗೆ ಭಾಜನವಾಗಿದೆ. ಆದರೆ, ಕೇಂದ್ರದ ಹಿಂದುಳಿದ ವರ್ಗಗಳ ಪಟ್ಟಿಯಿಂದ ಕೊಡವರನ್ನು ಕೈಬಿಡಲಾಗಿದ್ದು, ಇದರಿಂದ ಕೇಂದ್ರ ಸರ್ಕಾರದ ಶೈಕ್ಷಣಿಕ ಹಾಗೂ ಔದ್ಯೋಗಿಕ ಮೀಸಲಾತಿಯಲ್ಲಿ ಅನ್ಯಾಯವಾಗುತ್ತಿದೆ. ಈ ನಿಟ್ಟಿನಲ್ಲಿ ಕೊಡವರನ್ನು ಹಿಂದುಳಿದ ವರ್ಗಗಳ ಕೇಂದ್ರದ ಪಟ್ಟಿಗೆ ಸೇರ್ಪಡೆಗೊಳಿಸುವಂತೆ ಮನವಿ ಮಾಡಿತು.

ಕೇಂದ್ರ ಸರ್ಕಾರ ಯುಜಿಸಿ ಸಹಯೋಗದಲ್ಲಿ ಅಳಿವಿನಂಚಿನಲ್ಲಿರುವ ಭಾಷೆಗಳ ಅಭಿವೃದ್ಧಿ ನಿಟ್ಟಿನಲ್ಲಿ ದಾಖಲೀಕರಣ, ಅಧ್ಯಯನ ಹಾಗೂ ಸಂರಕ್ಷಣೆ ಧ್ಯೇಯದೊಂದಿಗೆ ಎಸ್‌ಪಿಪಿಇಎಲ್ ಹಾಗೂ ಅಸ್ಮಿತ ಎಂಬ ಎರಡು ಯೋಜನೆಗಳನ್ನು ಪ್ರಾರಂಭಿಸಲಾಗಿದೆ. ಈ ಯೋಜನೆಗೆ ಯುನೆಸ್ಕೋ ವರದಿ ಆಧಾರದಲ್ಲಿ ಅಳಿವಿನಂಚಿನಲ್ಲಿರುವ ಕೊಡವ ಜನಾಂಗ ಅರ್ಹತೆ ಹೊಂದಿದ್ದು, ಈ ಯೋಜನೆಗೆ ಕೊಡವ ಭಾಷೆ ಪರಿಗಣಿಸುವಂತೆ ಆಗ್ರಹಿಸಲಾಯಿತು. ಇದೇ ವೇಳೆ ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಮಾತನಾಡಿ, ಕೊಡವರ ಐತಿಹಾಸಿಕ ಹಿನ್ನೆಲೆ, ದೇಶಕ್ಕೆ ಅವರ ಕೊಡುಗೆ ಹಾಗೂ ಸಮಸ್ಯೆಗಳ ಕುರಿತು ಸಂಸದ ಯದುವೀರ್ ಅವರಿಗೆ ತಿಳಿಸಿ, ಕೊಡವರ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿದರು.

ಮನವಿ ಸ್ವೀಕರಿಸಿ ಮಾತನಾಡಿದ ಸಂಸದ ಯದುವೀರ್, ಮನವಿಯಲ್ಲಿನ ಅಂಶಗಳನ್ನು ಪರಿಗಣಿಸಿ, ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

ಯುಕೊ ನಿಯೋಗದ ಚೆಪ್ಪುಡಿರ ಸುಜು ಕರುಂಬಯ್ಯ, ಕಳ್ಳಿಚಂಡ ರಾಬಿನ್ ಸುಬ್ಬಯ್ಯ, ನೆಲ್ಲಮಕ್ಕಡ ಜೆಫ್ರಿ ಮಾದಯ್ಯ, ಅಜ್ಜಿನಿಕಂಡ ಸೂರಜ್ ತಿಮ್ಮಯ್ಯ, ಮಚ್ಚಾಮಾಡ ಅರುಣ ಸೋಮಯ್ಯ, ರಮೇಶ್, ಬೊಳಿಯಂಗಡ ಬೋಪಣ್ಣ, ಪುದಿಯೊಕ್ಕಡ ದಿನೇಶ್, ತೀತಿಮಾಡ ಬೋಸ್ ಅಯ್ಯಪ್ಪ, ಪೊಂಜಂಡ ಗಿರಿ, ಚೆರಿಯಪಂಡ ವಿಶು ಕಾಳಪ್ಪ, ಕೊಟ್ರಂಗಡ ಪೆಮ್ಮಯ್ಯ, ಚೆಪ್ಪುಡಿರ ಪ್ರತಿಮಾ ಕರುಂಬಯ್ಯ, ಕಳ್ಳಿಚಂಡ ದೀನ ಉತ್ತಪ್ಪ, ಬೊಳ್ಳಚೆಟ್ಟಿರ ಮೈನಾ ಕಾಳಪ್ಪ, ಕೊಕ್ಕಲೆಮಾಡ ರತಿ ಕುಶಾಲಪ್ಪ ಹಾಜರಿದ್ದರು.

ಶಾಲಾ ವಾಹನ, ಕಾರಿಗೆ ಕ್ಯಾಂಟರ್ ಡಿಕ್ಕಿ: ಶಿಕ್ಷಕಿಯರು ಸೇರಿ ಹಲವರಿಗೆ ಗಾಯ

ಚಾಲಕನ ಸಮಯ ಪ್ರಜ್ಞೆ...

ಕ್ಯಾಂಟರ್ ಡಿಕ್ಕಿಯಿಂದ ಹಳ್ಳಕ್ಕೆ ಬೀಳಬಹುದಾದ ಶಾಲಾ ವಾಹನವನ್ನು ಚಾಲಕ ತನ್ನ ಸಮಯ ಪ್ರಜ್ಞೆಯಿಂದಾಗಿ ನಿಲ್ಲಿಸಿ ಹೆಚ್ಚಿನ ಅಪಾಯವಾಗುವುದನ್ನು ತಪ್ಪಿಸಿದ್ದಾನೆ. ಒಂದು ವೇಳೆ ವಾಹನ ಹಳ್ಳಕ್ಕೆ ಬಿದ್ದಿದ್ದಲ್ಲಿ ದೊಡ್ಡ ಅನಾಹುತ ಸಂಭವಿಸುವ ಸಾಧ್ಯತೆ ಇತ್ತು.



ಶ್ರೀರಂಗಪಟ್ಟಣ,ಆ.30–ಸರಕು ತುಂಬಿದ್ದ ಕ್ಯಾಂಟರ್‌ವೊಂದು ಶಾಲಾ ಶಿಕ್ಷಕರಿದ್ದ ವಾಹನ ಹಾಗೂ ಕಾರಿಗೆ ಡಿಕ್ಕಿ ಹೊಡೆದ ಪರಿಣಾಮ ಶಿಕ್ಷಕಿಯರು ಸೇರಿದಂತೆ ಹಲವರು ಗಾಯಗೊಂಡಿರುವ ಘಟನೆ ತಾಲೂಕಿನ ದರಸಗುಪ್ಪೆ ಬಳಿ ನಡೆದಿದೆ.

ಪಾಂಡವಪುರದಿಂದ ಮೈಸೂರು ಕಡೆಗೆ ಅತಿ ವೇಗದಿಂದ ಬರುತ್ತಿದ್ದ ಕ್ಯಾಂಟರ್ ಚಾಲಕನ ನಿಯಂತ್ರಣ ತಪ್ಪಿ ಹೋಗುತ್ತಿದ್ದ ಕಾರಿಗೆ ಡಿಕ್ಕಿ ಹೊಡೆದಿದೆ. ನಂತರ ಎದುರುಗಡೆ ಬರುತ್ತಿದ್ದ ಎಸ್‌ಟಿಜಿ ಶಾಲಾ ಶಿಕ್ಷಕರಿದ್ದ ವಾಹನಕ್ಕೂ ಡಿಕ್ಕಿ ಹೊಡೆದಿದೆ.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರ ಒಡೆತನಕ್ಕೆ ಸೇರಿದ ಎಸ್‌ಟಿಜಿ ಸಂಸ್ಥೆ ಶಾಲಾ ವಾಹನದಲ್ಲಿದ್ದ ಶಿಕ್ಷಕಿಯರಾದ ಚಂದ್ರಕಲಾ, ಜ್ಯೋತಿ, ಶೀಲಾ, ಸವಿತಾ ಹಾಗೂ ಚಾಲಕನ ತಲೆಗೆ ಪೆಟ್ಟಾಗಿದ್ದು, ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಸಣ್ಣಮಟ್ಟ ಗಾಯಗೊಂಡಿದ್ದ ಶಿಕ್ಷಕಿಯರಿಗೆ ಶ್ರೀರಂಗಪಟ್ಟಣ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ನಂತರ ಮೈಸೂರಿನ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಗಿದೆ.

ಜನಪ್ರತಿನಿದಿಗಳು ಇತ್ತ ಗಮನ ಹರಿಸಿ ಚಿಕ್ಕದಾಗಿರುವ ಹೆದ್ದಾರಿಯನ್ನು ಅಗಲೀಕರಣ ಮಾಡುವಂತೆ ಸ್ಥಳದಲ್ಲಿ ನೆರೆದಿದ್ದ ಸಾರ್ವಜನಿಕರು ಆಗ್ರಹಿಸಿದರು. ಈ ಸಂಬಂಧ ಶ್ರೀರಂಗಪಟ್ಟಣ ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೋಡಿಮಾರನಹಳ್ಳಿಯಲ್ಲಿ ಕುರಿಗಳ ಕಳವು

ಕಿಕ್ಕೇರಿ, ಆ.30– ಹೋಬಳಿಯ ಕೋಡಿಮಾರನಹಳ್ಳಿ ಗ್ರಾಮದಲ್ಲಿ ರೈತನ ಕೊಟ್ಟಿಗೆಯಲ್ಲಿದ್ದ ಕುರಿ ಕಳವು ಮಾಡಲಾಗಿದೆ. ರೈತ ಸತ್ಯಪ್ಪನವರು ಕೃಷಿಯೊಂದಿಗೆ ಕುರಿಸಾಕಾಣಿಕೆ ಮಾಡುತ್ತಿದ್ದರು. ತಮ್ಮ ಮನೆಯ ಕೊಟ್ಟಿಗೆಯಲ್ಲಿ ಎಂದಿನಂತೆ 17ಕುರಿ ಜೊತೆಗೆ 7ಟಗರು ಮರಿ, 2ಎಮ್ಮೆಗಳನ್ನು ಕಟ್ಟಿಹಾಕಿದ್ದರು. ಗುರುವಾರ ತಡರಾತ್ರಿ ಕಳ್ಳರು ಕೊಟ್ಟಿಗೆಗೆ ನುಗ್ಗಿ ಕೊಟ್ಟಿಗೆಯಲ್ಲಿದ್ದ 7ಟಗರು, 4ಕುರಿಗಳನ್ನು ಕಳವು ಮಾಡಿಕೊಂಡು ಪರಾರಿಯಾಗಿದ್ದಾರೆ.

ಕುರಿಗಳು ಸುಮಾರು 1.5ಲಕ್ಷ ರೂ. ಬೆಲೆಬಾಳುತ್ತಿದ್ದವು. ಕುರಿಸಾಕಾಣಿಕೆಯನ್ನೆ ಅವಲಂಬಿಸಿ ಬದುಕು ಕಟ್ಟಿಕೊಂಡಿದ್ದು, ಕುರಿ ಕಳವಿನಿಂದ ಬದುಕು ಅತಂತ್ರವಾಗಿದೆ ಎಂದು ರೈತ ಸತ್ಯಪ್ಪ ಅಳಲು ತೋಡಿದ್ದಾರೆ. ಮುಖಂಡ ಹರೀಶ್ ಮಾತನಾಡಿ ಈಚೆಗೆ ಕುರಿ ಕಳುವಿನ ಪ್ರಕರಣ ಹೆಚ್ಚುತ್ತಿವೆ. ಪೊಲೀಸರು ಗ್ರಾಮೀಣ ಭಾಗದಲ್ಲಿ ಗಸ್ತು ಹೆಚ್ಚಿಸಬೇಕು ಎಂದರು. ಕಿಕ್ಕೇರಿ ಪೊಲೀಸರು ದೂರು ದಾಖಲಿಸಿಕೊಂಡಿದ್ದಾರೆ.

ವಿದ್ಯಾಭ್ಯಾಸಕ್ಕೆ ಒಳ್ಳೆಯ ಅವಕಾಶಗಳಿವೆ

ಅಧ್ಯಾಪನ ವಿಜ್ಞಾನೋತ್ಸವ ಉದ್ಘಾಟಿಸಿದ ಶಿಕ್ಷಣ ಸಚಿವ ಮಧು ಬಂಗಾರಪ್ಪ

ಮಂಡ್ಯ,ಆ.30– ಹಿಂದಿನ ಕಾಲದಲ್ಲಿ ವಿದ್ಯಾಭ್ಯಾಸಕ್ಕೆಂದು ಹೆಚ್ಚಿನ ಆಯ್ಕೆಯ ವಿಷಯಗಳು ಸಿಗುತ್ತಿರಲಿಲ್ಲ ಇದೀಗ ವಿದ್ಯಾಭ್ಯಾಸ ವಿಚಾರದಲ್ಲಿ ಮಕ್ಕಳಿಗೆ ಒಳ್ಳೆಯ ಮತ್ತು ಉತ್ತಮ ಆಯ್ಕೆಗಳಿದ್ದು, ಉತ್ತಮ ವಿದ್ಯಾಭ್ಯಾಸ ಕೊಡಿಸುವ ಜವಾಬ್ದಾರಿ ಪೋಷಕರಿಗೆ ಮತ್ತು ಕಲಿಸುವ ಜವಾಬ್ದಾರಿ ಶಿಕ್ಷಕರಿಗಿದೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್.ಮಧು ಬಂಗಾರಪ್ಪ ಸಲಹೆ ನೀಡಿದರು.

ಜಿಲ್ಲಾಡಳಿತ, ಶಾಲಾ ಶಿಕ್ಷಣ ಇಲಾಖೆ, ಇಂಡಿಯನ್ ಇನ್ಸಿಟ್ಯೂಟ್ ಆಫ್ ಸೈನ್ಸ್, ಇಂಡಿಯನ್ ಸೈನ್ಸ್ ರಿಸರ್ಚ್ ಆರ್ಗನೈಜೇಷನ್ ಹಾಗೂ ಅಧ್ಯಾಪನ ಪಬ್ಲಿಕ್ ಚಾರಿಟೇಬಲ್ ಟ್ರಸ್ಟ್ ಇವರ ಆಶ್ರಯದಲ್ಲಿ ನಗರದ ಖಾಸಗಿ ಹಾಲ್‌ನಲ್ಲಿ ಶುಕ್ರವಾರ ನಡೆದ ಅಧ್ಯಾಪನ ವಿಜ್ಞಾನೋತ್ಸವ 2024 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಕರು ಮಕ್ಕಳಿಗೆ ಅವರ ಜೀವನ ರೂಪಿಸಲು ವೈದ್ಯ, ಇಂಜಿನಿಯರ್, ವಿಜ್ಞಾನಿ, ಹಾಡುಗಾರಿಕೆ, ರಾಜಕೀಯ ಸೇರಿದಂತೆ ಹಲವಾರು ಉತ್ತಮ ರಂಗಗಳಿವೆ. ಅವುಗಳನ್ನು ಅವರಿಗೆ ಪರಿಚಯಿಸಿಕೊಡಿ ಇದರಿಂದ ಅವರು ತಮ್ಮ ಆಸಕ್ತಿ ಇರುವ ವಿಷಯದಲ್ಲಿ ಹೆಚ್ಚಿನ ಅಧ್ಯಯನ ಮಾಡಲಿ ಎಂದರು.

ಚಿಕ್ಕ ವಯಸ್ಸಿನಲ್ಲಿ ಮಕ್ಕಳ ಗ್ರಹಿಕೆಯ ಶಕ್ತಿ ಹೆಚ್ಚಿರುತ್ತದೆ. ಜ್ಞಾನ ಗಳಿಸುವ ದಾರಿಯನ್ನು ಶಿಕ್ಷಕರು ಮಾಡಿಕೊಡಬೇಕು. ರಾಜ್ಯದಲ್ಲಿ ಸುಮಾರು 60,000 ಸರ್ಕಾರಿ ಶಾಲೆಗಳಿವೆ. 56 ಲಕ್ಷ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಮುಂದಿನ 4 ವರ್ಷಗಳಲ್ಲಿ ಹೆಚ್ಚು ಮಕ್ಕಳು ಸರ್ಕಾರಿ ಶಾಲೆಗೆ ದಾಖಲಾಗಬೇಕು ಎಂಬ ಉದ್ದೇಶದಿಂದ ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಹಾಲು, ಮೊಟ್ಟೆ, ಬಿಸಿಯೂಟ ಸೇರಿದಂತೆ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ.


ಅಧ್ಯಾಪನ ವಿಜ್ಞಾನೋತ್ಸವ ಉದ್ಘಾಟಿಸಿದ ಶಿಕ್ಷಣ ಸಚಿವ ಮಧು ಬಂಗಾರಪ್ಪ

ಮುಂದಿನ 4 ವರ್ಷಗಳಲ್ಲಿ 55 ಲಕ್ಷ ಮಕ್ಕಳ ದಾಖಲಾತಿ ಮಾಡಲು ಗುರಿ ಹೊಂದಲಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜಿಲ್ಲಾ ವ್ಯಾಪ್ತಿಯ ಖಾಸಗಿ ಹಾಗೂ ಸರ್ಕಾರಿ ವಿದ್ಯಾ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 5ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ ವಿಜ್ಞಾನ ತರಂಗ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಇದೇ ಸಂದರ್ಭದಲ್ಲಿ ಜಿಲ್ಲೆಯ ಉತ್ತಮ ಬಿಇಒ ಮಹಾದೇವ, ಉತ್ತಮ ಶಾಲೆ ಕಾರ್ಮೆಲ್ ಕಾನ್ವೆಂಟ್, ಉತ್ತಮ ವಿಜ್ಞಾನ ಶಿಕ್ಷಕ ಮೂರ್ತಿ ಪಿ.ವಿ.ಎನ್, ವಿಜ್ಞಾನ ವಸ್ತು ಪ್ರದರ್ಶನದಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಸಾಂಕೇತಿಕವಾಗಿ ಬಹುಮಾನ ವಿತರಿಸಲಾಯಿತು.

ವೇದಿಕೆಯಲ್ಲಿ ಶಾಸಕರಾದ ಪಿ.ರವಿಕುಮಾರ್ ಗಣಿಗ, ದರ್ಶನ್ ಪುಟ್ಟಣ್ಣಯ್ಯ, ಕೆ.ಎಂ. ಉದಯ್‌ಗೌಡ, ಜಿ.ಪಂ. ಸಿಇಒ ಶೇಖ್ ತನ್ವೀರ್ ಆಸೀಫ್, ಇಸ್ರೋ ಹಿರಿಯ ವಿಜ್ಞಾನಿ ಪಿ.ವಿ.ಎನ್. ಮೂರ್ತಿ, ಪತ್ರಕರ್ತ ಪ್ರವೀಣ್ ಸೇರಿದಂತೆ ಹಲವು ಮಂದಿ ಉಪಸ್ಥಿತರಿದ್ದರು.

ಪರೀಕ್ಷಾ ಕೇಂದ್ರದ ಸುತ್ತ ನಿಷೇಧ

ಮಂಡ್ಯ,ಆ.30– ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಕಂಡಕ್ಟರ್ (RPC) ಹುದ್ದೆಗಳ ಪರೀಕೆಯು ಸೆ.1 ರಂದು ನಡೆಯಲಿದೆ. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಕಂಡಕ್ಟರ್ ಹುದ್ದೆಗಳ ಪರೀಕ್ಷೆಯು ಸುಗಮವಾಗಿ ನಡೆಯಲು ಮಂಡ್ಯ ತಾಲೂಕಿನ 6 ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಪರೀಕ್ಷಾ ದಿನಗಳಂದು 200 ಮೀಟರ್ ವ್ಯಾಪ್ತಿಯ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಿದೆ. ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಇರುವ ಜೆರಾಕ್ಸ್ ಮತ್ತು ಕಂಪ್ಯೂಟರ್/ಸೈಬರ್ ಅಂಗಡಿಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚುವಂತೆ ಜಿಲ್ಲಾಧಿಕಾರಿ ಡಾ.ಕುಮಾರ ಅವರು ಆದೇಶ ಹೊರಡಿಸಿದ್ದಾರೆ.

ಸಾಹಿತ್ಯ ಸಮ್ಮೇಳನದಲ್ಲಿ ರುಚಿ–ಶುಚಿಯಾದ ಆಹಾರ ಬಡಿಸಲು ಸಿದ್ಧತೆ

ಸಮ್ಮೇಳನದಲ್ಲಿ ಭಾಗವಹಿಸುವವರಿಗೆ ರಾಗಿಮುದ್ದೆ, ರಾಗಿ ರೊಟ್ಟಿ, ಹುಚ್ಚೆಳ್ಳು ಚಟ್ನಿ, ಬೆಲ್ಲದ ಮಿಠಾಯಿ, ಬೆಲ್ಲದ ಮೈಸೂರು ಪಾಕ್, ಕಜ್ಜಾಯ, ರವೆಉಂಡೆ, ಚಪಾತಿ, ಶೇಂಗಾ ಚಟ್ನಿ, ಒಬ್ಬಟ್ಟು, ಪೊಂಗಲ್, ಪುಳಿಯೋಗರೆ, ಜೋಳದ ರೊಟ್ಟಿ, ಹುರುಳಿಕಾಳು ಬಸ್ಸಾರು, ಮೊಳಕೆ ಕಾಳು ಸಾರು, ಮೊಸಪ್ಪಿನ ಸಾರು, ಉಪ್ಸಾರು, ಮುಂತಾದ ವಿವಿಧ ರೀತಿಯ ತಿನಿಸುಗಳನ್ನು ಉಣಬಡಿಸುವ ಬಗ್ಗೆ ಚರ್ಚಿಸಲಾಯಿತು.

ಮಂಡ್ಯ, ಆ.30– ಸಕ್ಕರೆಯ ನಾಡು ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸುವ ಪ್ರತಿಯೊಬ್ಬರಿಗೂ ಮಂಡ್ಯ ಸೊಗಡಿನ ರುಚಿಯಾದ ಆಹಾರವನ್ನು ಉಣಬಡಿಸಲು ಸಿದ್ಧತೆ ಮಾಡಿಕೊಳ್ಳಿ ಎಂದು ಆಹಾರ ಸಮಿತಿ ಅಧ್ಯಕ್ಷ ಹಾಗೂ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಅಹಾರ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಾಹಿತ್ಯ ಸಮ್ಮೇಳನಕ್ಕೆ ಬರುವ ಪ್ರತಿಯೊಬ್ಬರಿಗೂ ಯಾವುದೇ ತೊಂದರೆ, ನೂಕು ನುಗ್ಗಲು ಉಂಟಾಗದಂತೆ 3 ದಿನಗಳ ಕಾಲ ಬೆಳಗಿನ ಉಪಹಾರ, ಮಧ್ಯಾಹ್ನದ ಊಟ, ರಾತ್ರಿ ಊಟ ದೊರಕಬೇಕು. ಆಹಾರ ಬಿಸಿಯಾಗಿ ಸವಿಯುವ ಪ್ರತಿಯೊಬ್ಬರು ಮಂಡ್ಯ ಜಿಲ್ಲೆಯನ್ನು ಸದಾ ನೆನಪಿನಲ್ಲಿ ಇಡುವ ರೀತಿ ಇರಬೇಕು ಎಂದರು.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಕಾರ್ಯಕ್ರಮಕ್ಕೆ ಆಗಮಿಸುವ ಪ್ರತಿಯೊಬ್ಬರನ್ನು ಅತಿಥಿಗಳಾಗಿ ಬಹಳ ಆತ್ಮೀಯತೆಯಿಂದ ಸ್ವಾಗತಿಸಿ ಅತಿಥಿ ಸತ್ಕಾರ ಮಾಡಲು ಎಲ್ಲರೂ ಸ್ವಯಂ ಸೇವಕರಾಗಿ ಕಾರ್ಯನಿರ್ವಹಿಸಬೇಕು. ಮಧ್ಯಾಹ್ನದ ವೇಳೆ ಬಿಸಿಲಿನ ತಾಪ ಹೆಚ್ಚಿರುತ್ತದೆ. ತಂಪಾಗಿ ಮೂರು ದಿನಗಳ ಕಾಲ ಒಂದೊಂದು ಪಾನಕ ನೀಡಿ. ನಿಂಬೆಹಣ್ಣಿನ ಪಾನಕ, ಕಬ್ಬಿನ ಹಾಲು, ಹಿರಳಿಕಾಯಿ ಜ್ಯೂಸ್, ಖರಬೂಜದ ಪಾನಕ ಸೇರಿದಂತೆ ಸೂಕ್ತವಾದ ಪಾನಕ ನೀಡಲು ವ್ಯವಸ್ಥೆ ಮಾಡಲು ಸೂಚಿಸಿದರು.

ನೊಂದಣಿ ಮಾಡಿಕೊಂಡು ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಆಗಮಿಸುವವರಿಗೆ ವಿಶೇಷವಾಗಿ ಬಾಳೆ ಎಲೆ ಊಟದ ವ್ಯವಸ್ಥೆ ಮಾಡಬಹುದೇ ಎಂಬುದರ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಬೇಕು. ಸಾಹಿತ್ಯ ಸಮ್ಮೇಳನದಲ್ಲಿ ಉತ್ತರ ಕರ್ನಾಟಕ ಭಾಗದ ಜನರು ಹೆಚ್ಚು ಭಾಗವಹಿಸಲಿದ್ದಾರೆ. ಉತ್ತರ ಕರ್ನಾಟಕ ಆಹಾರ ಖಾದ್ಯವನ್ನು ಸಹ ನೀಡುವುದು ಉತ್ತಮ ಎಂದು ಸಲಹೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್‌ನ ಉಪಕಾರ್ಯದರ್ಶಿ ಎಂ.ಬಾಬು, ಕನ್ನಡ ಸಾಹಿತ್ಯ ಸಮ್ಮೇಳನದ ಸಮನ್ವಯ ಸಮಿತಿ ಅಧ್ಯಕ್ಷೆ ಡಾ.ಮೀರಾ ಶಿವಲಿಂಗಯ್ಯ, ಸದಸ್ಯ ಕಾರ್ಯದರ್ಶಿ ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಉಪನಿರ್ದೇಶಕ ಕೃಷ್ಣಕುಮಾರ್, ಸಂಚಾಲಕರು ಹಾಗೂ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ತುಷಾರಮಣಿ, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ಸೋಮಶೇಖರ್, ಗೌರವ ಕಾರ್ಯದರ್ಶಿ ವಿ.ಹರ್ಷ ಭಾಗವಹಿಸಿದ್ದರು.

ಉಪಚುನಾವಣೆ ನಡೆಸುವಂತೆ ಒತ್ತಾಯಿಸಿ ಮನವಿ

ಚಾಮರಾಜನಗರ, ಆ.30–ತಾಲೂಕಿನ ಸಾಗಡೆ ಗ್ರಾಮ ಪಂಚಾಯಿತಿಯಲ್ಲಿ ತೆರವಾಗಿರುವ ಸದಸ್ಯರ ಸ್ಥಾನಕ್ಕೆ ಉಪಚುನಾವಣೆ ನಡೆಸಿಕೊಡುವಂತೆ ಒತ್ತಾಯಿಸಿ ಬಿಜೆಪಿ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಎಸ್.ಆರ್.ಗುರುಪ್ರಸಾದ್ ಬೆಂಗಳೂರಿನಲ್ಲಿ ರಾಜ್ಯ ಚುನಾವಣಾ ಆಯೋಗದ ಆಯುಕ್ತರಿಗೆ ಮನವಿ ಸಲ್ಲಿಸಿದ್ದಾರೆ.

ಗ್ರಾಮ ಪಂಚಾಯಿತಿಯ ಸಾಗಡೆ 3ನೇ ವಾರ್ಡ್ ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿದ್ದು, 2023ರ ಆ.22ರಿಂದ ರಾಜೀನಾಮೆಯಿಂದ ಸದಸ್ಯ ಸ್ಥಾನ ತೆರವಾಗಿದೆ. ಆದರೆ, ಈ ಸ್ಥಾನಕ್ಕೆ ಇಲ್ಲಿಯವರೆಗೂ ಉಪಚುನಾವಣೆ ನಡೆಸಿಲ್ಲ. ಇದರಿಂದ ಕೆಲಸ ಕಾರ್ಯಗಳು ಸ್ಥಗಿತಗೊಂಡಿವೆ.


ಗ್ರಾಪಂ ಉಪಚುನಾವಣೆ ನಡೆಸಿಕೊಡುವಂತೆ ಒತ್ತಾಯಿಸಿ ಎಸ್.ಆರ್.ಗುರುಪ್ರಸಾದ್ ರಾಜ್ಯ ಚುನಾವಣಾ ಆಯೋಗದ ಆಯುಕ್ತರಿಗೆ ಮನವಿ ಸಲ್ಲಿಸಿದರು.

ಅದ್ದರಿಂದ ಕೂಡಲೇ ಉಪ ಚುನಾವಣೆ ನಡೆಸಿಕೊಡಬೇಕು ಎಂದು ಮನವಿ ಮಾಡಿದ್ದಾರೆ.

ಕಾಮಗಾರಿ ಸ್ಥಗಿತಗೊಳಿಸದಿದ್ದರೆ ಪ್ರತಿಭಟನೆ ಎಚ್ಚರಿಕೆ


ಸುದ್ದಿಗೋಷ್ಠಿಯಲ್ಲಿ ರೈತ ಕೂಲಿ ಸಂಗ್ರಾಮ ಸಮಿತಿ ಅಧ್ಯಕ್ಷ ಶಿವಣ್ಣ ಮಾತನಾಡಿದರು.

ಚಾಮರಾಜನಗರ, ಆ.30–ರೈತರ ಹುರುಳಿ ಫಸಲನ್ನು ನಾಶ ಮಾಡಿ ಜಮೀನಿನ ಮಧ್ಯೆ ಕ್ರಷರ್‌ಗಳು ಹೋಗಲು ನಿರ್ಮಿಸುತ್ತಿರುವ ರಸ್ತೆ ಕಾಮಗಾರಿ ಸ್ಥಗಿತಗೊಳಿಸದಿದ್ದರೆ ಜಿಲ್ಲಾಡಳಿತ ಭವನದ ಎದುರು ಪ್ರತಿಭಟನೆ ನಡೆಸುದಾಗಿ ರೈತ ಕೂಲಿ ಸಂಗ್ರಾಮ ಸಮಿತಿ ಅಧ್ಯಕ್ಷ ಶಿವಣ್ಣ ಎಚ್ಚರಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗುಂಡ್ಲುಪೇಟೆ ತಾಲೂಕಿನ ಹಿರೀಕಾಟಿ, ರಂಗೂಪುರ, ದೊಡ್ಡಹುಂಡಿ ಗ್ರಾಮ ವ್ಯಾಪ್ತಿಯ ರೈತರ ಜಮೀನನ್ನು ಒತ್ತುವರಿ ಮಾಡಿಕೊಂಡು, ಪ್ರಭಾವಿ ರಾಜಕಾರಣಿಯೊಬ್ಬರ ಅನುಕೂಲಕ್ಕಾಗಿ ರಸ್ತೆ ನಿರ್ಮಿಸಲು ತಹಸೀಲ್ದಾರ್ ಮುಂದಾಗಿದ್ದಾರೆ ಎಂದು ದೂರಿದರು.

ಕೆಲ ವರ್ಷಗಳ ಹಿಂದೆ ರಸ್ತೆ ನಿರ್ಮಿಸಲು ಹೊರಟಿದ್ದಾಗ ರೈತರು, ಅಧಿಕಾರಿಗಳು ಮತ್ತು ಗುತ್ತಿಗೆದಾರರ ವಿರುದ್ಧ ಪ್ರತಿಭಟನೆ ಮಾಡಿದ್ದರಿಂದ ರಸ್ತೆ ನಿರ್ಮಾಣ ನಿಲ್ಲಿಸಿದ್ದರು. ಆದರೆ, ಇದೀಗ ಅಲ್ಲಿ ಕ್ರಷರ್‌ಗಳ ದಾರಿಗಾಗಿ ತಹಸೀಲ್ದಾರ್ ಖುದ್ದು ನಿಂತು ರಸ್ತೆ ಮಾಡಿಸುತ್ತಿದ್ದು, ಇದಕ್ಕೆ ಸ್ಥಳೀಯ ಪೊಲೀಸರು ಸಾಥ್ ನೀಡಿದ್ದಾರೆ. ಇದರಿಂದ ರೈತರ ಫಸಲು ನಾಶವಾಗಿದ್ದು, ಈ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಧಿಕಾರಿ ಕ್ರಮವಹಿಸಿ ಬೆಳೆ ನಾಶಕ್ಕೆ ಪರಿಹಾರ ನೀಡಬೇಕು. ಜೊತೆಗೆ ರಸ್ತೆ ಕಾಮಗಾರಿಯನ್ನು ಸ್ಥಗಿತಗೊಳಿಸಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ರೈತ ಮುಖಂಡರಾದ ಶಿವಯ್ಯ ತೊಂಡವಾಡಿ, ಕೃಷ್ಣ, ನೀಲಕಂಠ ಹಿರೀಕಾಟಿ ಹಾಜರಿದ್ದರು.

ಎಂಎಸ್‌ಐಎಲ್ ಚಿಟ್‌ಫಂಡ್ ಶಾಖೆಗೆ ಚಾಲನೆ

ಚಾಮರಾಜನಗರ, ಆ.30–ರಾಜ್ಯ ಸರ್ಕಾರಿ ಸ್ವಾಮ್ಯದ ಎಂಎಸ್‌ಐಎಲ್ ಸಂಸ್ಥೆಯ ಚಿಟ್‌ಫಂಡ್ ಶಾಖೆಯನ್ನು ನಗರದ ಚಿಕ್ಕಅಂಗಡಿ ಬೀದಿಯ ರಂಗಶ್ರೀ ಕಾಂಪ್ಲೆಕ್ಸ್‌ನಲ್ಲಿ ಎಂಎಸ್‌ಐಎಲ್ ಅಧ್ಯಕ್ಷರಾದ ಶಾಸಕ ಸಿ.ಪುಟ್ಟರಂಗಶೆಟ್ಟಿ ಉದ್ಘಾಟಿಸಿದರು.

ನಂತರ ಮಾತನಾಡಿದ ಶಾಸಕರು, ಚೀಟಿ ವ್ಯವಹಾರದಲ್ಲಿ ಹಣ ಹೂಡಿ ಹಲವರು ಮೋಸ ಹೋಗಿರುವ ಪ್ರಕರಣಗಳು ಇವೆ. ಆದರೆ, ಎಂಎಸ್‌ಐಎಲ್ ಚಿಟ್‌ಫಂಡ್ ಸರ್ಕಾರದ ಸಂಸ್ಥೆಯಾಗಿದ್ದು, ಇಲ್ಲಿನ ವ್ಯವಹಾರ ಪಾರದರ್ಶಕವಾಗಿದೆ. ಜೊತೆಗೆ ಹಣಕ್ಕೆ ಭದ್ರತೆ ಇದೆ. ಇಲ್ಲಿನ ಜನರ ಆರ್ಥಿಕ ಅಭಿವೃದ್ಧಿಗೆ ಸಹಾಯಕವಾಗಲೆಂದು ಶಾಖೆ ತೆರೆಯಲಾಗಿದೆ ಎಂದರು.

ಎಂಎಸ್‌ಐಎಲ್ ಸಂಸ್ಥೆ ಅಧ್ಯಕ್ಷನಾಗಿ ನಾನು ಚಾಮರಾಜನಗರದಲ್ಲಿ ಚಿಟ್‌ಫಂಡ್ ಸ್ಥಾಪಿಸಬೇಕೆಂದು ಸೂಚಿಸಿದ್ದೆ. ಎಂಎಸ್‌ಐಎಲ್ ಸಂಸ್ಥೆ ಚಿಟ್‌ಫಂಡ್, ಮದ್ಯ ಮಾರಾಟ ಕಾರ್ಯಾಚರಣೆ, ನೋಟ್ ಪುಸ್ತಕ, ಲೇಖನ ಸಾಮಗ್ರಿ, ಜನೌಷಧ, ಟೂರ್ಸ್ ಮತ್ತು ಟ್ರಾವಲ್ಸ್ ಸೇರಿದಂತೆ ಇನ್ನಿತರ ವ್ಯವಹಾರಗಳಲ್ಲಿ ತೊಡಗಿಕೊಂಡಿದ್ದು ಲಾಭದಾಯಕವಾಗಿ ಮುಂದುವರೆದಿದೆ ಎಂದು ತಿಳಿಸಿದರು.


ಚಾಮರಾಜನಗರದಲ್ಲಿ ಎಂಎಸ್‌ಐಎಲ್ ಸಂಸ್ಥೆಯ ಚಿಟ್‌ಫಂಡ್ ಶಾಖೆಯನ್ನು ಎಂಎಸ್‌ಐಎಲ್ ಅಧ್ಯಕ್ಷ ಸಿ.ಪುಟ್ಟರಂಗಶೆಟ್ಟಿ ಉದ್ಘಾಟಿಸಿದರು.

ಈಗಾಗಲೇ ಎಂಎಸ್‌ಐಎಲ್ ಸಂಸ್ಥೆ ರಾಜ್ಯದಲ್ಲಿ 26 ಶಾಖೆ ಹೊಂದಿದ್ದು, ಚಾಮರಾಜನಗರದಲ್ಲಿ 27ನೇ ಶಾಖೆ ಆರಂಭಿಸಿದೆ. ಜಿಲ್ಲೆಯ ಜನರು ಚಿಟ್‌ಫಂಡ್ ಪ್ರಯೋಜನ ಪಡೆಯಬೇಕು. ಅತ್ಯಂತ ವಿಶ್ವಾಸಾರ್ಹವಾಗಿರುವ ಚಿಟ್‌ಫಂಡ್ ಯೋಜನೆಯನ್ನು ಸ್ವಸಹಾಯ ಗುಂಪುಗಳೂ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ಮಾಡಿದರು.

ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿ, ಎಂಎಸ್‌ಐಎಲ್ ಚಿಟ್‌ಫಂಡ್ ಸಂಸ್ಥೆಯಲ್ಲಿ ಹಣ ಹೂಡಿಕೆ ಮಾಡುವುದರಿಂದ ನಿಶ್ಚಿತವಾಗಿ ಲಾಭವಾಗಲಿದೆ. ಚಿಟ್‌ಫಂಡ್‌ನಿಂದ ಬರುವ ಲಾಭವನ್ನು ಒಳ್ಳೆಯ ಉದ್ದೇಶಗಳಿಗೆ ಬಳಕೆ ಮಾಡಿಕೊಳ್ಳಬೇಕು. ಇದರಿಂದ ಇನ್ನಷ್ಟು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿರುವ ಚಟುವಟಿಕೆಗಳನ್ನು ಗ್ರಾಹಕರು ಕೈಗೊಳ್ಳಬೇಕು ಎಂದರು.

ಚುಡಾ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನ, ನಗರಸಭೆ ಸದಸ್ಯ ಚಂದ್ರಶೇಖರ್, ಎಂಎಸ್‌ಐಎಲ್‌ನ ವ್ಯವಸ್ಥಾಪಕ ಮನೋಜ್ ಕುಮಾರ್ ಮಾತನಾಡಿದರು. ಚಿಟ್‌ಫಂಡ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕ ರಮಾಕಾಂತ್, ಡಿಸಿಎಫ್ ಡಾ. ಸಂತೋಷ್ ಕುಮಾರ್ ಉಪಸ್ಥಿತರಿದ್ದರು.

10 ಕೋಟಿ ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ

ಹನೂರು, ಆ.30–ಅಜ್ಜೀಪುರದಿಂದ ರಾಮಪುರ ಗ್ರಾಮದವರಿಗೆ 10 ಕೋಟಿ ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಪಡಿಸಲಾಗುತ್ತಿದೆ ಎಂದು ಶಾಸಕ ಎಂ.ಆರ್.ಮಂಜುನಾಥ್ ತಿಳಿಸಿದರು.

ತಾಲೂಕಿನ ಅಂಬಿಕಾಪುರ ಗ್ರಾಮದಲ್ಲಿ 3.75 ಕಿ.ಮೀ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಕ್ಷೇತ್ರ ವ್ಯಾಪ್ತಿ ರಸ್ತೆಗಳನ್ನು ದುರಸ್ತಿ ಪಡಿಸಲು ಸುಮಾರು 300 ಕೋಟಿ ರೂ. ಅಗತ್ಯವಿದೆ. ಪ್ರತಿವರ್ಷ ಶಾಸಕರಿಗೆ ಸರ್ಕಾರ 10 ಕೋಟಿ ರೂ. ಅನುದಾನ ನೀಡುತ್ತಿದೆ. ಆದರೆ, ಈ ಅನುದಾನದಲ್ಲಿ ಯಾವುದೇ ಅಭಿವೃದ್ಧಿ ಸಾಧ್ಯವಿಲ್ಲ. ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಸತೀಶ್ ಜಾರಕಿಹೊಳಿ ಅವರಿಗೆ ವಿಶೇಷ ಅನುದಾನ ನೀಡುವಂತೆ ಮನವಿ ಮಾಡಿದ್ದು, ಅವರು ಅನುದಾನ ನೀಡುವ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ಮುಂದಿನ ದಿನಗಳಲ್ಲಿ ಕ್ಷೇತ್ರದಲ್ಲಿ ಹಂತ ಹಂತವಾಗಿ ರಸ್ತೆ ದುರಸ್ತಿಗೊಳಿಸಲಾಗುವುದು. ಇದಕ್ಕೆ ಸಾರ್ವಜನಿಕರು ಸಹಕಾರ ನೀಡಬೇಕು. ನಾಲ್ ರೋಡ್ ಗ್ರಾಮದಿಂದ ಗರಿಕೆಕಂಡಿ ಗ್ರಾಮದವರೆಗೆ 36 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ಆದರೆ, ಕೆಲ ತಾಂತ್ರಿಕ ಸಮಸ್ಯೆಗಳಿಂದ ಅನುದಾನವಿದ್ದರೂ ಕಾಮಗಾರಿ ಪ್ರಾರಂಭವಾಗಿಲ್ಲ. ಮುಂದಿನ ದಿನಗಳಲ್ಲಿ ಸಮಸ್ಯೆ ಬಗೆಹರಿಯಲ್ಲಿದೆ ಎಂದರು.

ಇದೇ ವೇಳೆ ಚಾಮುಲ್ ಮಾಜಿ ಅಧ್ಯಕ್ಷ ಗುರುಮಲ್ಲಪ್ಪ, ಸೂಳೇರಿ ಪಾಳ್ಯ ಗ್ರಾಮ ಪಂಚಾಯಿತಿ ಅಧ್ಯಕ್ಷ ಮುತ್ತುರಾಜ್, ಅಜ್ಜೀಪುರ ಗ್ರಾಮ ಪಂಚಾಯಿತಿ ಅಧ್ಯಕ್ಷ ರುದ್ರಾನಾಯಕ್, ಎಇಇಗಳಾದ ಚಿನ್ನಣ್ಣ, ರಮೇಶ್, ರಾಮಸ್ವಾಮಿ ಮಹೇಶ್, ಮುಖಂಡರಾದ ವಿಜಯ್ ಕುಮಾರ್, ಮಂಜೇಶ್ ರೈತ ಮುಖಂಡರಾದ ಅಮ್ಜದ್ ಖಾನ್ ಹಾಜರಿದ್ದರು.


ಹನೂರು ತಾಲೂಕಿನ ಅಂಬಿಕಾಪುರ ಗ್ರಾಮದಲ್ಲಿ ರಸ್ತೆ ಅಭಿವೃದ್ಧಿಗೆ ಶಾಸಕ ಎಂ.ಆರ್.ಮಂಜುನಾಥ್ ಭೂಮಿಪೂಜೆ ನೆರವೇರಿಸಿದರು.

ಬಿಆರ್‌ಟಿಯಲ್ಲಿ ಎರಡು ಆನೆಗಳ ಕಳೇಬರ ಪತ್ತೆ

ಚಾಮರಾಜನಗರ, ಆ.30–ಬಿಳಿಗಿರಿ ರಂಗನಾಥಸ್ವಾಮಿ ದೇವಾಲಯ (ಬಿಆರ್‌ಟಿ) ಹುಲಿ ಸಂರಕ್ಷಿತ ಅರಣ್ಯ ಪ್ರದೇಶದ ಬೈಲೂರು ವನ್ಯಜೀವಿ ವಲಯ ಮತ್ತು ಯಳಂದೂರು ವನ್ಯಜೀವಿ ವಲಯ ವಿಭಾಗದಲ್ಲಿ ಎರಡು ಆನೆ ಕಳೇಬರಗಳು ಪತ್ತೆಯಾಗಿವೆ. ಬೈಲೂರು ವಲಯದ ಆಳದ ಕೆರೆಯ ಬಳಿ ಸುಮಾರು 45 ರಿಂದ 50 ವರ್ಷದ ಗಂಡಾನೆ ಕಳೇಬರ



ಪತ್ತೆಯಾಗಿದ್ದು, ಇದು 7 ರಿಂದ 8 ತಿಂಗಳ ಹಿಂದೆ ಸ್ವಾಭಾವಿಕವಾಗಿ ಮೃತಪಟ್ಟಿದೆ ಎಂದು ಅರಣ್ಯಾಧಿಕಾರಿಗಳು ಮಾಹಿತಿ ನೀಡಿದ್ದಾರೆ. ಯಳಂದೂರು ವಲಯದ ಬೇತಾಳಕಟ್ಟೆಯಲ್ಲಿ ಮತ್ತೊಂದು ಗಂಡಾನೆ ಆನೆ ಕಳೇಬರ ಪತ್ತೆಯಾಗಿದ್ದು, ಇದು 20 ರಿಂದ 40 ದಿನಗಳ ಹಿಂದೆ ಮೃತಪಟ್ಟಿರಬಹುದು ಎಂದು ಅಂದಾಜು ಮಾಡಲಾಗಿದೆ. ಎರಡು ಆನೆಗಳ ದಂತಗಳು ಸುರಕ್ಷಿತವಾಗಿದ್ದು, ಅರಣ್ಯ ಇಲಾಖೆ ಮುಂದಿನ ಕ್ರಮ ಕೈಗೊಂಡಿದೆ.



ಚನ್ನಬಸವಯ್ಯ ನಿಧನ

ಕುದೇರು, ಆ.30– ಚಾಮರಾಜನಗರ ತಾಲೂಕು ಕುದೇರು ಗ್ರಾಮದ ಯಜಮಾನ ಚನ್ನಬಸವಯ್ಯ(75) ಅನಾರೋಗ್ಯದಿಂದ ಶುಕ್ರವಾರ ರಾತ್ರಿ ನಿಧನರಾದರು. ಮೃತರು ಕಾಂಗ್ರೆಸ್ ಮುಖಂಡ ಪುತ್ರ ಕೆ.ಸಿ.ರೇವಣ್ಣ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಶನಿವಾರ(ಆ.31)ಮಧ್ಯಾಹ್ನ 12 ಗಂಟೆಗೆ ಕುದೇರು ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ ಸಂತಾಪ ಸೂಚಿಸಿದ್ದಾರೆ.

ಮೂರನೇ ಪುಟದಿಂದ

ವಾಹನ ಚಾಲಕರು ಹೈರಾಣ

ಆದರೆ ನಗದು ಶುಲ್ಕ ಪಾವತಿಗೆ ಸೀಮಿತವಾದ ಏಕೈಕ ಲೇನ್‌ನಲ್ಲಿ ಕೆಲವೊಮ್ಮೆ ಫಾಸ್ಟ್ ಟ್ಯಾಗ್ ಸೇವೆ ಸಮರ್ಪಕವಾಗಿ ಕಾರ್ಯ ನಿರ್ವಹಿಸುವುದಿಲ್ಲ. ಚಿಕ್ಕದಾಗಿರುವ ಕ್ಯಾಷ್ ಪದವನ್ನು ಗಮನಿಸದೆ ಆ ಲೇನ್‌ನಲ್ಲಿ ಹೋದವರು ತೊಂದರೆ ಅನುಭವಿಸುತ್ತಾರೆ. ಮುಂದೆ ಹೋಗಲಾಗದೆ, ಹಿಂದೆಯೂ ಬರಲಾಗದೆ ಸಂಕಷ್ಟ ದಲ್ಲಿ ಸಿಲುಕುತ್ತಾರೆ. ಆನ್‌ಲೈನ್ ವಹಿ ವಾಟು ಹೆಚ್ಚಾಗಿರುವ ಪ್ರಸ್ತುತ ದಿನಗಳಲ್ಲಿ ನಗದು ಇಟ್ಟುಕೊಳ್ಳುವವರು ಅಪರೂಪ. ಅಂತಹವರು ಹೀಗೆ ಟೋಲ್‌ನಲ್ಲಿ ಸಿಲುಕಿ ಪರಿತಪಿಸುತ್ತಾರೆ. ಶುಲ್ಕ ಪಾವತಿಗೆ ಹಣವಿಲ್ಲದೆ ಗಲಿಬಿಲಿಗೀಡಾಗುತ್ತಾರೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಮಾಮೂಲಿ ಕಸರತ್ತು ನಡೆಸಿ ಹಿಂದಕ್ಕೆ ಬಂದು ಬೇರೆ ಲೇನ್‌ನಲ್ಲಿ ಸಾಗಬೇಕಾಗುತ್ತದೆ.

ಗಲಾಟೆಯೂ ಆಗುತ್ತವೆ: ಇಂತಹ ಗೊಂದಲ ಸೃಷ್ಟಿಯಾದಾಗ ಗಲಾಟೆ–ಗದ್ದಲವೂ ಮಾಮೂಲಿ. ವಾಹನ ಹಿಂದಕ್ಕೆ ತೆಗೆಯುವ ವೇಳೆ ಹಿಂದಿನ ವಾಹನಗಳೂ ರಿವರ್ಸ್ ಚಲಿಸಬೇಕು. ಈ ವಿಚಾರಕ್ಕೆ ಚಾಲಕರ ನಡುವೆ ಜಗಳವಾಗುತ್ತದೆ. ಅಲ್ಲದೆ ಸರಿಯಾಗಿ ನೋಡಿಕೊಂಡು ಬರಬೇಕಲ್ವಾ ಎಂದು ಪ್ಲಾಜಾ ಸಿಬ್ಬಂದಿ, ನೀವು ಸರಿಯಾಗಿ ಕಾಣಿಸುವಂತೆ ಬೋರ್ಡ್ ಹಾಕಬೇಕಲ್ವಾ ಎಂದು ವಾಹನ ಚಾಲಕರು ಹೀಗೆ ವಾಗ್ವಾದಕ್ಕೂ ಕಾರಣವಾಗಿ ಇತರೆ ವಾಹನಗಳ ಸಂಚಾರಕ್ಕೂ ಅಡ್ಡಿಯುಂಟಾಗುತ್ತದೆ.

ಸ್ಪಷ್ಟ–ದೊಡ್ಡ ಫಲಕ ಹಾಕಿ: ಕೇವಲ ನಗದು ಪಾವತಿಗೆಂದೇ ಲೇನ್ ಮೀಸಲಿಟ್ಟು, ಅಲ್ಲಿ ಫಾಸ್ಟ್‌ಟ್ಯಾಗ್ ಹೊಂದಿರುವ ವಾಹನಗಳನ್ನು ನಿರ್ಬಂಧಿಸಬೇಕು. ಆ ಲೇನ್‌ನಲ್ಲಿ ದಪ್ಪ ಅಕ್ಷರದಲ್ಲಿ ಸ್ಪಷ್ಟವಾಗಿ ಕಾಣಿಸುವಂತೆ ಫಲಕ ಅಳವಡಿಸಿದರೆ ಈ ಸಮಸ್ಯೆ ಪರಿಹಾರವಾಗುತ್ತದೆ. ಕ್ಯಾಷ್ /ನಗದು ಎಂದು ದೊಡ್ಡದಾಗಿ ನಮೂದಿಸಿದರೆ ಅದನ್ನು ದೂರದಿಂದಲೇ ಗುರುತಿಸಬಹುದು. ಆಗ ಫಾಸ್ಟ್‌ಟ್ಯಾಗ್ ಇಲ್ಲದವರು ನಿಗದಿತ ಲೇನ್‌ನಲ್ಲೇ ಸಾಗುತ್ತಾರೆ. ಫಾಸ್ಟ್ ಟ್ಯಾಗ್ ಇರುವುವವರೂ ಬೇರೆ ಲೇನ್‌ನಲ್ಲಿ ಹೋಗುತ್ತಾರೆ. ಆಗ ಗೊಂದಲ–ಗದ್ದಲಕ್ಕೆ ಆಸ್ಪದವೇ ಇರುವುದಿಲ್ಲ. ಇದೊಂದು ಸರಳ ಕ್ರಮವನ್ನು ತ್ವರಿತವಾಗಿ ಕೈಗೊಳ್ಳಬೇಕು ಎಂದು ಇಂತಹದೇ ಪ್ರಸಂಗಗಳಿಂದ ತೊಂದರೆ ಅನುಭವಿಸಿದ ನಾಗರಿಕರು ಆಗ್ರಹಪಡಿಸಿದ್ದಾರೆ.

ವರ್ಷವಾಗಿದೆ, ಆದರೆ?: ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಲೋಕಾರ್ಪಣೆಗೊಂಡು ಒಂದು ವರ್ಷ ಕಳೆದರೂ ಇಂತಹ ಅಧ್ವಾನಗಳನ್ನು ಪರಿಹರಿಸಿಲ್ಲ. ಎಕ್ಸ್‌ಪ್ರೆಸ್ ವೇನಲ್ಲಿ ವಾಹನ ಕೆಟ್ಟು ನಿಂತರೆ ಅಥವಾ ಇಂಧನ ಮುಗಿದರೆ ಆ ವಾಹನ ಸವಾರರು ಪರಿಸ್ಥಿತಿ ಹೇಳ ತೀರದು. ರಾತ್ರಿ ವೇಳೆ ಇಂತಹ ತೊಂದರೆಯಾದರೆ ದುಷ್ಕರ್ಮಿಗಳಿಂದ ತೊಂದರೆಗೀಡಾಗಬಹುದು. ಹೋಟೆಲ್, ಪೆಟ್ರೋಲ್ ಬಂಕ್ ಸೇರಿದಂತೆ ಮೂಲಭೂತ ಸೌಕರ್ಯ ಕಲ್ಪಿಸಲು 1,400 ಕೋಟಿ ರೂ. ಬಿಡುಗಡೆ ಮಾಡಲಾಗಿದೆ ಎಂದು ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ತಿಳಿಸಿ ನಾಲ್ಕು ತಿಂಗಳಾದರೂ ಈ ನಿಟ್ಟಿನಲ್ಲಿ ಯಾವುದೇ ಪ್ರಕ್ರಿಯೆ ಆರಂಭವಾಗಿಲ್ಲ ಎಂದು ಸಾರ್ವಜನಿಕರು ಬೇಸರ ವ್ಯಕ್ತಪಡಿಸಿದ್ದಾರೆ.

ಪ್ರಮೋಷನ್ ಸಿಕ್ಕರೆ ಖುಷಿಯಾಗುತ್ತೆ

ಸಂತೋಷವಾಗುತ್ತದೆ ಎಂದರು. ಈ ಹಿಂದೆ ನಾಯಕತ್ವ ಬದಲಾವಣೆಯಾಗುವುದಾದರೆ ದಲಿತರು ಸಿಎಂ ಆಗಲಿ ಎಂದು ಸಿಎಂ ಸಿದ್ದರಾಮಯ್ಯ ಪಾಳಯ ಬ್ಯಾಟಿಂಗ್ ಮಾಡಿತ್ತು. ಪರಮೇಶ್ವರ್ ಅವರು ಸಹ ಸಿಎಂ ಆಗುವ ಆಸೆ ಇಲ್ಲ ಎಂದು ಹೇಳುವುದಕ್ಕೆ ನಾನು ಸನ್ಯಾಸಿಯಲ್ಲ ಎಂದಿದ್ದರು. ರಾಜ್ಯದಿಂದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಂತರ ದಲಿತ ಸಮುದಾಯದಿಂದ ಬಂದಿರುವ ಹಿರಿಯ ನಾಯಕ ಪರಮೇಶ್ವರ್ ಅವರು ಅನುಭವಿ ನಾಯಕರೂ ಹೌದು.

ಆಯುಕ್ತರ ವಿರುದ್ಧ ಪ್ರಕರಣ ದಾಖಲಿಸಿ

ಅನ್ವಯಿಸುವಂತೆ ಆದೇಶ ಮಾಡಿ ಅಕ್ರಮವಾಗಿ ನಿವೇಶನ ಹಂಚಿಕೆ ಮಾಡುತ್ತಿದ್ದಾರೆ ಎಂದು ಡಾ. ಕೆ.ವಿ. ರಾಜೇಂದ್ರ ಸರ್ಕಾರಕ್ಕೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ ಎಂದು ಅರುಣ್‌ಕುಮಾರ್ ತಮ್ಮ ದೂರಿನಲ್ಲಿ ನಮೂದಿಸಿದ್ದಾರೆ.

ಒಂದು ವೇಳೆ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳದಿದ್ದರೆ ಅಥವಾ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳದಿದ್ದಲ್ಲಿ ಶೇ. 50:50ರಡಿ ಪರಿಹಾರವಾಗಿ ಭೂ ಮಾಲೀಕನಿಗೆ ಭೂಮಿ ನೀಡಲು ಮುಡಾ ತೀರ್ಮಾನಿಸಿದೆ. ಆ ಸಂದರ್ಭ ಮಾತ್ರ ಪ್ರಾಧಿಕಾರದ ನಿರ್ಣಯಗಳಂತೆ KUDA ಕಾಯ್ದೆ ನಿಯಮ 13(2ಎ) ಪ್ರಕಾರ ಮಾಲೀಕರಿಗೆ ಭೂಮಿ ನೀಡಬೇಕು ಎಂದು ಡಾ. ರಾಜೇಂದ್ರ ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ. **'ಮುಡಾ ಆಯುಕ್ತರು KUDA ಕಲಂ 13(2ಎ)ರಡಿ ಪ್ರಾಧಿಕಾರ ನಿರ್ಣಯ ಕೈಗೊಳ್ಳುವ ಮೊದಲೇ ಸರ್ಕಾರದಿಂದ ಅನುಮೋದನೆಯನ್ನೂ ಪಡೆಯದೆ ನಿವೇಶನ ಹಂಚಿಕೆ ಮಾಡಿದ್ದಾರೆ. ಮುಡಾ ನಿರ್ಧಾರ ಕೈಗೊಳ್ಳುವ ಮೊದಲೇ, ಸಭೆಗೆ ಸಮಂಜಸ ದಾಖಲಾತಿಯನ್ನೂ ಒದಗಿಸದೇ ಆಯುಕ್ತರು 50:50ರ ಅನುಪಾತದ ಯೋಜನೆ ಜಾರಿಗೊಳಿಸಿದ್ದಾರೆ'** ಎಂಬುದನ್ನೂ ಜಿಲ್ಲಾಧಿಕಾರಿಗಳು ಸರ್ಕಾರದ ಗಮನಕ್ಕೆ ತಂದಿದ್ದರು ಎಂದು ಅರುಣ್‌ಕುಮಾರ್ ತಿಳಿಸಿದ್ದಾರೆ.

ಕಿರು ಅರಣ್ಯ ಅನುಷ್ಠಾನ!

ಹಾಗಾಗಿ ಮೈಸೂರು ಮಹಾನಗರ ಪಾಲಿಕೆಯ ಕೆಲವು ಆಯ್ದ ಉದ್ಯಾನವನಗಳಲ್ಲಿ ಮಿಯಾವಾಕಿ ಪದ್ಧತಿಯಲ್ಲಿ ಅರಣ್ಯೀಕರಣ ಅಭಿವೃದ್ಧಿಗೆ ಮುಂದಾಗಿದೆ.

ಏನಿದು ಮಿಯಾವಾಕಿ ಪದ್ಧತಿ: ಕೇವಲ 10–20 ವರ್ಷಗಳಲ್ಲಿ ಕಿರು ಅರಣ್ಯ ಬೆಳೆಸುವುದೇ ಜಪಾನ್‌ನ ಮಿಯಾವಾಕಿ ಪದ್ಧತಿ. ಜಪಾನ್‌ನ ಸಸ್ಯ ತಜ್ಞ ಡಾ.ಅಕಿರಾ ಮಿಯಾವಾಕಿ, ಕಡಿಮೆ ಜಾಗದಲ್ಲಿ ಅರಣ್ಯ ಬೆಳೆಸುವ ಪ್ರಯೋಗ ನಡೆಸಿ ಯಶಸ್ಸು ಕಂಡ ನಂತರ ಅವರ ಹೆಸರಿನಲ್ಲೇ ಈ ಪದ್ಧತಿ ಅನುಸರಿಸಲಾಗುತ್ತಿದೆ. ಜಪಾನ್‌ನಲ್ಲಿ ಅರಣ್ಯೀಕರಣ ಪ್ರೋತ್ಸಾಹಿಸಲು ಜಾಗದ ಕೊರತೆಯಾದಾಗ ಕಡಿಮೆ ಜಾಗದಲ್ಲಿ ಹತ್ತಿರ ಹತ್ತಿರ ನೆಟ್ಟ ಗಿಡಗಳು ಸೂರ್ಯನ ಕಿರಣಗಳಿಗೆ ತಲೆಯೊಡ್ಡಿ ವೇಗವಾಗಿ ಬೆಳೆಯತೊಡಗಿದವು. ಕೇವಲ 10 ವರ್ಷಗಳಲ್ಲಿ ನೆಲದ ಮೇಲೆ ಸೂರ್ಯ ಕಿರಣಗಳೇ ಬೀಳದಂತೆ ದಟ್ಟವಾದ ಕಿರು ಅರಣ್ಯ ಬೆಳೆದು ನಿಂತಿತು. ಸೂರ್ಯನ ಬೆಳಕು ಪಡೆಯಲು ಗಿಡಗಳಲ್ಲಿ ಪೈಪೋಟಿ ನಡೆದು ನಾ ಮುಂದೆ ತಾ ಮುಂದೆ ಎಂದು ಎತ್ತರಕ್ಕೆ ಬೆಳೆಯುತ್ತವೆ ಎಂಬುದು ಸಸ್ಯ ತಜ್ಞರ ಅಭಿಪ್ರಾಯ. ಹಾಗಾಗಿ ಮಿಯಾವಾಕಿ ಪದ್ಧತಿಯನ್ನು ಹಲವು ದೇಶಗಳಲ್ಲಿ ಅನುಸರಿಸಲಾಗುತ್ತಿದೆ.

ಆಪರೇಷನ್ ಕಮಲ ಯತ್ನ

ಪ್ರಸ್ತಾಪಿಸಿದ ಅವರು, ನಟ ದರ್ಶನ್‌ಗೆ ಜೈಲಿನಲ್ಲಿ ವಿಶೇಷ ಸೌಲಭ್ಯ ನೀಡಿದ ಪ್ರಕರಣದಲ್ಲಿ ಕರ್ತವ್ಯ ಲೋಪ ಎಸಗಿದ್ದ 9 ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ. ದರ್ಶನ್ ಅವರನ್ನು ಬಳ್ಳಾರಿ ಜೈಲಿಗೆ ಸ್ಥಳಾಂತರಿಸುವ ಜೊತೆಗೆ ಕೊಲೆ ಪ್ರಕರಣದ ಉಳಿದ ಆರೋಪಿಗಳನ್ನೂ ರಾಜ್ಯದ ವಿವಿಧ ಜೈಲುಗಳಿಗೆ ಕಳುಹಿಸಲಾಗಿದ್ದು, ಜೈಲಿನ ಡಿಜಿಪಿಗೂ ನೋಟಿಸ್ ನೀಡಲಾಗಿದೆ ಎಂದರು.

ಮುಡಾ ಮಾಜಿ ಆಯುಕ್ತರ ಮಾಹಿತಿ ಪಡೆತೀನಿ: ಹಗರಣದಲ್ಲಿ ಆರೋಪ ಎದುರಿಸುತ್ತಿರುವ ಮುಡಾದ ಮಾಜಿ ಆಯುಕ್ತ ಜಿ.ಟಿ.ದಿನೇಶ್ ಕುಮಾರ್‌ನನ್ನು ಹಾವೇರಿ ವಿಶ್ವವಿದ್ಯಾಲಯದ ಕುಲಸಚಿವರಾಗಿ ನೇಮಕ ಮಾಡಿರುವ ವಿಚಾರ ಕುರಿತು ಮಾಹಿತಿ ಪಡೆಯುವುದಾಗಿ ತಿಳಿಸಿದರು.

ಪೌರಾಣಿಕ ನಾಟಕಗಳ ಪ್ರೋತ್ಸಾಹಿಸಲು ಸಂಘ–ಸಂಸ್ಥೆಗಳಿಗೆ ಕರೆ

ಮೈಸೂರು, ಆ.30(ಎಸ್‌ಪಿಎನ್)– ಪ್ರಸ್ತುತ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಪೌರಾಣಿಕ ನಾಟಕಗಳ ಪ್ರದರ್ಶನ ಕಡಿಮೆಯಾಗುತ್ತಿವೆ. ಈ ನಾಟಕಗಳ ಉಳಿವಿಗೆ ಸಂಘ–ಸಂಸ್ಥೆಗಳು ಹೆಚ್ಚಿನ ಆದ್ಯತೆ ನೀಡಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ ಸಲಹೆ ನೀಡಿದರು.

ಮೈಸೂರು ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಮೈಸೂರು ಶ್ರೀರಾಜೇಶ್ವರಿ ವಸ್ತ್ರಾಲಂಕಾರ ರಂಗ ತಂಡ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಮೂರು ದಿನಗಳ ಪೌರಾಣಿಕ ರಂಗಸಂಭ್ರಮ–2024ಕ್ಕೆ ಹಾರ್ಮೋನಿಯಂ ನುಡಿಸುವ ಮೂಲಕ ಉದ್ಘಾಟಿಸಿ, ಮಾತಾಡಿದರು.

ರಂಗಭೂಮಿಯ ಯಾವುದೇ ನಾಟಕದ ಪಾತ್ರಗಳಿಗೂ ಕ್ಷಣ ಮಾತ್ರದಲ್ಲಿ ವಸ್ತ್ರಗಳನ್ನು ಶ್ರೀರಾಜೇಶ್ವರಿ ವಸ್ತ್ರಾಲಂಕಾರದ ರಾಮಚಂದ್ರ ಅವರು ಒದಗಿಸಿ ಕೊಡುತ್ತಾರೆ. ಇದರ ಜೊತೆಗೆ ತಮ್ಮದೇ ರಂಗ ತಂಡ ಸ್ಥಾಪಿಸಿ ಪೌರಾಣಿಕ ನಾಟಕಗಳ ಪ್ರದರ್ಶನಕ್ಕೆ ಪ್ರೋತ್ಸಾಹಿಸುತ್ತಿರುವುದು ಉತ್ತಮ ಸಂಗತಿ ಎಂದರು.

ಮೈಸೂರು ಕಲಾಸುರುಚಿ ಮುಖ್ಯಸ್ಥ ಶಶಿಧರ್ ಡೋಂಗ್ರೆ ಮಾತನಾಡಿ, ಪೌರಾಣಿಕ ನಾಟಕಗಳ ಪ್ರದರ್ಶನ ನಗರ ಪ್ರದೇಶಗಳಲ್ಲಿ ಬೆರಳೆಣಿಕೆ ಮಾತ್ರ. ಇಂತಹ ನಾಟಕಗಳ ಪ್ರದರ್ಶನ ನಗರ ಪ್ರದೇಶದಲ್ಲಿ ಮತ್ತಷ್ಟು ಹೆಚ್ಚಾಗಬೇಕು. ಇದರ ಉಳಿವಿಗಾಗಿ ಶ್ರೀ ರಾಜೇಶ್ವರಿ ವಸ್ತ್ರಾಲಂಕಾರದ ರಾಮಚಂದ್ರ ಅವರು ಶ್ರಮಿಸುತ್ತಿರುವುದು ಮೆಚ್ಚುಗೆಯ ವಿಷಯ ಎಂದರಲ್ಲದೆ, ಇಂದಿನ ಪೌರಾಣಿಕ ರಂಗ ಸಂಭ್ರಮದಲ್ಲಿ 'ಪ್ರಚಂಡ ರಾವಣ' ನಾಟಕ ಪ್ರದರ್ಶನಗೊಳ್ಳುತ್ತಿರುವುದು ಸಂತೋಷದ ಸಂಗತಿ ಎಂದರು.

ವೇದಿಕೆಯಲ್ಲಿ ಲಯನ್ ಎನ್.ಸುಬ್ರಹ್ಮಣ್ಯ, ಶ್ರೀರಾಜೇಶ್ವರಿ ವಸ್ತ್ರಾಲಂಕಾರ ರಂಗತಂಡದ ಅಧ್ಯಕ್ಷೆ ಹೆಚ್.ಬಿ.ಯಶೋಧ ಸೇರಿದಂತೆ ಇತರರಿದ್ದರು. ವೇದಿಕೆ ಕಾರ್ಯಕ್ರಮದ ನಂತರ ಕಣಗಾಲ್ ಪ್ರಭಾಕರ್ ಶಾಸ್ತ್ರಿ ರಚನೆಯ ಸಂಗಾಪುರ ನಾಗರಾಜ್ ನಿರ್ದೇಶನದ ಹಾಗೂ ವಿದ್ವಾನ್ ಕಿರಗಸೂರು ರಾಜಪ್ಪ ಸಂಗೀತ ಸಹಕಾರ ನೀಡಿರುವ 'ಪ್ರಚಂಡ ರಾವಣ' ನಾಟಕವನ್ನು ರಂಗಚಾವಡಿ ತಂಡ ಕಲಾವಿದರು ಪ್ರದರ್ಶಿಸಿ, ಪ್ರೇಕ್ಷಕರಿಂದ ಮೆಚ್ಚುಗೆ ಗಳಿಸಿದರು.

ಪ್ರಚಂಡ ರಾವಣ ನಾಟಕದಲ್ಲಿ ಪಾತ್ರದಾರಿಗಳಾಗಿ ಸಂಗಾಪುರ ನಾಗರಾಜ್ (ರಾವಣ), ಬಿ.ಹುಚ್ಚಯ್ಯ (ವಿಭೂಷಣ), ಟಿ.ಸಂದೇಶಕುಮಾರ್(ಬ್ರಹ್ಮ), ವರದ ನಾಯಕ (ಆಂಜನೇಯ), ಕಾರ್ತಿಕ್(ಇಂದ್ರಜಿತ್), ಎಂ. ದಯಾನಂದ (ಪ್ರಹಸ್ತ), ಎಸ್.ಹೇಮಂತ್ (ಕಾಲಭೈರವ), ಎಂ.ಎಸ್. ಗುರುಪಾದಸ್ವಾಮಿ (ಕುಂಭಕರ್ಣ), ಎಸ್. ಪರಮೇಶ್ವರಪ್ಪ (ರಾಮ), ಸುಮನ್(ಲಕ್ಷ್ಮಣ), ಶ್ರೀಕಂಠೇಶ್ (ಜಾಂಬವ), ಸುಮಾಪ್ರಕಾಶ್ (ಸೀತೆ), ಆರ್.ಎಂ.ಶೃತಿ (ಮಂಡೋದರಿ) ನಟಿಸಿ, ಪ್ರೇಕ್ಷಕರಿಂದ ಮೆಚ್ಚುಗೆ ಗಳಿಸಿದರು. ನೈಪಥ್ಯದಲ್ಲಿ ಅಪ್ಪು ತಬಲ, ವಿದ್ವಾನ್ ಡಿ.ರಾಮು ಕ್ಲಾರಿಯೋನೆಟ್, ಪುರುಷೋತ್ತಮ ಕ್ಯಾಶಿಯೋ ನುಡಿಸಿದರು.



ಪೌರಾಣಿಕ ರಂಗಸಂಭ್ರಮ–2024ಕ್ಕೆ ಹಾರ್ಮೋನಿಯಂ ನುಡಿಸುವ ಮೂಲಕ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ ಉದ್ಘಾಟಿಸಿದರು.

ಆ.31ರಂದು ಮಂಡ್ಯದ ಮಾಂಡವ್ಯ ರಂಗಭೂಮಿ ಕಲಾಸಂಘದ ಕಲಾವಿದರು ಅಭಿನಯಿಸುವ 'ಗಧಾಯುದ್ಧ' ಹಾಗೂ ಸೆ.1ರಂದು ಮೈಸೂರು ಕಲಾಸುರುಚಿ ತಂಡದ ಕಲಾವಿದರು ಅಭಿನಯಿಸುವ 'ಶ್ರೀಮದ್ ರಾಮಾಯಣ' ಪೌರಾಣಿಕ ನಾಟಕ ಪ್ರದರ್ಶನಗೊಳ್ಳಲಿದೆ.

ದಸರಾ ವಸ್ತುಪ್ರದರ್ಶನ: ಪ್ರಸಕ್ತ ಸಾಲಿಗೆ 9.77 ಕೋಟಿ ಟೆಂಡರ್ ಮೊತ್ತ ನಿಗದಿ



ಮೈಸೂರು, ಆ.30(ಎಂಟಿವೈ)– ದಸರಾ ವಸ್ತುಪ್ರದರ್ಶನಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದ್ದು, ಈ ಬಾರಿ 9.77 ಕೋಟಿ ರೂ.ಗೆ ಟೆಂಡರ್ ಮೊತ್ತ ನಿಗದಿ ಮಾಡಲಾಗಿದೆ ಎಂದು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ತಿಳಿಸಿದ್ದಾರೆ.



ಅಯೂಬ್ ಖಾನ್

ಪ್ರಸಕ್ತ ಸಾಲಿನ ದಸರಾ ವಸ್ತುಪ್ರದರ್ಶನವನ್ನು 90 ದಿನ ನಡೆಸಲು ಉದ್ದೇಶಿಸಲಾಗಿದ್ದು, ಅ.3ರಿಂದ ಡಿ.31ರವರೆಗೆ ನಡೆಯಲಿದೆ. ಪ್ರವೇಶ ಶುಲ್ಕ ಸಂಗ್ರಹ, ವಾಣಿಜ್ಯ ಮಳಿಗೆ, ಅಮ್ಯೂಸ್‌ಮೆಂಟ್ ಪಾರ್ಕ್, ಆಹಾರ ಮಳಿಗೆ, ವಾಹನ ಪಾರ್ಕಿಂಗ್ ಶುಲ್ಕ ಸಂಗ್ರಹ ಸೇರಿದಂತೆ 9.77 ಕೋಟಿ ರೂ. ಟೆಂಡರ್ ಮೊತ್ತ ನಿಗದಿ ಮಾಡಲಾಗಿದೆ. ಟೆಂಡರ್‌ಗೆ ಸೆ.14ರೊಳಗೆ ಅರ್ಜಿ ಸಲ್ಲಿಸಬಹುದು. ಈ ಪ್ರಕ್ರಿಯೆ ಆನ್‌ಲೈನ್ ಮೂಲಕವೇ ನಡೆಯಲಿದ್ದು, ಸೆ.20ರ ನಂತರ ಯಾರಿಗೆ ಟೆಂಡರ್ ದೊರೆಯಲಿದೆ ಎಂದು ತಿಳಿಯುತ್ತದೆ.

ಒಂದೆಡೆ ಟೆಂಡರ್ ಪ್ರಕ್ರಿಯೆ ನಡೆಯುತ್ತಿದ್ದರೆ, ಪ್ರಾಧಿಕಾರದ ವತಿಯಿಂದ ದಸರಾ ವಸ್ತುಪ್ರದರ್ಶನದ ಆವರಣವನ್ನು ಸ್ವಚ್ಛಗೊಳಿಸುವ ಕಾರ್ಯ ಆರಂಭವಾಗಿದೆ. ವಸ್ತುಪ್ರದರ್ಶನ ಆವರಣದಲ್ಲಿ ಬೆಳೆದಿರುವ ಗಿಡ–ಗಂಟೆ ತೆರವು ಮಾಡಲಾಗುತ್ತದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ವಸ್ತುಪ್ರದರ್ಶನದ ಆವರಣವನ್ನು ಸ್ವಚ್ಛಗೊಳಿಸುವ ಕಾರ್ಯ ಪೂರ್ಣಗೊಳಿಸಲಾಗುತ್ತದೆ ಎಂದು ತಿಳಿಸಿದರು.

ಈ ಬಾರಿ ದಸರಾ ವಸ್ತುಪ್ರದರ್ಶನವನ್ನು ಅರ್ಥಪೂರ್ಣವಾಗಿಸುವ ನಿಟ್ಟಿನಲ್ಲಿ ನಾನಾ ಚಿಂತನೆ ನಡೆಸಲಾಗಿದೆ ಎಂದು ಹೇಳಿದರು.

ವಸ್ತುಪ್ರದರ್ಶನ ಪ್ರಾಧಿಕಾರದ ಸಿಇಓ ಕೆ.ರುದ್ರೇಶ್ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಉನ್ನತ ಸಭೆಯಲ್ಲಿ ಕಟ್ಟುನಿಟ್ಟಿನ ಸೂಚನೆ ನೀಡಿದ್ದು, ವಸ್ತುಪ್ರದರ್ಶನವನ್ನು ಮೊದಲ ದಿನದಿಂದಲೇ ಪೂರ್ಣ ಪ್ರಮಾಣದಲ್ಲಿ ಆರಂಭಿಸುವಂತೆ ಆದೇಶಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಸರ್ಕಾರಿ ಮಳಿಗೆ ಸ್ಥಾಪನೆಗಾಗಿ ಎಲ್ಲಾ ಜಿಲ್ಲಾ ಪಂಚಾಯತ್ ಹಾಗೂ ಸರ್ಕಾರಿ ಮಳಿಗೆ ಸ್ಥಾಪನೆಗೆ ಸಂಬಂಧಿಸಿದ ಅಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. ಇದಕ್ಕೆ 21 ಮಳಿಗೆ ಆರಂಭದಲ್ಲಿಯೇ ಪೂರ್ಣಗೊಳಿಸುವುದಾಗಿ ಅಧಿಕಾರಿಗಳು ಒಪ್ಪಿಗೆ ಪತ್ರ ನೀಡಿದ್ದಾರೆ. ಹಲವು ಇಲಾಖೆಗಳೊಂದಿಗೆ ನಿರಂತರ ಸಂಪರ್ಕದಲ್ಲಿರುವುದಾಗಿ ತಿಳಿಸಿದರು.

ಮೈಸೂರು ವಿವಿ ಡಾ.ಅಂಬೇಡ್ಕರ್ ಕೇಂದ್ರದಲ್ಲಿ ನಡೆದ ಮೀಸಲಾತಿ ಕಾರ್ಯಾಗಾರಕ್ಕೆ ಆಕ್ಷೇಪ; ಮಾಜಿ ಮೇಯರ್ ಪುರುಷೋತ್ತಮ್ ಬೇಸರ



ಪುರುಷೋತ್ತಮ್

ಮೈಸೂರು, ಆ.30(ಜಿಎ)–ಮೈಸೂರು ವಿವಿ ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದಲ್ಲಿ ಆ.24 ರಂದು ಆಯೋಜಿಸಿದ್ದ 'ಮೀಸಲಾತಿ ಮತ್ತು ವರ್ಗೀಕರಣ' ವಿಷಯ ಕುರಿತ ಕಾರ್ಯಾಗಾರದ ಬಗ್ಗೆ ಸಾಮಾಜಿಕ ನ್ಯಾಯ ಪರ ವಕೀಲರ ವೇದಿಕೆಯವರು ಸಾರ್ವಜನಿಕರಲ್ಲಿ ತಪ್ಪು ಅಭಿಪ್ರಾಯ ಮೂಡಿಸುತ್ತಿದ್ದಾರೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ಬೇಸರ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರದ ನಿರ್ದೇಶಕ ಪ್ರೊ.ಜೆ. ಸೋಮಶೇಖರ್ ಅವರ ವಿರುದ್ಧ ವೇದಿಕೆಯವರು ಆಧಾರ ರಹಿತ ಆರೋಪ ಮಾಡಿದ್ದಾರೆ. ಅಲ್ಲದೆ, ಈ ಕುರಿತು ರಾಜ್ಯಪಾಲರಿಗೆ ದೂರು ಸಲ್ಲಿಸಲಾಗಿದ್ದು, ಸೋಮ ಶೇಖರ್ ಅವರನ್ನು ಅಮಾನತುಗೊಳಿಸಲು ಕೋರಿರುವುದಾಗಿ ತಿಳಿಸಿದ್ದಾರೆ. ಆದರೆ ಪತ್ರಿಕಾ ಗೋಷ್ಠಿ ನಡೆಸಿ ಆರೋಪ ಮಾಡಿರುವವರು ಕಾರ್ಯಾಗಾರದಲ್ಲಿ ಪಾಲ್ಗೊಂಡಿರಲಿಲ್ಲ. ಕೇವಲ ಪೂರ್ವಾಗ್ರಹ ಪೀಡಿತರಾಗಿ ಆರೋಪ ಮಾಡಿದ್ದಾರೆ. ಸೋಮಶೇಖರ್ ಅವರನ್ನು ಬೆದರಿಸುವ ಕುತಂತ್ರ ಇದಾಗಿದೆ. ಹೀಗಾಗಿ ಸೋಮಶೇಖರ್ ಅವರ ವಿರುದ್ಧ ವಿವಿ ಯಾವುದೇ ಕ್ರಮ ಕೈಗೊಳ್ಳದೇ ಅಲ್ಲಿಯೇ ಮುಂದುವರಿಸಬೇಕೆಂದು ರಾಜ್ಯಪಾಲರಲ್ಲಿ ಮನವಿ ಮಾಡಿರುವುದಾಗಿ ತಿಳಿಸಿದರು.

ಮೀಸಲಾತಿ ವಿರುದ್ಧವಲ್ಲ: ಭರತ್ ರಾಮಸ್ವಾಮಿ ಮಾತನಾಡಿ, ಅಂಬೇ ಡ್ಕರ್ ಸಂಶೋಧನಾ ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ. ಸೋಮಶೇಖರ್ ವಿರುದ್ಧ ದೂರು ನೀಡಿರುವುದನ್ನು ಖಂಡಿಸುವುದಾಗಿ ತಿಳಿಸಿದರು. ಅಂದು ನಡೆದ ಕಾರ್ಯಕ್ರಮ ಮೀಸಲಾತಿ ವಿರುದ್ಧವಲ್ಲ ಎಂದು ಸ್ಪಷ್ಟಪಡಿಸಿದ ಅವರು, ಸಮುದಾಯದ ಮುಗ್ಧ ಜನರನ್ನು ದಿಕ್ಕು ತಪ್ಪಿಸಬಾರದು ಎಂದು ಮನವಿ ಮಾಡಿದರು. ಶೋಷಿತ ಸಮುದಾಯಗಳು ಒಗ್ಗಟ್ಟು ಪ್ರದರ್ಶಿಸಬೇಕು ಎಂದರು.

ಕಾರ್ಯಾಗಾರ ಬೌದ್ಧಿಕ ಚರ್ಚೆಯಿಂದ ಕೂಡಿತ್ತು. ಈ ವೇಳೆ ಸುಪ್ರೀಂಕೋರ್ಟ್ ತೀರ್ಪನ್ನು ಯಾರೊಬ್ಬರೂ ನಿಂದಿಸಲಿಲ್ಲ. ಮುಕ್ತ ಸಂವಾದವೂ ಇತ್ತು. ಬೇಕಿದ್ದರೆ ಕಾರ್ಯಾಗಾರವನ್ನು ವಿವಿಯ ಯೂ ಟ್ಯೂಬ್‌ನಲ್ಲಿ ವೀಕ್ಷಿಸಬಹುದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಎನ್.ಭಾಸ್ಕರ್, ಕಾಂತರಾಜು, ಭರತ್ ರಾಮಸ್ವಾಮಿ, ಡಾ.ಚನ್ನಕೇಶವಮೂರ್ತಿ, ಶಿವಶಂಕರ್ ಉಪಸ್ಥಿತರಿದ್ದರು.

ಪ್ರಧಾನ, ಮುಖ್ಯ ಅಭಿಯಂತರರ ಮುಂಬಡ್ತಿ ಶಿಫಾರಸು ಸಮಿತಿ ಪುನರ್ ರಚನೆ

ಮೈಸೂರು, ಆ.30(ಎಸ್‌ಪಿಎನ್)– ಪ್ರಧಾನ ಅಭಿಯಂತರರು ಹಾಗೂ ಮುಖ್ಯ ಅಭಿಯಂತರರ ಹುದ್ದೆಗಳಿಗೆ ಮುಂಬಡ್ತಿ ನೀಡಲು ಪ್ರಸ್ತುತ ಜಾರಿಯಲ್ಲಿರುವ ಇಲಾಖಾ ಮುಂಬಡ್ತಿ ಶಿಫಾರಸ್ಸು ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರ ಪಟ್ಟಿಯನ್ನು ಪುನರ್ ರಚಿಸಿ ಆ.27ರಂದು ರಾಜ್ಯ ಸರ್ಕಾರ ಆದೇಶಿಸಿದೆ.

ದಿನಾಂಕ:7.4.2022ರಲ್ಲಿ ಕರ್ನಾಟಕ ಸರ್ಕಾರ (ಕೆಲಸಗಳ ಹಂಚಿಕೆ) ನಿಯಮಗಳು, 1977ಕ್ಕೆ ತಿದ್ದುಪಡಿ ಮಾಡಲಾಗಿತ್ತು. ಇದರಿಂದಾಗಿ ಇಲಾಖಾ ಮುಖ್ಯಸ್ಥರ ಹುದ್ದೆ ಅಥವಾ ತತ್ಸಮಾನ ದರ್ಜೆಯ ಅಧಿಕಾರಿಗಳು, ಪ್ರಧಾನ ಅಭಿಯಂತರರು ಹಾಗೂ ಮುಖ್ಯ ಅಭಿಯಂತರರ ಹುದ್ದೆಗಳಿಗೆ ಮುಂಬಡ್ತಿ ನೀಡಲು ಅಪರ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಇಲಾಖಾ ಮುಂಬಡ್ತಿ ಶಿಫಾರಸ್ಸು ಸಮಿತಿ ರಚಿಸಲಾಗಿತ್ತು.

ಈ ಹುದ್ದೆಗಳಿಗೆ ಮುಂಬಡ್ತಿ ನೀಡಲು ಸಂಬಂಧಿಸಿದ ಅಧಿಕಾರಿಗಳ ಸೂಕ್ತತೆಯನ್ನು ಪರಿಶೀಲಿಸಿ ನೇಮಕಾತಿ ಪ್ರಾಧಿಕಾರಕ್ಕೆ ಸೂಕ್ತ ಹೆಸರು ಶಿಫಾರಸ್ಸು ಮಾಡಲು ಪ್ರಸ್ತುತ ಇಲಾಖಾ ಮುಂಬಡ್ತಿ ಸಮಿತಿಯ ಅಧ್ಯಕ್ಷರಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳನ್ನು ನೇಮಿಸಿ ಸರ್ಕಾರ ಆದೇಶಿಸಿದೆ.

ಸದಸ್ಯರಾಗಿ ಅಪರ ಮುಖ್ಯ ಕಾರ್ಯದರ್ಶಿ, ಸಚಿವಾಲಯ ಸಂಬಂಧಿಸಿದ ಆಡಳಿತ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಇತರೆ ಅಧಿಕಾರಿಗಳು ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಪರ ಮುಖ್ಯಕಾರ್ಯದರ್ಶಿ ಅಥವಾ ಇತರೆ ಅಧಿಕಾರಿಗಳು ಮತ್ತು ಆಡಳಿತ ಸುದಾರಣೆ ಇಲಾಖೆ(ಸೇವೆಗಳು)ಯ ಉಪಕಾರ್ಯದರ್ಶಿ ಅಥವಾ ಇತರೆ ಅಧಿಕಾರಿಗಳನ್ನು, ಸದಸ್ಯ ಕಾರ್ಯದರ್ಶಿಯಾಗಿ ನೇಮಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧೀನ ಕಾರ್ಯದರ್ಶಿ ಜಿ.ಹೇಮಲತ ಆದೇಶಿಸಿದ್ದಾರೆ.

ಕರ್ನಾಟಕದಲ್ಲಿ ಮುಂದಿನ 5 ದಿನ ಭಾರೀ ಮಳೆ

ಬೆಂಗಳೂರು, ಆ.30– ಬಂಗಾಳ ಸಾಗರದಲ್ಲಿ ವಾಯುಭಾರ ಕುಸಿತವಾದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ 5 ದಿನ ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ತಜ್ಞ ಸಿ.ಎಸ್. ಪಾಟೀಲ್ ಅವರು ಮುನ್ಸೂಚನೆ ನೀಡಿದ್ದಾರೆ.



ಕರಾವಳಿ ತೀರದಲ್ಲಿ ಆಗಸ್ಟ್ 30 ರಿಂದ ಸೆಪ್ಟೆಂಬರ್ 3 ರವರೆಗೆ ಹಾಗೂ ಉತ್ತರ ಒಳನಾಡು ಹಾಗೂ ದಕ್ಷಿಣ ಒಳನಾಡಿನಲ್ಲಿ ಆಗಸ್ಟ್ 30, 31 ರಂದು ಹಲವು ಕಡೆ ಮಳೆಯಾಗುವ ಸಾಧ್ಯತೆ ಇದೆ.

ಸೆಪ್ಟೆಂಬರ್ 1, 2, 3 ರಂದು ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಮಳೆಯಾಗುವ ಸಾಧ್ಯತೆ ಇದ್ದು ಯಾದಗಿರಿ, ಗುಲ್ಬರ್ಗ, ರಾಯಚೂರು ಜಿಲ್ಲೆಗಳಲ್ಲಿ ಭಾರೀ ಮಳೆ ಜೊತೆಗೆ ಆರೇಂಜ್ ಅಲರ್ಟ್ ಘೋಷಿಸಲಾಗಿದೆ.

ಹಾಸನ, ಕೊಡಗು ಜಿಲ್ಲೆಗಳಿಗೆ ಸೆಪ್ಟೆಂಬರ್ 30, 31 ರಂದು ಯಲ್ಲೋ ಅಲರ್ಟ್ ಹಾಗೂ ಬೆಂಗಳೂರಿನಲ್ಲಿ ಆಗಸ್ಟ್ 30 ರಿಂದ ಸೆಪ್ಟೆಂಬರ್ 3ರವರೆಗೆ ಹಗುರದಿಂದ ಸಾಧಾರಣ ಮಳೆಯಾಗುವ ಮುನ್ಸೂಚನೆ ನೀಡಲಾಗಿದೆ.

ತಿ.ನರಸೀಪುರದಲ್ಲಿ ತಾಲೂಕು ಮಟ್ಟದ ಕ್ರೀಡಾಕೂಟ

ವಿದ್ಯಾಭ್ಯಾಸದ ಜೊತೆಗೆ ಕ್ರೀಡಾಸಕ್ತಿ ಬೆಳೆಸಿಕೊಳ್ಳಿ

ವಿದ್ಯೋದಯ ಶಿಕ್ಷಣ ಸಂಸ್ಥೆ ಆಡಳಿತಾಧಿಕಾರಿ ಕೆ.ಪಿ.ಉದಯಕುಮಾರ್



ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ಕ್ರೀಡಾಪಟುಗಳನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಆ.30– ಕ್ರೀಡಾಪಟುಗಳು ರಾಷ್ಟ್ರದ ಹೆಮ್ಮೆಯ ಪ್ರತೀಕವಾಗಿದ್ದು, ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಜೊತೆಗೆ ಕ್ರೀಡಾಸಕ್ತಿ ಬೆಳೆಸಿಕೊಳ್ಳಬೇಕು ಎಂದು ವಿದ್ಯೋದಯ ಶಿಕ್ಷಣ ಸಂಸ್ಥೆ ಆಡಳಿತಾಧಿಕಾರಿ ಕೆ.ಪಿ.ಉದಯಕುಮಾರ್ ತಿಳಿಸಿದರು.

ಶಾಲಾ ಶಿಕ್ಷಣ ಇಲಾಖೆ(ಪದವಿಪೂರ್ವ), ಮೈಸೂರಿನ ಉಪ ನಿರ್ದೇಶಕರ ಕಚೇರಿ ಹಾಗೂ ವಿದ್ಯೋದಯ ಬಾಲಿಕ ಪದವಿಪೂರ್ವ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಪಟ್ಟಣದ ವಿದ್ಯೋದಯ ಕಾಲೇಜಿನ ಆಟದ ಮೈದಾನದಲ್ಲಿ ಆಯೋಜಿಸಿದ್ದ ತಾಲೂಕು ಮಟ್ಟದ ಕ್ರೀಡಾಕೂಟ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಜೀವನದಲ್ಲಿ ಸ್ಪಷ್ಟ ಗುರಿ ಹೊಂದಿರ ಬೇಕು. ಕ್ರೀಡಾಪಟುಗಳು ಸೋಲು ಗೆಲುವಿನ ಬಗ್ಗೆ ಗಮನ ಹರಿಸದೆ ಕ್ರೀಡೆಗಳಲ್ಲಿ ಭಾಗವಹಿಸುವ ಸ್ಪರ್ಧಾ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು. ಕ್ರೀಡೆಗಳಲ್ಲಿ ಭಾಗವಹಿಸುವುದರಿಂದ ವಿದ್ಯಾರ್ಥಿಗಳ ಶಾರೀರಕ ಹಾಗೂ ಭೌತಿಕ ಬೆಳವಣಿಗೆಯಾಗುತ್ತದೆ. ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಮಕ್ಕಳನ್ನು ಹೆಚ್ಚು ಕ್ರೀಡೆಗಳಲ್ಲಿ ತೊಡಗಿಸುವುದರಿಂದ ಅವರ ಪ್ರತಿಭೆ ಗುರುತಿಸಲು ಸಹಕಾರಿಯಾಗುತ್ತದೆ. ಹಾಗಾಗಿ ದೈಹಿಕ ಶಿಕ್ಷಕರು ಇನ್ನಷ್ಟು ಕ್ರೀಡಾಪಟುಗಳನ್ನು ಬೆಳೆಸುವ ನಿಟ್ಟಿನಲ್ಲಿ ತಮ್ಮ ಕರ್ತವ್ಯ ನಿರ್ವಹಿಸಬೇಕು ಎಂದರು.

ತಾಲೂಕಿನಲ್ಲಿ ಅದ್ಭುತ ಕ್ರೀಡಾ ಪಟುಗಳಿದ್ದು, ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಗಳಿಸಿದ್ದಾರೆ. ಅಂತಹ ಕ್ರೀಡಾಪಟುಗಳನ್ನು ಮಾದರಿಯಾಗಿಟ್ಟುಕೊಂಡು ಇತರೆ ಕ್ರೀಡಾಪಟುಗಳು ಕ್ರೀಡೆಯಲ್ಲಿ ಭಾಗವಹಿಸಿ ಉತ್ತಮ ಹೆಸರು ಗಳಿಸಬೇಕೆಂದು ಸಲಹೆ ನೀಡಿದರು.

ಈ ವೇಳೆ ವಿದ್ಯೋದಯ ಬಾಲಿಕಾ ಪದವಿಪೂರ್ವ ಕಾಲೇಜಿನ ಹಳೇ ವಿದ್ಯಾರ್ಥಿನಿಯರಾದ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ ಪುರಸ್ಕೃತೆ ಹಾಗೂ ಅಂತರ ರಾಷ್ಟ್ರೀಯ ಖೊಖೋ ಕ್ರೀಡಾಪಟುಗಳಾದ ಎಂ.ವೀಣಾ ಹಾಗೂ ಎಲ್.ಮೋನಿಕಾ ಅವರನ್ನು ಸನ್ಮಾನಿಸಲಾಯಿತು.

ತಾಲೂಕಿನ ವಿವಿಧ ಶಾಲಾ ವಿದ್ಯಾರ್ಥಿನಿಯರು ಆಕರ್ಷಕ ಪಥ ಸಂಚಲನ ನಡೆಸಿದರು. ಪುರಸಭೆ ಮುಖ್ಯಾಧಿಕಾರಿ ಬಿ.ಕೆ.ವಸಂತಕುಮಾರಿ, ವಿದ್ಯೋದಯ ಶಿಕ್ಷಣ ಸಂಸ್ಥೆ ಸಹಾಯಕ ಆಡಳಿತಾಧಿಕಾರಿ ಶಿವನಂಜಪ್ಪ, ಪದವಿಪೂರ್ವ ಕಾಲೇಜಿನ ಮುಖ್ಯ ಶಿಕ್ಷಕರಾದ ನಾಗರತ್ನ, ಶಾಂತರಾಜು, ಹಿಲಾಲ್ ಶಾಲೆಯ ಫಯಾಜ್, ಮುಸುವಿನ ಕೊಪ್ಪಲಿನ ರಾಜಕುಮಾರ್, ಗೂಳೇಗೌಡ, ಬಿಜಿಎಸ್ ಸಂಸ್ಥೆಯ ನವೀನ್ ಕುಮಾರ್, ಪಿಆರ್‌ಎಂ ಕಾಲೇಜಿನ ಸೌಮ್ಯ, ಯಾಚೇನಹಳ್ಳಿ ಅವಿನಾಶ್, ವಿವೇಕಾನಂದ ಸಂಸ್ಥೆಯ ರಂಗನಾಥ್, ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಮಂಗಳಮೂರ್ತಿ, ವಿದ್ಯೋದಯ ಬಾಲಕರ ಕಾಲೇಜಿನ ಟಿ.ಎಸ್.ಬಸವಣ್ಣಸ್ವಾಮಿ, ವಿದ್ಯೋದಯ ಬಾಲಿಕಾ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲೆ ಎನ್.ಕಲ್ಪನಾ, ಉಪನ್ಯಾಸಕರಾದ ವೈ.ಸೋಮಣ್ಣ, ಡಾ.ಚಂದ್ರಪ್ಪ, ಮೂಗೂರು ಕುಮಾರಸ್ವಾಮಿ, ಎಂಪಿಇಡಿ ಸಂಘದ ಅಧ್ಯಕ್ಷ ಸಿದ್ದೇಶ್, ಮರಿಸ್ವಾಮಿ, ಪುಟ್ಟರಾಜು ಮತ್ತಿತರಿದ್ದರು.

ಕರ್ನಾಟಕ ಸಂಭ್ರಮ–50 ರಥಯಾತ್ರೆಗೆ ಅದ್ಧೂರಿ ಸ್ವಾಗತ



ಹೆಚ್.ಡಿ. ಕೋಟೆಯಲ್ಲಿ ಕರ್ನಾಟಕ ಸಂಭ್ರಮ ರಥಯಾತ್ರೆಗೆ ಅದ್ಧೂರಿ ಸ್ವಾಗತ ಕೋರಲಾಯಿತು.

ಹೆಚ್.ಡಿ.ಕೋಟೆ, ಆ.30– ಮೈಸೂರು ರಾಜ್ಯವನ್ನು 'ಕರ್ನಾಟಕ' ಎಂದು ಮರು ನಾಮಕರಣ ಮಾಡಿದ ಕೀರ್ತಿ ಮಾಜಿ ಸಿಎಂ ದಿ.ಡಿ.ದೇವರಾಜ ಅರಸರಿಗೆ ಸಲ್ಲುತ್ತದೆ ಎಂದು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕನ್ನಡ ಪ್ರಮೋದ್ ತಿಳಿಸಿದರು.

ಮೈಸೂರು ರಾಜ್ಯವನ್ನು ಕರ್ನಾಟಕ ಎಂದು ಮರು ನಾಮಕರಣ ಮಾಡಿದ ಸುವರ್ಣ ಮಹೋತ್ಸವದ ಹಿನ್ನೆಲೆಯಲ್ಲಿ ತಾಲೂಕಿನ ಹೊಮ್ಮರಗಳ್ಳಿಗೆ ಆಗಮಿಸಿದ ಕರ್ನಾಟಕ ಸಂಭ್ರಮ–50 ರಥಯಾತ್ರೆಯನ್ನು ಮಂಗಳವಾದ್ಯ, ವೀರಗಾಸೆ, ಬ್ಯಾಂಡ್‌ಸೆಟ್, ಪೂರ್ಣಕುಂಭದೊಂದಿಗೆ ಸ್ವಾಗತಿಸಿ, ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಈ ಹಿಂದೆ ನಿಜಾಮರ ಹೈದರಾಬಾದ್ ರಾಜ್ಯ ಮತ್ತು ಬಾಂಬೆ ಪ್ರೆಸಿಡೆನ್ಸಿ ಜಿಲ್ಲೆಗಳನ್ನು ಸೇರಿಸುವುದರೊಂದಿಗೆ ಮೈಸೂರು ಪ್ರದೇಶದ ಜಿಲ್ಲೆಗಳು ಕೇವಲ ರಾಜ್ಯದ ಭಾಗವಾಗಿರುವುದರಿಂದ ರಾಜಕಾರಣಿಗಳು ಸೇರಿದಂತೆ ಜನರು ರಾಜ್ಯದ ಹೆಸರನ್ನು ಬದಲಾಯಿಸುವ ಇಂಗಿತ ವ್ಯಕ್ತಪಡಿಸಿದ ಕಾರಣ ಅಂದಿನ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರು ಕರ್ನಾಟಕ ಎಂದು ಘೋಷಿಸಿದ್ದು, ಪ್ರಸ್ತುತ 50 ವರ್ಷ ತುಂಬಿವೆ ಎಂದರು.

ಹುಣಸೂರು ಉಪವಿಭಾಗಾಧಿಕಾರಿ ವಿಜಯಕುಮಾರ್ ಮಾತನಾಡಿ, ರಾಜ್ಯದ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಕನ್ನಡದಲ್ಲೇ ಆಡಳಿತ ನಡೆಯುತ್ತಿದೆ. ಕನ್ನಡ ಭಾಷೆ, ನೆಲ, ಜಲ ಮತ್ತು ಸಂಸ್ಕೃತಿಯನ್ನು ನಾವು ಎತ್ತಿ ಹಿಡಿಯಬೇಕು. ಆ ನಿಟ್ಟಿನಲ್ಲಿ ಕನ್ನಡದಲ್ಲೇ ವ್ಯವಹರಿಸಲಾಗುತ್ತಿದೆ ಎಂದರು.

ಹೆಚ್.ಡಿ.ಕೋಟೆ ಬಳಿಕ ಸರಗೂರು ತಾಲೂಕಿನಲ್ಲಿ ರಥಯಾತ್ರೆ ಸಂಚರಿಸಿ ನಂಜನಗೂಡಿಗೆ ತೆರಳಲಿದೆ ಎಂದರು. ಇದೇ ವೇಳೆ ಕೋಟೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಜಾನಪದ ಕಲಾ ತಂಡಗಳೊಂದಿಗೆ ರಥಯಾತ್ರೆ ಮೆರವಣಿಗೆ ನಡೆಸಲಾಯಿತು.

ಈ ವೇಳೆ ಗ್ರೇಡ್–2 ತಹಸೀಲ್ದಾರ್ ಶ್ರೀಧರ್, ತಾಪಂ ಇಓ ಧರಣೇಶ್, ಉಪ ತಹಸೀಲ್ದಾರ್ ಸಂಜೀವ್ ಕುಮಾರ್, ಕಂದಾಯ ನಿರೀಕ್ಷಕ ಯೋಗೇಂದ್ರಕುಮಾರ್, ಪುರಸಭಾ ಮುಖ್ಯಾಧಿಕಾರಿ ಸುರೇಶ್, ಪಿಡಿಓಗಳಾದ ಗಣೇಶ್, ಸೌಮ್ಯ, ಬಿಇಓ ಮಾರಯ್ಯ, ಗ್ರಾಮ ಆಡಳಿತಾಧಿಕಾರಿಗಳಾದ ರಾಜ್‌ಕುಮಾರ್, ಮಹದೇವಸ್ವಾಮಿ, ನೇತ್ರ, ತನುಶ್ರೀ, ಯೋಗಿತಾ, ಗ್ರಾಪಂ ಅಧ್ಯಕ್ಷೆ ರಾಮಮ್ಮ, ಉಪಾಧ್ಯಕ್ಷ ದೇವರಾಜು, ಸದಸ್ಯರಾದ ರವಿಕುಮಾರ್, ರಮೇಶ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಮಹದೇವು, ವರ್ತಕರ ಸಂಘದ ಅಧ್ಯಕ್ಷ ಶ್ರೀಕಾಂತ್, ರಾಜು, ವಿನಯ್ ಭಜರಂಗಿ, ಯಶ್ವಂತ್, ಪ್ರಭಾಕರ್, ಗಿರೀಶ್ ಮೂರ್ತಿ, ಸ್ವಾಮಿ, ರಾಜಣ್ಣ, ಸೋಮು, ಶಿಕ್ಷಣ ಸಂಯೋಜಕ ಕೃಷ್ಣಮೂರ್ತಿ, ಪ್ರಾಂಶುಪಾಲರಾದ ಡಿ.ಪಿ. ಧರ್ಮಪ್ಪ ಇಂದ್ರಾಣಿ, ಕೆಂಪಯ್ಯ, ಸಂತೋಷ್ ಕುಮಾರ್, ರಾಜೇಶ್, ಚಂದ್ರಶೇಖರ್, ಮಹದೇವಿ, ಶಶಿಕಲಾ ಇನ್ನಿತರರಿದ್ದರು.

ಸೆ.9ಕ್ಕೆ, ನಗರಸಭೆ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ

ಹುಣಸೂರು, ಆ.30– ಇಲ್ಲಿನ ನಗರಸಭೆ ಸಭಾಂಗಣದಲ್ಲಿ ಸೆ.9ರಂದು ಮಧ್ಯಾಹ್ನ 12 ಗಂಟೆಗೆ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣಾಧಿಕಾರಿಗಳು ಆದ ಉಪವಿಭಾಗಾಧಿಕಾರಿ ನೇತೃತ್ವದಲ್ಲಿ ಚುನಾವಣೆ ನಡೆಯಲಿದೆ.

ನಗರಸಭೆ ಚುನಾವಣೆಗೆ ಸರ್ಕಾರ ಆ.5ರಂದೇ ಮೀಸಲಾತಿ ಪ್ರಕಟಿಸಿದರೂ ಸ್ಥಳೀಯ ಅಧಿಕಾರಿಗಳು ಚುನಾವಣೆ ದಿನಾಂಕ ನಿಗದಿಪಡಿಸದೇ ನಿರ್ಲಕ್ಷ್ಯ ವಹಿಸಿದ್ದರಿಂದ ನಗರಸಭೆ ಸದಸ್ಯರು ದಿನಾಂಕ ನಿಗದಿಪಡಿಸುವಂತೆ ಗುರುವಾರ ಪ್ರತಿಭಟನೆ ನಡೆಸಿದ ಹಿನ್ನೆಲೆಯಲ್ಲಿ ನಗರಸಭೆ ಅಧ್ಯಕ್ಷ ಉಪಾಧ್ಯಕ್ಷರ ಸ್ಥಾನಗಳಿಗೆ (ಸೆ.9) ದಿನಾಂಕ ನಿಗದಿ ಪಡಿಸಿ ಉಪವಿಭಾಗಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ. ಚುನಾವಣೆ ಸಭೆಗೆ ಎಲ್ಲಾ ಚುನಾಯಿತ ಸದಸ್ಯರು ಹಾಜರಾಗಿ ವರಿಷ್ಠರ ಆಯ್ಕೆ ಪ್ರಕ್ರಿಯೆಯನ್ನು ನಡೆಸಿಕೊಡುವಂತೆ ಮನವಿ ಮಾಡಿದ್ದಾರೆ.

ಲಾಳನಹಳ್ಳಿಯಲ್ಲಿ ಹಾಲಿನ ಶಿಥಲೀಕರಣ ಘಟಕ ಉದ್ಘಾಟನೆ



ಲಾಳನಹಳ್ಳಿ ಡೇರಿಯಲ್ಲಿ ಶಿಥಲೀಕರಣ ಘಟಕ ಉದ್ಘಾಟಿಸಲಾಯಿತು.

ಕೆ.ಆರ್.ನಗರ, ಆ.30– ಹೈನುಗಾರಿಕೆಗೆ ಆದ್ಯತೆ ನೀಡಿ ರೈತರ ಬದುಕನ್ನು ಹಸನುಗೊಳಿಸಲು ರಾಜ್ಯ ಸರ್ಕಾರ ಹಾಲು ಉತ್ಪಾದಕರಿಗೆ ಉತ್ತೇಜನ ನೀಡುವ ಜೊತೆಗೆ ಪ್ರೋತ್ಸಾಹಧನ ನೀಡುತ್ತಿದೆ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ತಾಲೂಕಿನ ಲಾಳನಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದಿಂದ ನಿರ್ಮಿಸಿರುವ ಶಿಥಲೀಕರಣ ಘಟಕ ಉದ್ಘಾಟಿಸಿ ನಂತರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಚುನಾವಣಾ ಪೂರ್ವ ನಮ್ಮ ಸರ್ಕಾರ ನೀಡಿದ್ದ ಎಲ್ಲಾ ಭರವಸೆಗಳನ್ನು ಈಡೇರಿಸಿದೆ ಎಂದರು.

ಹೈನುಗಾರಿಕೆಯಲ್ಲಿ ತೊಡಗುವುದರಿಂದ ಆರ್ಥಿಕಾಭಿವೃದ್ಧಿ ಜೊತೆಗೆ ಆರೋಗ್ಯವೂ ಸುಧಾರಿಸಲಿದ್ದು, ಈ ವಿಚಾರ ಅರಿತು ಪ್ರತಿಯೊಬ್ಬರೂ ಮನೆಗೊಂದು ಹಸು ಸಾಕಬೇಕು ಎಂದು ಸಲಹೆ ನೀಡಿದ ಅವರು ಗ್ರಾಮದ ಎಲ್ಲರೂ ಹಾಲು ಉತ್ಪಾದಕರ ಸಹಕಾರ ಸಂಘದ ಸದಸ್ಯತ್ವ ಪಡೆದು ಸರ್ಕಾರದಿಂದ ದೊರೆಯುವ ಸವಲತ್ತನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಲಾಳನಹಳ್ಳಿ ಗ್ರಾಮ ಪರಿಮಿತಿ ರಸ್ತೆ ಅಭಿವೃದ್ಧಿಗೆ 1 ಕೋಟಿ ರೂ. ಅನುದಾನ ನೀಡಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆಗೆ 3 ಲಕ್ಷ ರೂ. ಹಣ ಬಿಡುಗಡೆಯಾಗಿದ್ದು, ಇದರೊಂದಿಗೆ ಪರಿಶಿಷ್ಟ ಜಾತಿ ಕಾಲೋನಿ ರಸ್ತೆ ಅಭಿವೃದ್ಧಿಗೆ 60 ಲಕ್ಷ ನೀಡಿದ್ದು ಶೀಘ್ರ ಕೆಲಸ ಆರಂಭಿಸುವುದಾಗಿ ತಿಳಿಸಿದರು.

ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬಳಿಯ ಸರ್ಕಾರಿ ಜಮೀನಿನಲ್ಲಿ ತಿಪ್ಪೆಗುಂಡಿ ಮಾಡಿಕೊಂಡಿದ್ದು ಅದನ್ನು ತೆರವುಗೊಳಿಸಿ ಸುಂದರ ಉದ್ಯಾನವನ ನಿರ್ಮಿಸುವುದಾಗಿ ತಿಳಿಸಿ ಈ ವಿಚಾರದಲ್ಲಿ ಎಲ್ಲರೂ ಸಹಕಾರ ನೀಡಬೇಕೆಂದು ಕೋರಿದರು. ಈ ಸಂದರ್ಭ ಸಂಘದಿಂದ ಶಾಸಕರನ್ನು ಸನ್ಮಾನಿಸಲಾಯಿತು.

ಮೈಮುಲ್ ಅಧ್ಯಕ್ಷ ಆರ್.ಚಲುವರಾಜು, ನಿರ್ದೇಶಕರಾದ ಎ.ಟಿ.ಸೋಮಶೇಖರ್, ಮಲ್ಲಿಕಾ, ಸಂಘದ ಅಧ್ಯಕ್ಷೆ ಸೌಮ್ಯ, ಎಪಿಎಂಸಿ ಮಾಜಿ ನಿರ್ದೇಶಕ ಎಲ್.ಪಿ. ರವಿಕುಮಾರ್, ಗ್ರಾಪಂ ಅಧ್ಯಕ್ಷೆ ಪಾರ್ವತಿ, ಉಪಾಧ್ಯಕ್ಷ ಸುರೇಶ್, ಸದಸ್ಯ ಎಲ್.ಪಿ. ಉಮೇಶ್, ಎಲ್.ಎಸ್.ಗುರು ಮಾತನಾಡಿದರು. ಜಿಪಂ ಮಾಜಿ ಸದಸ್ಯ ಶಿವರಾಮ್, ಮಾಜಿ ಪ್ರಧಾನ ಕೆಂಪರಾಜು, ಗ್ರಾಪಂ ಸದಸ್ಯರಾದ ಲೋಕೇಶ್, ಶೇಖರ್, ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಲ್.ಯು. ಮನೋಜ್, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಸಿದ್ದೇಗೌಡ, ಮುಖಂಡರಾದ ಜಯಣ್ಣ, ಗಣೇಶ್, ಸುನೀತಾ, ಸ್ಮಿತಾ, ಮಾರ್ಕಂಡೇಯ ಸ್ವಾಮಿ, ಸಂಘದ ಸಿಇಓ ಎಸ್.ಡಿ.ಅಂಬಿಕಾ, ಹಾಲು ಪರೀಕ್ಷಕಿ ಸಾಕಮ್ಮ ಮತ್ತಿತರರಿದ್ದರು.

ಗೌರಿ–ಗಣೇಶ, ಈದ್ ಮಿಲಾದ್ ಹಿನ್ನೆಲೆ ಶಾಂತಿಸಭೆ



ಗೌರಿ–ಗಣೇಶ, ಈದ್ ಮಿಲಾದ್ ಹಿನ್ನೆಲೆಯಲ್ಲಿ ಶಾಂತಿ ಸಭೆ ನಡೆಯಿತು.

ಸರಗೂರು, ಆ.30– ಪಟ್ಟಣದ ಪೊಲೀಸ್ ಠಾಣೆ ಆವರಣದಲ್ಲಿ ಗೌರಿ–ಗಣೇಶ, ಈದ್ ಮಿಲಾದ್ ಹಬ್ಬದ ಹಿನ್ನಲೆಯಲ್ಲಿ ವಿವಿಧ ಸಮುದಾಯದ ಮುಖಂಡರನ್ನೊಳಗೊಂಡ ಶಾಂತಿ ಸಭೆ ನಡೆಯಿತು.

ಸಭೆಯಲ್ಲಿ ಸಿಪಿಐ ಲಕ್ಷ್ಮಿಕಾಂತ ಮಾತನಾಡಿ, ಪಟ್ಟಣ ಹಾಗೂ ಗ್ರಾಮೀಣ ಭಾಗದಲ್ಲಿ ಎಲ್ಲರೂ ಪ್ರತಿ ವರ್ಷದಂತೆ ಈ ವರ್ಷವೂ ಶಾಂತಿ ಸೌಹಾರ್ದತೆಯಿಂದ ಗಣೇಶ ಹಾಗೂ ಈದ್ ಮಿಲಾದ್ ಹಬ್ಬ ಆಚರಿಸಬೇಕು. ಎಲ್ಲರೂ ಪರಿಸರ ಸ್ನೇಹಿ ಗಣಪತಿ ಕೂರಿಸಲು ಮುಂದಾಗಬೇಕು. ರಾತ್ರಿ ವೇಳೆ ಗಣೇಶ ವಿಸರ್ಜನೆ ಮಾಡಬಾರದು. ಲೈಟಿಂಗ್ಸ್, ಸೌಂಡ್ಸ್ ಸೇರಿದಂತೆ ಗಣೇಶನನ್ನು ಪ್ರತಿಷ್ಠಾಪಿಸಲು ಕಡ್ಡಾಯವಾಗಿ ಪರವಾನಗಿ ಪಡೆಯಬೇಕು. ಸೂಕ್ಷ್ಮ ಸ್ಥಳಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಲಾಗುವುದು. ಡಿಜೆ ಸೌಂಡ್ಸ್ ಕಡ್ಡಾಯವಾಗಿ ನಿಷೇಧಿಸಲಾಗಿದೆ ಎಂದ ಅವರು, ಸಾರ್ವಜನಿಕರು ಶಾಂತಿ ಸುವ್ಯವಸ್ಥೆ ಕಾಪಾಡುವ ಮೂಲಕ ಗೌರಿ–ಗಣೇಶ, ಈದ್ ಮಿಲಾದ್ ಹಬ್ಬವನ್ನು ಸಂಭ್ರಮದಿಂದ ಆಚರಿಸುವಂತೆ ತಿಳಿಸಿದರು.

ಸಭೆಯಲ್ಲಿ ಎಸ್‌ಐ ನಂದೀಶ್ ಕುಮಾರ್, ಗೋಪಾಲ್, ಸಿಬ್ಬಂದಿಗಳಾದ ಇಮ್ರಾನ್ ಅಹಮದ್, ನಾರಾಯಣ್, ಕೃಷ್ಣ, ಜಗದೀಶ್, ಶಿವಪ್ಪ, ಕೃಷ್ಣ ಕುಮಾರ್, ಉಷಾದೇವ್, ಶಿವರಾಜು, ವಿನಯ್ ಕುಮಾರ್, ಪ್ರಕಾಶ್, ವಿವಿಧ ಕೋಮಿನ ಮುಖಂಡರು, ಸಾರ್ವಜನಿಕರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಗೆ ಲೈಂಗಿಕ ಕಿರುಕುಳ: ಪೋಕ್ಸೋ ಕಾಯ್ದೆಯಡಿ ಮುಖ್ಯಶಿಕ್ಷಕನ ಬಂಧನ

ನಂಜನಗೂಡು, ಆ.30– ವಿದ್ಯಾರ್ಥಿಗಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇರೆಗೆ ಶಾಲೆಯ ಮುಖ್ಯ ಶಿಕ್ಷಕನನ್ನು ಪೋಕ್ಸೋ ಕಾಯ್ದೆಯಡಿ ನಂಜನಗೂಡು ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ತಾಲೂಕಿನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಮುಖ್ಯಶಿಕ್ಷಕ ದೇವಶೆಟ್ಟಿ ಬಂಧಿತ ಆರೋಪಿ. ಈತ ಶಾಲೆಯ ಇಬ್ಬರು ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದ ಎನ್ನಲಾಗಿದೆ. ಈ ವಿಷಯವನ್ನು ವಿದ್ಯಾರ್ಥಿನಿಯರು ತಮ್ಮ ಪೋಷಕರಿಗೆ ತಿಳಿಸಿದ್ದು, ಪೋಷಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ಅಲ್ಲದೇ ನಂಜನಗೂಡು ಗ್ರಾಮಾಂತರ ಠಾಣೆಗೆ ದೂರು ನೀಡಿದ ಮೇರೆಗೆ ಪೊಲೀಸರು ಶಿಕ್ಷಕನ ವಿರುದ್ಧ ಪೋಕ್ಸೋ ಪ್ರಕರಣ ದಾಖಲಿಸಿ, ಆತನನ್ನು ವಶಕ್ಕೆ ಪಡೆದು ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ಬಳಿಕ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ವಿದ್ಯಾರ್ಥಿಗಳಿಗೆ ಲೈಂಗಿಕ ಕಿರುಕುಳ ನೀಡಿದ ಸಂಬಂಧ ದೂರುಗಳು ಕೇಳಿಬಂದ ಹಿನ್ನೆಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳ ನೇತೃತ್ವದ ತಂಡ ಶಾಲೆಗೆ ತೆರಳಿ ಮಕ್ಕಳು ಹಾಗೂ ಪೋಷಕರೊಡನೆ ಸಮಾಲೋಚನೆ ನಡೆಸಿದರು. ಶಿಕ್ಷಕನ ಲೈಂಗಿಕ ದೌರ್ಜನ್ಯ ಕುರಿತು ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್ ಸುದ್ದಿಗಾರರಿಗೆ ಮಾಹಿತಿ ನೀಡಿದ್ದು, ಪ್ರಕರಣ ಸಂಬಂಧ ಮಾಹಿತಿ ಕಲೆ ಹಾಕಿದ್ದು, ಆರೋಪಿ ಶಿಕ್ಷಕನ ವಿರುದ್ಧ ಕ್ರಮಕ್ಕೆ ಶಿಕ್ಷಣ ಇಲಾಖೆ ಉಪ ಆಯುಕ್ತರಿಗೆ ವರದಿ ಸಲ್ಲಿಸುವುದಾಗಿ ತಿಳಿಸಿದರು. ಈ ಸಂಬಂಧ ನಂಜನಗೂಡು ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಾಗಿದೆ.

ಕಸಬಾ ಹೋಬಳಿ ಮಟ್ಟದ ಕ್ರೀಡಾಕೂಟ



ಆಟೋಟಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ನಂಜನಗೂಡು, ಆ.30– ದೈಹಿಕ ಚಟುವಟಿಕೆಗಳು ವಿದ್ಯಾರ್ಥಿಗಳ ಮೆದುಳಿನ ಬೆಳವಣಿಗೆಗೆ ಉತ್ತೇಜಿಸುವ ಜೊತೆಗೆ ಮಾನಸಿಕ, ದೈಹಿಕ ಆರೋಗ್ಯ ಕಾಪಾಡುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಪ್ರತಿದಿನ ಯಾವುದಾದರೊಂದು ಕ್ರೀಡೆಯಲ್ಲಿ ತೊಡಗಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್ ತಿಳಿಸಿದರು.

ನಾಗರದ ಜೂನಿಯರ್ ಕಾಲೇಜು ಮೈದಾನದಲ್ಲಿ ಹಳ್ಳದಕೇರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಸಹಯೋಗದಲ್ಲಿ ನಡೆದ ಕಸಬಾ ಹೋಬಳಿ ಮಟ್ಟದ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕ್ರೀಡೆಗಳು ಸ್ಪರ್ಧಾತ್ಮಕ ಮನೋಭಾವ ಮೂಡಿಸಿ ವಿದ್ಯಾರ್ಥಿಗಳಲ್ಲಿ ಕೌಶಲ್ಯವನ್ನು ವೃದ್ಧಿಸುತ್ತದೆ. ಆದ್ದರಿಂದ ನೀವು ಪಠ್ಯದಂತೆ ಆಟೋಟಗಳಿಗೂ ಪ್ರಾಮುಖ್ಯತೆ ನೀಡಬೇಕು. ಎಲ್ಲರೂ ಸೋಲು–ಗೆಲುವನ್ನು ಸಮಾನವಾಗಿ ಸ್ವೀಕರಿಸಿ ಎಂದು ಶುಭ ಹಾರೈಸಿದರು. ಇದೇ ವೇಳೆ ವಿವಿಧ ಆಟೋಟಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪದಕ ಮತ್ತು ಪ್ರಮಾಣ ಪತ್ರ ವಿತರಿಸಲಾಯಿತು. ಡಯಟ್ ಹಿರಿಯ ಉಪನ್ಯಾಸಕ ನಂಜುಂಡ ಆರಾಧ್ಯ, ಬಾಲರಾಜು, ಪ್ರಭುಸ್ವಾಮಿ, ಜಗದೀಶ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಧರ್ಮರತ್ನಾಕರ, ಸತೀಶ್ ದಳವಾಯಿ, ರಂಗನಾಥ್, ಮಹದೇವಮೂರ್ತಿ, ಲೀಲಾವತಿ, ಪುಟ್ಟರಾಜು, ಹನುಮಂತರಾಜು, ಶ್ರೀಪತಿ, ರಾಜಪ್ಪ ನಾಗರಾಜು, ರವಿಕುಮಾರ್, ನೀಲಿಸಿದ್ದು, ಗೋಪಾಲ್ ರಾವ್, ಮುದ್ದುಮಾದೇಗೌಡ, ಜುಬುಲೆಂಟ್ ವ್ಯವಸ್ಥಾಪಕ ಶ್ರೀನಿವಾಸ್, ದೀಪಕ್ ಇತರರಿದ್ದರು.

ಸಾಲಿಗ್ರಾಮದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ



ಸಾಲಿಗ್ರಾಮದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ನಡೆಯಿತು.

ಚುಂಚನಕಟ್ಟೆ, ಆ.30– ಕಣ್ಣನ್ನು ಯಾರೂ ನಿರ್ಲಕ್ಷ ಮಾಡಬಾರದು ಎಂದು ಸಾಲಿಗ್ರಾಮ ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ಅಶೋಕ್ ತಿಳಿಸಿದರು.

ಸಾಲಿಗ್ರಾಮ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಜಿಲ್ಲಾ ಅಂದತ್ವ ನಿವಾರಣಾ ಸಂಸ್ಥೆ, ವೈದ್ಯಾಧಿಕಾರಿಗಳು, ನೇತ್ರಾಧಿಕಾರಿಗಳು ಹಾಗೂ ಸಿಬ್ಬಂದಿವರ್ಗ ಸಾಲಿಗ್ರಾಮ ಸಮುದಾಯ ಆರೋಗ್ಯ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಉಚಿತ ಕಣ್ಣಿನ ತಪಾಸಣಾ ಹಾಗೂ ಶಸ್ತ್ರ ಚಿಕಿತ್ಸಾ ಶಿಬಿರದಲ್ಲಿ ಅವರು ಮಾತನಾಡಿದರು.

ಉತ್ತಮ ದೃಷ್ಟಿ ಹೊಂದಿದ್ದರೂ, ಓದುವಿಕೆಯಲ್ಲಿ ಯಾವುದೇ ತೊಂದರೆ ಇಲ್ಲದಿದ್ದರೂ, ಕನಿಷ್ಠ ವರ್ಷಕ್ಕೊಮ್ಮೆಯಾದರೂ ದೃಷ್ಟಿ ಪರೀಕ್ಷಿಸಿ. ಇದು ಕಣ್ಣಿನ ಸಂಬಂಧಿತ ವಿವಿಧ ಕಾಯಿಲೆಗಳನ್ನು ಪತ್ತೆ ಮಾಡಲು ಮತ್ತು ಸರಿಯಾದ ಚಿಕಿತ್ಸೆ ನೀಡಿ ಅದನ್ನು ತಡೆಯಲು ಉತ್ತಮ ಮಾರ್ಗವಾಗಿದೆ ಎಂದರು. ಕಣ್ಣಿನ ಬಗ್ಗೆ ಸರ್ವರು ಎಚ್ಚರದಿಂದಿರಬೇಕು. ರೈತರು ತಮ್ಮ ಹೊಲ ಗದ್ದೆಗಳಲ್ಲಿ ದಿನನಿತ್ಯ ಕೆಲಸ ಮಾಡುವ ಸಂದರ್ಭ ನಮಗೆ ಗೊತ್ತಿಲ್ಲದ ರೀತಿ ಹಲವು ಅವಘಡಗಳು ನಡೆಯುವ ಸಾಧ್ಯತೆ ಇರುತ್ತದೆ. ಮಕ್ಕಳು ಆಟವಾಡುವ ಸಮಯದಲ್ಲಿ ಅವರಿಗೆ ಅರಿವಿಲ್ಲದೆ ನಡೆಯುವ ಘಟನೆಗಳ ಬಗ್ಗೆ ಜಾಗರೂಕತೆಯಿಂದ ಇರಬೇಕು ಎಂದರು.

ಮಧುಮೇಹ ಮತ್ತು ರಕ್ತದೊತ್ತಡ ಇರುವವರು ಪ್ರತಿ 6 ತಿಂಗಳಿಗೊಮ್ಮೆ ಕಣ್ಣನ್ನು ನೇತ್ರ ತಜ್ಞರಲ್ಲಿ ಪರೀಕ್ಷೆ ಮಾಡಿಸಿಕೊಳ್ಳಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯಕ್ಕೆ ಸಂಬಂಧಿಸಿದಂತೆ ನಡೆಯುವ ಇಂತಹ ಉಚಿತ ಶಿಬಿರಗಳನ್ನು ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಶಿಬಿರದಲ್ಲಿ ಕಣ್ಣಿನ ತಪಾಸಣೆ ನಡೆಸಿ, ಶಸ್ತ್ರ ಚಿಕಿತ್ಸೆ ಅಗತ್ಯ ಇರುವವರನ್ನು ಮೈಸೂರಿನ ಜಿಲ್ಲಾ ಅಂಧತ್ವ ನಿವಾರಣಾ ಸಂಸ್ಥೆ ಸಂಚಾರಿ ನಿಯಂತ್ರಣ ಘಟಕಕ್ಕೆ ಕರೆದೊಯ್ಯಲಾಯಿತು. ಶಿಬಿರದಲ್ಲಿ ಡಾ.ಚೇತನ್ ಕುಮಾರ್ ನೇತೃತ್ವದ ಡಾ. ಸೌಂದರ್ಯ, ಡಾ.ರೆಹಾನ್, ನೇತ್ರಾಧಿಕಾರಿಗಳಾದ ಎ.ಎಸ್.ಮಂಜುನಾಥ, ಕೆ.ಎಸ್.ಶೇಖರ್, ಶಿಬಿರದ ಸಂಘಟಕ ಕೆ.ಟಿ.ಮೋಹನ್ ಕುಮಾರ್, ಪ್ರಯೋಗ ಶಾಲಾ ತಂತ್ರಜ್ಞ ಆರ್.ಶಿವಕುಮಾರ್, ಶ್ರೀಮಂತ್, ಎನ್‌ಸಿಡಿ ವಿಭಾಗದ ಆಪ್ತ ಸಮಾಲೋಚಕ ಲಕ್ಷ್ಮಣ, ಆಸ್ಪತ್ರೆ ಸಿಬ್ಬಂದಿಗಳಾದ ಶಶಿಯಮ್ಮ, ಸಿದ್ದು, ಅಶ್ವಿನಿ, ರೂಪ, ಮಧು, ರಾಮಲಿಂಗಪ್ಪ, ಕಾಂತರಾಜು, ಅರವಿಂದ, ಆಶಾ ಕಾರ್ಯಕರ್ತೆಯರು ಸೇರಿದಂತೆ ಹಲವರಿದ್ದರು.

ಹೆಚ್ಚು ಸದಸ್ಯತ್ವದೊಂದಿಗೆ ಪಕ್ಷದ ಬಲವರ್ಧನೆಗೆ ಶ್ರಮಿಸಿ

ಕ್ಷೇತ್ರ ಬಿಜೆಪಿ ಅಧ್ಯಕ್ಷ ಶಿವಕುಮಾರ್ ಕರೆ



ಬಿಜೆಪಿ ಸದಸ್ಯತ್ವ ಅಭಿಯಾನ ಕಾರ್ಯಾಗಾರದಲ್ಲಿ ಬಿಜೆಪಿ ಕ್ಷೇತ್ರಾಧ್ಯಕ್ಷ ಶಿವಕುಮಾರ್ ಮಾತನಾಡಿದರು.

ತಿ.ನರಸೀಪುರ, ಆ.30– ಸೆ.2ರಿಂದ ಬಿಜೆಪಿ ಸದಸ್ಯತ್ವ ಅಭಿಯಾನ ಆರಂಭವಾಗಲಿದ್ದು, ತಾಲೂಕಿನಿಂದ ಅತೀ ಹೆಚ್ಚು ಸದಸ್ಯತ್ವ ಮಾಡಿಸುವ ಮೂಲಕ ಪಕ್ಷದ ಬಲವರ್ಧನೆಗೆ ಶ್ರಮಿಸಬೇಕು ಎಂದು ಕ್ಷೇತ್ರ ಬಿಜೆಪಿ ಅಧ್ಯಕ್ಷ ಶಿವಕುಮಾರ್ (ಸತ್ಯಪ್ಪ) ತಿಳಿಸಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ನಡೆದ ಬಿಜೆಪಿ ಸದಸ್ಯತ್ವ ಅಭಿಯಾನ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬಿಜೆಪಿ ಪ್ರಧಾನ ಕಾರ್ಯದರ್ಶಿಗಳು, ಸದಸ್ಯತ್ವ ಅಭಿಯಾನ ಸಂಚಾಲಕರು, ಸಹ ಸಂಚಾಲಕರು, ಸಾಮಾಜಿಕ ಜಾಲತಾಣ, ಪರಿಸರ ದಾಖಲಾತಿ ಹಾಗೂ ಪ್ರಚಾರಕರು ಶಕ್ತಿ ಕೇಂದ್ರ ವಿಸ್ತಾರಕರು ಮತ್ತು ಪ್ರಮುಖರು ಮುಖ್ಯಘಟ್ಟ ತಲುಪಿರುವ ಸದಸ್ಯತ್ವ ಅಭಿಯಾನ ಯಶಸ್ವಿಗೆ ಶ್ರಮಿಸಬೇಕಿದೆ ಎಂದರು.

ಸೆ.2ರಂದು ಪ್ರಧಾನಿ ಮೋದಿ ಅವರು ದೆಹಲಿಯಲ್ಲಿ ಮಿಸ್ಡ್ ಕಾಲ್ ಕೊಡುವ ಮೂಲಕ ಸದಸ್ಯತ್ವ ನೋಂದಣಿ ಮಾಡಲಿದ್ದಾರೆ. ಕರ್ನಾಟಕದಲ್ಲಿ 1.50 ಕೋಟಿ ಸದಸ್ಯರನ್ನು ನೋಂದಾಯಿಸುವ ಗುರಿ ಇದೆ. ಮಿಸ್ಡ್ ಕಾಲ್ ಕೊಟ್ಟ ನಂತರ ಅರ್ಜಿ ನಮೂನೆ ಹಾಗೂ ಒನ್ ಟೈಮ್ ಪಾಸ್‌ವರ್ಡ್ ಬರಲಿದೆ. ಅರ್ಜಿ ಭರ್ತಿ ಮಾಡಿ, ಫೋಟೋ ಅಪ್‌ಲೋಡ್ ಮಾಡಿದ ನಂತರವಷ್ಟೇ ಸದಸ್ಯತ್ವ ನೋಂದಣಿಯಾಗಲಿದೆ. ಬೂತ್ ಮಟ್ಟದಲ್ಲಿ ಹೆಚ್ಚಿನ ಸದಸ್ಯತ್ವ ಮಾಡಿಸುವ ಮೂಲಕ ತಾಲೂಕಿನಲ್ಲಿ ಹೆಚ್ಚು ಸದಸ್ಯರನ್ನು ನೋಂದಣಿ ಮಾಡಲು ಮುಂದಾಗಬೇಕಿದೆ ಎಂದರು.

ನಿಕಟಪೂರ್ವ ಜಿಲ್ಲಾ ಗ್ರಾಮಾಂತರ ಅಧ್ಯಕ್ಷೆ ಮಂಗಳಾ ಸೋಮಶೇಖರ್ ಮಾತನಾಡಿ, ಮಿಸ್ಡ್ ಕಾಲ್ ಕೊಟ್ಟು ಸದಸ್ಯತ್ವ ನೋಂದಣಿ ಮಾಡಿಕೊಳ್ಳಲು 8800002024 ಸಂಖ್ಯೆಯನ್ನು ಸಾರ್ವಜನಿಕವಾಗಿ ಪ್ರಕಟಿಸಲಾಗಿದೆ. ಬೂತ್ ಅಧ್ಯಕ್ಷರಿಂದ ಆರಂಭಿಸಿ ಎಲ್ಲಾ ಹಂತದ ಪದಾಧಿಕಾರಿಗಳು, ಗ್ರಾಪಂ ಸದಸ್ಯರಿಂದ ಎಲ್ಲಾ ಹಂತದ ಜನಪ್ರತಿನಿಧಿಗಳಿಗೆ ಒಂದು ತಿಂಗಳ ಕಾಲ ನಡೆಯುವ ಈ ಅಭಿಯಾನ ಯಶಸ್ವಿಗೊಳಿಸಲು ಕರೆ ಕೊಡಲಾಗಿದೆ. ಬಿಜೆಪಿ ಸದಸ್ಯರಾಗುವುದು ಎಂದರೆ ವಿಕಸಿತ ಭಾರತಕ್ಕೆ ಸಾಕ್ಷಿಗಳಾಗುವುದು ಎಂದು ವಿಶ್ಲೇಷಿಸಿದ ಅವರು 2 ಹಂತದಲ್ಲಿ ನಡೆಯುವ ಅಭಿಯಾನದಲ್ಲಿ ತಾಲೂಕಿನ ಎಲ್ಲಾ ಪದಾಧಿಕಾರಿಗಳು, ಮುಖಂಡರು ಹಾಗೂ ಕಾರ್ಯಕರ್ತರು ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಕಳೆದ ಬಾರಿಯಂತೆ ಪ್ರಸ್ತುತವೂ ತಾಲೂಕಿನಲ್ಲಿ ಅತ್ಯಧಿಕ ಸದಸ್ಯತ್ವ ಮಾಡುವ ನಿಟ್ಟಿನಲ್ಲಿ ಮಂಡಲ ಹಾಗೂ ಎಲ್ಲಾ ಮೋರ್ಚಾಗಳು ಕಾರ್ಯ ಯೋಜನೆ ಹಾಕಿಕೊಳ್ಳಬೇಕು. ತಾಲೂಕಿನಲ್ಲಿ ಜಿಲ್ಲೆಯಲ್ಲಿಯೇ ಹೆಚ್ಚು ಸದಸ್ಯತ್ವ ಮಾಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಪ್ರಧಾನ ಕಾರ್ಯದರ್ಶಿ ಗೂಳಿ ಮಹೇಶ್, ಮೈಸೂರು ಗ್ರಾಮಾಂತರ ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಮೂಗೂರು ಸಿದ್ದರಾಜು, ಜಿಲ್ಲಾ ಗ್ರಾಮಾಂತರ ಕಾರ್ಯದರ್ಶಿ ಕರೋಹಟ್ಟಿ ಬಸವರಾಜು, ಬಿಜೆಪಿ ಹಿರಿಯ ಮುಖಂಡ ಕರೋಹಟ್ಟಿ ಮಹದೇವಯ್ಯ, ನಿಕಟಪೂರ್ವ ಮಾಜಿ ಪ್ರಧಾನ ಕಾರ್ಯದರ್ಶಿ ಸಿದ್ಧಮಲ್ಲಪ್ಪ, ಮಹಾಶಕ್ತಿಕೇಂದ್ರ ಅಧ್ಯಕ್ಷ ಸುರೇಶ್, ತಲಕಾಡು ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಕುಕ್ಕೂರು ಮಲ್ಲಿಕಾರ್ಜುನ, ಸೋಸಲೆ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ದೊಡ್ಡಪುರ ಎಸ್.ಲಕ್ಷ್ಮಣ್, ತಿ.ನರಸೀಪುರ ಟೌನ್ ಅಧ್ಯಕ್ಷ ಅಕ್ಕಿ ನಂಜುಂಡಸ್ವಾಮಿ, ಬನ್ನೂರ್ ಟೌನ್ ಅಧ್ಯಕ್ಷ ಕಾಳೇಗೌಡ, ರಾಹುಲ್‌ಗೌಡ, ಮೋರ್ಚಾ ಅಧ್ಯಕ್ಷರಾದ ರವಿ, ಸಿದ್ದರಾಜು, ಗೌಡ್ರು ಪ್ರಕಾಶ್, ಚಾಮ, ಸೋಮಶೇಖರಪ್ಪ ಇದ್ದರು.

ಮೈಸೂರು ಮಿತ್ರ

ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ತನಿಖೆಗೆ ದೂರು

ಖರ್ಗೆ ಅಭಿಮಾನಿ ಸಂಘದ ಸಿ.ನರೇಂದ್ರ ನಿರ್ಧಾರ



ಕಾಂಗ್ರೆಸ್ ಕಚೇರಿಯಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಮಾತನಾಡಿದರು. ನಗರಾಧ್ಯಕ್ಷ ಆರ್.ಮೂರ್ತಿ, ಮಲ್ಲಿಕಾರ್ಜುನ ಖರ್ಗೆ ಅಭಿಮಾನಿಗಳ ಸಂಘದ ಅಧ್ಯಕ್ಷ ಸಿ.ನರೇಂದ್ರ ಮತ್ತಿತರರಿದ್ದರು

ಮೈಸೂರು, ಆ.30(ಎಂಕೆ)– ಮೀಸಲಾತಿ ಅನುಕೂಲವನ್ನು ದುರುಪಯೋಗ ಮಾಡಿಕೊಳ್ಳುವ ಮೂಲಕ ಇತರೆ ದಲಿತ ಉದ್ಯಮಿಗಳಿಗೆ ವಂಚಿಸಿರುವ ವಿಧಾನ ಪರಿಷತ್ತಿನ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ವಿರುದ್ಧ ತನಿಖೆ ನಡೆಸುವಂತೆ ರಾಜ್ಯಪಾಲರಿಗೆ ದೂರು ನೀಡಲಾಗುವುದು ಎಂದು ಮಲ್ಲಿಕಾರ್ಜುನ ಖರ್ಗೆ ಅಭಿಮಾನಿಗಳ ಸಂಘದ ಅಧ್ಯಕ್ಷ ಸಿ.ನರೇಂದ್ರ ಹೇಳಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿದ ಅವರು, ಗ್ರಾಪಂ ಸದಸ್ಯನಾಗಲೂ ಅರ್ಹತೆ ಇಲ್ಲದ ನಾರಾಯಣ ಸ್ವಾಮಿ ಅವರು, ತಮ್ಮನ್ನು ರೈಲ್ವೆ ಬೋರ್ಡ್ ಅಧ್ಯಕ್ಷರನ್ನಾಗಿ ಮಾಡಿದ ಮಲ್ಲಿಕಾರ್ಜುನ ಖರ್ಗೆ ಅವರ ಕುಟುಂಬದ ವಿರುದ್ಧ ಮಾತನಾಡಿದರೆ ಬಿಜೆಪಿಯಲ್ಲಿ ಮೈಲೇಜ್ ಸಿಗುತ್ತದೆ ಎಂಬ ಭ್ರಮೆಯನ್ನು ಮೊದಲು ಬಿಡಬೇಕು. ಮಲ್ಲಿಕಾರ್ಜುನ ಖರ್ಗೆ ಅವರ ಕುಟುಂಬದ ಅನ್ನ ತಿಂದು ಸಕಾರಣ ವಿಲ್ಲದೆ ಅವರ ವಿರುದ್ಧವೇ ಆರೋಪ ಮಾಡುವುದು ದ್ರೋಹದ ಕೆಲಸ ಎಂದು ಕಿಡಿಕಾರಿದರು.

ಕಾಂಗ್ರೆಸ್ ಪಕ್ಷದಲ್ಲಿದ್ದಾಗ ಅವರು ಛಲವಾದಿ ನಾರಾಯಣಸ್ವಾಮಿ ಆಗಿದ್ದರು. ಈಗ ಅವರು ಚಡ್ಡಿ ನಾರಾಯಣಸ್ವಾಮಿ ಆಗಿ ಮಾತ್ರ ಉಳಿದಿದ್ದಾರೆ. ಮೈಸೂರಿನ ಕೆಐಎಡಿಬಿಯಿಂದ 2 ಎಕರೆ ಮಾತ್ರವಲ್ಲದೆ ಹೂಟಗಳ್ಳಿಯಲ್ಲಿ ಅವರ ಮಗ ಪ್ರದೀಪ್ ಚೌದರಿ ಹೆಸರಿನಲ್ಲಿ 21 ಗುಂಟೆ, ಮಂಡ್ಯ ತೂಬಿನಕೆರೆ ಹಾಗೂ ಹೊಸಕೋಟೆಯಲ್ಲೂ ಕೆಐಎಡಿಬಿ ನಿವೇಶನ ಮಂಜೂರು ಮಾಡಿಸಿಕೊಂಡು ನಂತರ ಅದನ್ನು ಪಾಟ್ನರ್‌ಶಿಪ್‌ನಲ್ಲಿ ಮಾರಾಟ ಮಾಡುವ ಮೂಲಕ ಸರ್ಕಾರಕ್ಕೆ ವಂಚಿಸಿದ್ದಾರೆ. ಈ ಬಗ್ಗೆ ತನಿಖೆ ನಡೆಸುವಂತೆ ರಾಜ್ಯಪಾಲರಿಗೆ ದೂರು ನೀಡಲಾಗುವುದು ಎಂದು ಕೆಲ ದಾಖಲೆಗಳನ್ನು ಬಿಡುಗಡೆ ಮಾಡಿದರು.

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಮಾತನಾಡಿ, 1969ರಲ್ಲಿ ರಾಜಕೀಯಕ್ಕೆ ಬಂದ ಮಲ್ಲಿಕಾರ್ಜುನ ಖರ್ಗೆ ಅವರು, ಶಾಸಕರಾಗಿ, ಸಚಿವರಾಗಿ, ವಿರೋಧ ಪಕ್ಷದ ನಾಯಕರಾಗಿ, ಕೇಂದ್ರ ಸಚಿವರಾಗಿ ಇದೀಗ ಎಐಸಿಸಿ ಅಧ್ಯಕ್ಷರಾಗಿದ್ದಾರೆ.

> 45 ವರ್ಷಗಳ ಹಿಂದೆಯೇ ಸಿದ್ಧಾರ್ಥ ಟ್ರಸ್ಟ್ ಪ್ರಾರಂಭವಾಗಿದ್ದು, ಕೆಐಎಡಿಬಿ ನಿಯಮಾನುಸಾರ ಟ್ರಸ್ಟ್‌ಗೆ ಜಮೀನು ನೀಡಿದೆ. ಹೀಗಿದ್ದರೂ ನಾರಾಯಣಸ್ವಾಮಿ ಅವರು ಬಿಜೆಪಿಯಿಂದ ಸುಪಾರಿ ಪಡೆದವರಂತೆ ಖರ್ಗೆ ಅವರ ಕುಟುಂಬದ ವಿರುದ್ಧ ಸುಳ್ಳು ಆರೋಪ ಮಾಡುತ್ತಿರುವುದು ಸರಿಯಲ್ಲ. ಸತ್ಯವಾಗಿದ್ದರೆ, ದಾಖಲೆ ಸಮೇತ ವಿಧಾನಸೌಧದಲ್ಲಿರುವ ಅಂಬೇಡ್ಕರ್ ಪ್ರತಿಮೆ ಎದುರು ಪ್ರಮಾಣ ಮಾಡಲಿ.
>
> – ಡಾ.ಬಿ.ಜೆ.ವಿಜಯ್‌ಕುಮಾರ್, ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ

ಅಂದಿನ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಹಿಂದುಳಿದ ಪ್ರದೇಶವಾಗಿದ್ದ ಹೈದರಾಬಾದ್ ಕರ್ನಾಟಕಕ್ಕೆ 371ಜೆ ಮೂಲಕ ನ್ಯಾಯ ಒದಗಿಸಿದ್ದಾರೆ. ಇದರಿಂದ ಅಲ್ಲಿನ ಯುವಕ, ಯುವತಿಯರು ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಪಡೆಯಲು ಸಾಧ್ಯವಾಗಿದೆ ಎಂದು ಸ್ಮರಿಸಿದರು. ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಮುಖಂಡ ಭಾಸ್ಕರ್ ಮತ್ತಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಚಿತ್ರಮಂದಿರ / ಚಿತ್ರ	
ಪದ್ಮ ಚಿತ್ರಮಂದಿರ	(ದೂ: 2521923)
ದ ರೂಲರ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಭೀಮಾ (ಕ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕರಿಯ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೀಮಾ (ಕ)	4 ಪ್ರದರ್ಶನಗಳು
ರಾಜಕಮಲ್	
ಸರಿಪೋದಾ ಶನಿವಾರಂ (ತೆ)	4 ಪ್ರದರ್ಶನಗಳು
ಸಂಗಂ	
ಭೀಮಾ (ಕ)	4 ಪ್ರದರ್ಶನಗಳು
ಲಿಡೋ	
ಕರಿಯಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮಿಸ್ಟರ್ ಬಚನ್ (ತೆ)	4 ಪ್ರದರ್ಶನಗಳು
ಪ್ರಭಾ	
ಅಹೋ ವಿಕ್ರಮಾರ್ಕ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1 ವಾರ್ಝಾ ಬಯೋಪಿಕ್ ಆಫ್ ಎ ಬಿಲಿಯನ್ ಬಾಯ್ಸ್ (ಮ): ಬೆ.10.20ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.12.55ಕ್ಕೆ, ಸಂ.4ಕ್ಕೆ, ಸರಿಪೋದಾ ಶನಿವಾರಂ (ತೆ): ರಾ.7.10ಕ್ಕೆ, ರಾ.10.30ಕ್ಕೆ.

ಸ್ಕ್ರೀನ್ 2 ಪೆಪೆ (ಕ): ಬೆ.11ಕ್ಕೆ, ಸಂ.4.30ಕ್ಕೆ, ಸ್ತ್ರೀ 2 (ಹಿಂ): ಮ.1.30ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಸ್ಕ್ರೀನ್ 3 ಅಫ್ರೇಡ್ (ಇಂ): ಬೆ.11.30ಕ್ಕೆ, ರಾ.10ಕ್ಕೆ, ಕೊಟೇಷನ್ ಗ್ಯಾಂಗ್ ಪಾರ್ಟ್ 1 (ತ): ಮ.1.30ಕ್ಕೆ, ಸರಿಪೋದಾ ಶನಿವಾರಂ (ತೆ): ಸಂ.4ಕ್ಕೆ, ಲಾಫಿಂಗ್ ಬುದ್ಧ (ಕ): ರಾ.7.20ಕ್ಕೆ.

ಸ್ಕ್ರೀನ್ 4 ಕೃಷ್ಣಂ ಪ್ರಣಯ ಸಖಿ (ತ): ಬೆ.10.05ಕ್ಕೆ, ರಾ.7.05ಕ್ಕೆ, ರಾ.10.10ಕ್ಕೆ, ಭೀಮಾ (ಕ): ಮ.1.15ಕ್ಕೆ, ಅಹೋ ವಿಕ್ರಮಾರ್ಕ (ತೆ): ಸಂ.4.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1 ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಸ್ಕ್ರೀನ್ 2 ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.

ಸ್ಕ್ರೀನ್ 3 ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.

ಸ್ಕ್ರೀನ್ 4 ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1 ಕೃಷ್ಣಂ ಪ್ರಣಯ ಸಖಿ (ಕ): ಬೆ.10.30ಕ್ಕೆ, ಪೆಪೆ (ಕ): ಮ.1.35ಕ್ಕೆ, ಲಾಫಿಂಗ್ ಬುದ್ಧ (ಕ): ಸಂ.4.05ಕ್ಕೆ, ವಾರ್ಝಾ ಬಯೋಪಿಕ್ ಆಫ್ ಎ ಬಿಲಿಯನ್ ಬಾಯ್ಸ್ (ಮ): ಸಂ.6.45ಕ್ಕೆ, ಸ್ತ್ರೀ 2 (ಹಿಂ): ರಾ.9.15ಕ್ಕೆ.

ಸ್ಕ್ರೀನ್ 2 ಕೃಷ್ಣಂ ಪ್ರಣಯ ಸಖಿ (ಕ): ಮ.12.30ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ, ಭೀಮಾ (ಕ): ಮ.3.35ಕ್ಕೆ.

ಸ್ಕ್ರೀನ್ 3 ಭೀಮಾ (ಕ): ಮ.12.45ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.3.45ಕ್ಕೆ, ಸ್ತ್ರೀ 2 (ಹಿಂ): ಸಂ.6.45ಕ್ಕೆ, ದೇವಧೂತನ್ (ಮ): ರಾ.9.30ಕ್ಕೆ.

ಸ್ಕ್ರೀನ್ 4 ಪೆಪೆ (ಕ): ಬೆ.10.40ಕ್ಕೆ, ಮ.3.45ಕ್ಕೆ, ಅಹೋ ವಿಕ್ರಮಾರ್ಕ (ತೆ): ಮ.1.05ಕ್ಕೆ, ಸರಿಪೋದಾ ಶನಿವಾರಂ (ತೆ): ಸಂ.6.15ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪ್ಯಾರಾಲಿಂಪಿಕ್ಸ್–2024: ಭಾರತಕ್ಕೆ ಒಂದೇ ದಿನ 4 ಪದಕ

ಶೂಟಿಂಗ್‌ನಲ್ಲಿ ಅವನಿ ಲೇಖರಾಗೆ ಚಿನ್ನ



ಅವನಿ ಲೇಖರಾ



ಮನೀಷ್ ನರ್ವಾಲ್



ಮೋನಾ



ಪ್ರೀತಿಪಾಲ್

ಪ್ಯಾರೀಸ್, ಆ.30– ಪ್ಯಾರೀಸ್ ಪ್ಯಾರಾ ಲಿಂಪಿಕ್ಸ್‌ನಲ್ಲಿ ಭಾರತ ಒಂದೇ ದಿನ 4 ಪದಕಗಳನ್ನು ಗೆಲ್ಲುವ ಮೂಲಕ ಇತಿಹಾಸ ಸೃಷ್ಟಿಸಿದೆ.

ಭಾರತದ ಅವನಿ ಲೇಖರಾ ಅವರು 10 ಮೀ. ಏರ್ ರೈಫಲ್‌ನಲ್ಲಿ ಚಿನ್ನದ ಪದಕ ಪಡೆದಿದ್ದಾರೆ. ಇವರು ಸತತ 2 ಪ್ಯಾರಾಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದ ಮೊದಲ ಕ್ರೀಡಾಪಟು ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. 10 ಮೀ. ಏರ್ ಪಿಸ್ತೂಲ್ ಶೂಟಿಂಗ್ ಸ್ಪರ್ಧೆಯಲ್ಲಿ ಮನೀಷ್ ನರ್ವಾಲ್ ಬೆಳ್ಳಿ ಪದಕ ತಮ್ಮದಾಗಿಸಿಕೊಂಡಿದ್ದಾರೆ. ಒಟ್ಟು 24 ಸುತ್ತುಗಳಲ್ಲಿ 234.9 ಅಂಕಗಳನ್ನು ಕಲೆ ಹಾಕಿದ ಮನೀಷ್, ಬೆಳ್ಳಿ ಪದಕ ಪಡೆದರು. 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಮೋನಾ ಅಗರ್‌ವಾಲ್ 3ನೇ ಸ್ಥಾನ ಗಳಿಸಿ ಕಂಚಿನ ಪದಕ ಪಡೆದರು. ಇನ್ನು 100 ಮೀ. ಓಟದ ಸ್ಪರ್ಧೆಯಲ್ಲಿ ಪ್ರೀತಿಪಾಲ್ ಕಂಚಿನ ಪದಕ ಪಡೆದಿದ್ದಾರೆ. ಮಹಿಳೆಯರ 100 ಮೀ. ಟಿ–35 ಫೈನಲ್‌ನಲ್ಲಿ ಪ್ರೀತಿ 3ನೇ ಸ್ಥಾನ ಪಡೆದು ಕಂಚು ಗೆಲ್ಲುವ ಮೂಲಕ ಪ್ಯಾರಾ ಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಟ್ರ್ಯಾಕ್ಸ್ ಸ್ಪರ್ಧೆಯಲ್ಲಿ ಪದಕ ಗೆದ್ದ ಮೊದಲ ಭಾರತೀಯ ಕ್ರೀಡಾಪಟು ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಇಂದು ಒಂದೇ ದಿನ ಭಾರತೀಯ ಕ್ರೀಡಾಪಟುಗಳು 4 ಪದಕಗಳನ್ನು ಗೆದ್ದು ಇತಿಹಾಸ ಸೃಷ್ಟಿಸಿದರೆ, ನಿನ್ನೆ ನಡೆದ ಆರ್ಚರಿ ರ್‍ಯಾಂಕಿಂಗ್ ಸುತ್ತಿನಲ್ಲಿ 720ಕ್ಕೆ 703 ಅಂಕ ಕಲೆ ಹಾಕಿದ ಶೀಥಲ್ ದೇವಿ ದಾಖಲೆ ಸೃಷ್ಟಿಸಿದರು. ತಮ್ಮ ಚೊಚ್ಚಲ ಪ್ಯಾರಾಲಿಂಪಿಕ್ಸ್ ಆಡುತ್ತಿರುವ ಶೀಥಲ್ ದೇವಿ ಅವರಿಗೆ ಎರಡೂ ಕೈಗಳಿಲ್ಲ. ಆದರೆ ಸಾಧನೆಗೆ ಇದಾವುದೂ ಲೆಕ್ಕಕ್ಕಿಲ್ಲ ಎಂಬಂತೆ ವಿಶ್ವಕ್ಕೆ ತೋರಿಸಿಕೊಟ್ಟಿರುವ ಈ ಛಲಗಾತಿ, ಪ್ಯಾರೀಸ್‌ನಲ್ಲಿ ಭಾರತದ ಕೀರ್ತಿ ಪತಾಕೆ ಹಾರಿಸಿದ್ದಾರೆ.

ಮೈಸೂರಲ್ಲಿ ರಾಜ್ಯಮಟ್ಟದ ದೇಹದಾರ್ಢ್ಯ ಸ್ಪರ್ಧೆ

ಶಾಸಕ ಜಿ.ಟಿ.ದೇವೇಗೌಡರಿಂದ ಚಾಲನೆ



ಜಗನ್ಮೋಹನ ಅರಮನೆಯಲ್ಲಿ ರಾಷ್ಟ್ರೀಯ ಕ್ರೀಡಾ ದಿನಾಚರಣೆ ಅಂಗವಾಗಿ 2ನೇ ವರ್ಷದ ರಾಜ್ಯಮಟ್ಟದ ದೇಹದಾರ್ಢ್ಯ ಸ್ಪರ್ಧೆ ನಡೆಯಿತು.

ಮೈಸೂರು, ಆ.30(ಎಂಕೆ)– ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ರಾಷ್ಟ್ರೀಯ ಕ್ರೀಡಾ ದಿನಾಚರಣೆ ಅಂಗವಾಗಿ 2ನೇ ವರ್ಷದ ರಾಜ್ಯಮಟ್ಟದ ದೇಹದಾರ್ಢ್ಯ ಸ್ಪರ್ಧೆ ನಡೆಯಿತು.

ಜಿ.ಹೆಚ್.ಫಿಟ್ನೆಸ್ ಸಹಯೋಗದೊಂದಿಗೆ ಆಯೋಜಿಸಿದ್ದ ದೇಹದಾರ್ಢ್ಯ ಸ್ಪರ್ಧೆಗೆ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಮಾನಸಿಕ ಆರೋಗ್ಯದ ಜೊತೆಗೆ ದೈಹಿಕ ಆರೋಗ್ಯವೂ ಮುಖ್ಯವಾಗಿದೆ. ದೈಹಿಕ ಆರೋಗ್ಯ ಕಾಪಾಡಿಕೊಳ್ಳಲು ವ್ಯಾಯಾಮ ಮುಖ್ಯವಾಗಿದೆ. ಬಾಡಿ ಬಿಲ್ಡಿಂಗ್ ಮಾಡುವುದು ಕೂಡ ವ್ಯಾಯಾಮವಾಗಿದೆ. ಈ ನಿಟ್ಟಿನಲ್ಲಿ ದೇಹದಾರ್ಢ್ಯ ಸ್ಪರ್ಧೆಗೆ ಇತರೆ ಸ್ಪರ್ಧೆಗಳಿಗೆ ನೀಡುವಂತೆಯೇ ಪ್ರೋತ್ಸಾಹ ನೀಡಬೇಕು ಎಂದರು.

ಬಿಜೆಪಿ ಮುಖಂಡ ಕವೀಶ್‌ಗೌಡ ಮಾತನಾಡಿ, ಸ್ಪರ್ಧೆಯಲ್ಲಿ ಭಾಗವಹಿಸಿರುವ ಎಲ್ಲಾ ಕ್ರೀಡಾಪಟುಗಳಿಗೆ ಅಭಿನಂದನೆಗಳು. ಬಾಡಿ ಬಿಲ್ಡಿಂಗ್ ಸುಲಭದ ಕೆಲಸವಲ್ಲ. ಫಿಟ್ನೆಸ್ ಅತೀ ಮುಖ್ಯ ಹಾಗೂ ಅಗತ್ಯವಾಗಿದೆ. ದೇಹದಾರ್ಢ್ಯ ಪಟುಗಳು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಬೇಕು ಎಂದು ಆಶಿಸಿದರು.

ಗ್ರಾಮೀಣ ಪ್ರತಿಭೆಗಳಿಗೆ ಪ್ರೋತ್ಸಾಹ ಹಾಗೂ ತರಬೇತಿ ನೀಡಬೇಕು. ಸ್ಪರ್ಧಾ ವಾತಾವರಣ ಸೃಷ್ಟಿಯಾಗಬೇಕು. ಈ ನಿಟ್ಟಿನಲ್ಲಿ ಕ್ರೀಡಾ ವೇದಿಕೆಗಳನ್ನು ನಿರ್ಮಿಸುವ ಜವಾಬ್ದಾರಿ ನಮ್ಮೆಲ್ಲರದಾಗಿದೆ. ಈ ನಿಟ್ಟಿನಲ್ಲಿ ಜಿ.ಹೆಚ್. ಫಿಟ್ನೆಸ್‌ನ ಹರೀಶ್ ಶ್ಲಾಘನೀಯ ಕೆಲಸ ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಬಳಿಕ ಕೆಲ ಕಾಲ ಸ್ಪರ್ಧೆ ವೀಕ್ಷಿಸಿದರು. ಸಮಾಜ ಸೇವಕಿ ಶ್ರೀಮತಿ ವಿದ್ಯಾ, ಉದ್ಯಮಿ ವಿಕ್ರಂ, ಕಾಂಗ್ರೆಸ್ ಮುಖಂಡ ರಾಜೀವ್, ಕೌಶಲ್ಯ ತರಬೇತುದಾರ ಗಿರಿಮಂಜು, ಸುರೇಶ್ ಗೋಲ್ಡ್, ಸೋಮಶೇಖರ್ ಆರಾಧ್ಯ, ಕರ್ನಾಟಕ ಹಾಲು ಒಕ್ಕೂಟ ಸಂಘದ ತರಬೇತಿ ಕೇಂದ್ರದ ಉಪ ನಿರ್ದೇಶಕ ಪೂರ್ಣಚಂದ್ರ ತೇಜಸ್ವಿ ಮತ್ತಿತರರಿದ್ದರು.

ನಾಳೆ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಪ್ರತಿಭಾ ಪುರಸ್ಕಾರ

ಮೈಸೂರು, ಆ.30(ಜಿಎ)–ಮೈಸೂರಿನ ಶ್ರೀರಾಂಪುರ ಎರಡನೇ ಹಂತದಲ್ಲಿರುವ ಆದರ್ಶ ಸೇವಾ ಸಂಘದ ವತಿಯಿಂದ ಸೆ.1ರಂದು ಮಧ್ಯಾಹ್ನ 3ಗಂಟೆಗೆ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಪ್ರತಿಭಾ ಪುರಸ್ಕಾರ ಹಾಗೂ ಅಭಿನಂದನಾ ಸಮಾರಂಭ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಅಧ್ಯಕ್ಷ ಜಿ.ಆರ್. ನಾಗರಾಜ ರಾವ್ ಈ ವಿಷಯ ತಿಳಿಸಿ, ವಿಶ್ರಾಂತ ನ್ಯಾಯಮೂರ್ತಿ ಎನ್. ಕುಮಾರ್, ಶಾಸಕ ಟಿ.ಎಸ್.ಶ್ರೀವತ್ಸ ಮಾಜಿ ಸಂಸದ ಪ್ರತಾಪ್‌ಸಿಂಹ, ಸಚಿವ ಆರ್.ವಿ. ದೇಶಪಾಂಡೆ, ಮಾಜಿ ಶಾಸಕ ಎಸ್.ಎ. ರಾಮದಾಸ್ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದವರಿಗೆ ಆದರ್ಶ ಸೇವಾರತ್ನ, ಆದರ್ಶ ಪ್ರತಿಭಾ ರತ್ನ, ಆದರ್ಶ ಯುವ ಪ್ರತಿಭಾ ರತ್ನ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಶೇಷಾದ್ರಿ, ಅರ್ಪಣ ಗಿರೀಶ್, ನಟೇಶ್, ಅನಂತ ನಾರಾಯಣ ಉಪಸ್ಥಿತರಿದ್ದರು.

ರಾಜ್ಯ ಸರ್ಕಾರದ ವಿರುದ್ಧ ಬಿಎಸ್‌ಪಿ ಪ್ರತಿಭಟನೆ



ಮೈಸೂರು, ಆ.30(ಬಿಎಲ್‌ಯು)– ಪರಿಶಿಷ್ಟ ಜಾತಿ ಮತ್ತು ಪಂಗಡದ ಅನುದಾನವನ್ನು ಬೇರೆ ಉದ್ದೇಶಕ್ಕೆ ಬಳಸಿರುವ ರಾಜ್ಯ ಸರ್ಕಾರದ ವಿರುದ್ಧ ಬಹುಜನ ಸಮಾಜ ಪಾರ್ಟಿ ನಗರದಲ್ಲಿ ಇಂದು ಪ್ರತಿಭಟನೆ ನಡೆಸಿತು.

ಗಾಂಧಿನಗರದ ಅಂಬೇಡ್ಕರ್ ಪ್ರತಿಮೆ ಮುಂದೆ ಪ್ರತಿಭಟನೆ ನಡೆಸಿದ ಬಿಎಸ್ ಪಿ ಕಾರ್ಯಕರ್ತರು, ರಾಜ್ಯ ಸರ್ಕಾರದ ದಲಿತ ವಿರೋಧಿ ನೀತಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರದ ಗ್ಯಾರಂಟಿ ಯೋಜನೆಗಳಿಗೆ ಎಸ್‌ಸಿ, ಎಸ್‌ಪಿ, ಟಿಎಸ್‌ಪಿ ಹಣ ಏಕೆ ಬಳಸಿಕೊಳ್ಳುತ್ತಿದ್ದೀರಾ ಎಂದು ಪ್ರಶ್ನಿಸಿದ ಪ್ರತಿಭಟನಾಕಾರರು, ಖಾಸಗಿ ವಲಯದಲ್ಲಿ ರಾಜ್ಯ ಸರ್ಕಾರ ಈ ಕೂಡಲೇ ಮೀಸಲಾತಿ ನೀಡಬೇಕು, ಬ್ಯಾಕ್ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ಒತ್ತಾಯಿಸಿದರು.

ಪಕ್ಷದ ಜಿಲ್ಲಾ ಉಸ್ತುವಾರಿ ಚಂದ್ರಶೇಖರ್, ಬಸವಣ್ಣ, ನಂಜುಂಡ ಸೇರಿದಂತೆ ಇತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಮನುಷ್ಯನ ಮೇಲೆ ದುಷ್ಪರಿಣಾಮ ಬೀರುವ ಕುಲಾಂತರಿ ಆಹಾರ ಬೆಳೆ ನಿಷೇಧಿಸಿ

ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಆಗ್ರಹ



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಶುಕ್ರವಾರ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಮೈಸೂರು, ಆ.30(ಬಿಎಲ್‌ಯು)– ಮನುಷ್ಯ ಹಾಗೂ ಪರಿಸರದ ಮೇಲೆ ಅಡ್ಡ ಪರಿಣಾಮ ಬೀರುವ ಕುಲಾಂತರಿ ಆಹಾರ ಬೆಳೆಗಳನ್ನು ಕೂಡಲೇ ನಿಷೇಧಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಸರ್ಕಾರವನ್ನು ಆಗ್ರಹಿಸಿದ್ದಾರೆ.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ವಿಧಾನಸಭಾ ಅಧಿವೇಶನದಲ್ಲಿ ಕುಲಾಂತರಿ ಬೆಳೆ ನಿಷೇಧ'ದ' ಬಗ್ಗೆ ನಿರ್ಣಯ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಕುಲಾಂತರಿ ಬಿ.ಟಿ.ಹತ್ತಿ ಬೆಳೆಯುತ್ತಿರುವ ರೈತರು ಈಗಾಗಲೇ ಹಲವು ಸಂಕಷ್ಟ ಎದುರಿಸುತ್ತಿದ್ದಾರೆ. 28 ವರ್ಷದ ಹಿಂದೆ ಪರಿಚಯವಾದ ಕುಲಾಂತರಿ ತಳಿಯನ್ನು ವಿಶ್ವದ 31 ರಾಷ್ಟ್ರಗಳು ನಿಷೇಧಿಸಿವೆ. ಇನ್ನು ಹಲವು ರಾಷ್ಟ್ರಗಳು ನಿಷೇಧಿಸಲು ಮುಂದಾಗಿವೆ. ಈ ಹಿನ್ನೆಲೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ಕೂಡ ಈ ನಿಟ್ಟಿನಲ್ಲಿ ಕ್ರಮಕ್ಕೆ ಮುಂದಾಗಬೇಕು ಎಂದು ಮನವಿ ಮಾಡಿದರು.

ಮಾನ್ಸಾಂಟೊ ಕಂಪನಿ ಬಿ.ಟಿ.ಹತ್ತಿ ಪರಿಚಯಿಸಿದಾಗ ಕಾಂಡ ಕೊರೆಯುವ ಕೀಟಭಾದೆ ಇರುವುದಿಲ್ಲ ಎಂದು ಖಚಿತವಾಗಿ ಹೇಳಿತ್ತು. ಆದರೆ ಈಗ ಬಿ.ಟಿ.ಹತ್ತಿ ಬೆಳೆಯಲು ಹೆಚ್ಚು ಕ್ರಿಮಿನಾಶಕ ಹಾಗೂ ರಸಗೊಬ್ಬರ ಬಳಸಬೇಕಾಗಿದೆ. ಸರ್ಕಾರಿ ಕೃಷಿ ವಿಜ್ಞಾನಿಗಳು ಈ ಕಂಪನಿ ಜೊತೆ ಷಾಮೀಲಾಗಿ ಬಿ.ಟಿ.ಹತ್ತಿ ಪ್ರೋತ್ಸಾಹಿಸುತ್ತಿದ್ದಾರೆ ಎಂದು ಬಡಗಲಪುರ ನಾಗೇಂದ್ರ ಆರೋಪಿಸಿದರು.

ಈ ನಡುವೆ ಬಿ.ಟಿ. ಸಾಸಿವೆಯನ್ನು ರೈತರ ಹೊಲದಲ್ಲಿ ಇಳಿಸಲು ಬಹುರಾಷ್ಟ್ರೀಯ ಕಂಪನಿಗಳು ಪ್ರಯತ್ನ ಮಾಡುತ್ತಿದೆ. ಆದರೆ ರೈತ ಸಂಘಟನೆಗಳು ಇದನ್ನು ವಿರೋಧಿಸಿ ಸುಪ್ರೀಂಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿತ್ತು. ಈ ಬಗ್ಗೆ ವಿಚಾರಣೆ ಮಾಡಿದ ಸುಪ್ರೀಂಕೋರ್ಟ್, ರೈತ ಸಂಘಟನೆ, ಕೃಷಿ ವಿಜ್ಞಾನಿಗಳು ಹಾಗೂ ಕಂಪನಿಯೊಂದಿಗೆ ಸಮಾಲೋಚನೆ ನಡೆಸಿ ಒಂದು ರಾಷ್ಟ್ರೀಯ ನೀತಿ ರೂಪಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿದೆ ಎಂದು ತಿಳಿಸಿದರು.

ಮನುಷ್ಯನ ಆರೋಗ್ಯ ಹಾಗೂ ಪರಿಸರದ ಮೇಲೆ ದುಷ್ಪರಿಣಾಮ ಬೀರುವ ಬಿ.ಟಿ. ಕುಲಾಂತರಿ ಆಹಾರವನ್ನು ಈ ಕೂಡಲೇ ನಿಷೇಧಿಸಬೇಕು ಎಂದು ಆಗ್ರಹಿಸಿದರು.

ರೈತರ ವ್ಯವಸಾಯ ಭೂಮಿಯನ್ನು ಖರಾಬು ಎಂದು ನಮೂದಿಸಿರುವುದನ್ನು ರದ್ದು ಮಾಡುವಂತೆ ಈ ವೇಳೆ ಒತ್ತಾಯಿಸಿದ ಬಡಗಲಪುರ ನಾಗೇಂದ್ರ, ಗಣಿಗಾರಿಕೆಗಾಗಿ ಅರಣ್ಯ ನಾಶ ಮಾಡಿ, ಹೊಸದಾಗಿ ಅರಣ್ಯ ಬೆಳೆಸಲು ರೈತರ ಭೂಮಿಯನ್ನು ಕಿತ್ತುಕೊಳ್ಳುವುದು ಯಾವ ನ್ಯಾಯ ಎಂದು ಪ್ರಶ್ನಿಸಿದ್ದಾರೆ.

ಕೊಡಗು ಜಿಲ್ಲೆಯ ಸೋಮವಾರ ಪೇಟೆ ತಾಲೂಕಿನಲ್ಲಿ ಸಾವಿರಾರು ಎಕರೆ ವ್ಯವಸಾಯಕ್ಕೆ ಯೋಗ್ಯವಾದ ಜಮೀನನ್ನು ಸಿ ಮತ್ತು ಡಿ ಭೂಮಿ ಎಂದು ತೀರ್ಮಾನಿಸಿ ರೈತರನ್ನು ಒಕ್ಕಲೆಬ್ಬಿಸಲು ಸರ್ಕಾರ ಪ್ರಯತ್ನ ಮಾಡುತ್ತಿದೆ ಎಂದು ಬಡಗಲಪುರ ನಾಗೇಂದ್ರ ಆರೋಪಿಸಿದರು. ರೈತ ಮುಖಂಡ ಪ್ರಸನ್ನ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಇಂದು ಡಿಜಿಟಿಎಂ ಶಾಲೆಯಲ್ಲಿ ಅರಿವು ಕಾರ್ಯಕ್ರಮ

ಮೈಸೂರು, ಆ.30(ಜಿಎ)–ಚಾಮುಂಡಿಪುರಂನಲ್ಲಿರುವ ಡಿಜಿಟಿಎಂ ಆಂಗ್ಲ ಮಾಧ್ಯಮ ಶಾಲೆ ವತಿಯಿಂದ ಆ.31ರಂದು ಬೆಳಗ್ಗೆ 10.30ಕ್ಕೆ ಶಾಲೆಯ ಆವರಣದಲ್ಲಿ ಮಕ್ಕಳ ದೈಹಿಕ ಬೆಳವಣಿಗೆಯಲ್ಲಿ ಮತ್ತು ಬೌದ್ಧಿಕ ವಿಕಾಸದಲ್ಲಿ ಪೋಷಕರ ಪಾತ್ರ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಪ್ರಾಂಶುಪಾಲ ಎಚ್.ಆರ್. ಪಾಂಡುರಂಗಲೀ ವಿಷಯ ತಿಳಿಸಿ, ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಎನ್.ನರೇಂದ್ರ ಬಾಬು ಅಧ್ಯಕ್ಷತೆ ವಹಿಸುವರು, ಎಂ.ವಿ.ತ್ಯಾಗರಾಜ್ ಪ್ರಾಸ್ತಾವಿಕ ನುಡಿ ಆಡುವರು, ಡಾ.ಎ.ಎಸ್.ಮಧುರ ಉದ್ಘಾಟಿಸುವರು, ಖ್ಯಾತ ವೈದ್ಯ ಡಾ.ಟಿ.ಎಚ್. ಆಂಜನಪ್ಪ ಉಪನ್ಯಾಸ ನೀಡುವರು. ಶರವಣ, ಶಿವಕುಮಾರ್, ಶಿವಪ್ರಕಾಶ್ ಆಗಮಿಸಲಿದ್ದಾರೆ. ಎಲ್ಲಾ ಪೋಷಕರಿಗೂ ಉಚಿತ ಪ್ರವೇಶವಿದೆ ಎಂದು ತಿಳಿಸಿದರು.


ದೇಶ – ವಿದೇಶ

ಮಹಿಳೆ ಆಫೀಸ್ ಚೇರ್‌ನಲ್ಲೇ ಜೀವ ಬಿಟ್ಟು 4 ದಿನವಾದರೂ ಯಾರಿಗೂ ಅರಿವೇ ಇಲ್ಲ!

ಅರಿಜೋನಾ(ಅಮೆರಿಕ): ಅಮೆರಿಕದಲ್ಲಿ ಮಹಿಳೆಯೊಬ್ಬರು ತಮ್ಮ ಕಚೇರಿಯ ಚೇರ್‌ನಲ್ಲೇ ಸತ್ತು ಬಿದ್ದು ನಾಲ್ಕು ದಿನವಾದರೂ ಯಾರೂ ಗಮನಿಸಿಯೇ ಇಲ್ಲ.

ಅಮೆರಿಕದ ಅರಿಜೋನಾ ರಾಜ್ಯದ ತಾಂಪೆ ನಗರದಲ್ಲಿರುವ ಅರಿಜೋನಾ ವೆಲ್ಸ್ ಫರ್ಗೋ ಎಂಬ ಸಂಸ್ಥೆಯ ಕಚೇರಿ ಉದ್ಯೋಗಿ 60 ವರ್ಷದ ಡೆನಿಸ್ ಪ್ರುದೊಮ್ಮೆ ಎಂಬುವರು ಆಗಸ್ಟ್ 16ರಂದು ಬೆಳಗ್ಗೆ 7 ಗಂಟೆಗೆ ಕಚೇರಿಗೆ ಆಗಮಿಸಿ ಲಾಗ್ ಇನ್ ಮಾಡಿದ್ದರು. ಕಚೇರಿಯ ಭದ್ರತಾ ಸಿಬ್ಬಂದಿ ಸುತ್ತಾಟ ನಡೆಸುವಾಗ ಆಕೆಯನ್ನು ಗಮನಿಸಿ ಎಚ್ಚರಿಸಲು ಹೋದಾಗ ಮೃತಪಟ್ಟಿದ್ದು ಬೆಳಕಿಗೆ ಬಂದಿದೆ. ಸ್ಥಳಕ್ಕೆ ಧಾವಿಸಿದ ತಾಂಪೆ ನಗರದ ಪೊಲೀಸರು ಶವ ಇದ್ದ ಸ್ಥಳ ಹಾಗೂ ಅಕ್ಕಪಕ್ಕದ ಸನ್ನಿವೇಶಗಳನ್ನು ಗಮನಿಸಿದರು. ಮೇಲ್ನೋಟಕ್ಕೆ ಈಕೆ ಯಾರಿಂದಲೋ ಹತ್ಯೆಗೀಡಾಗಿರುವ ಸಾಧ್ಯತೆ ಕಡಿಮೆ ಎಂದಿರುವ ಪೊಲೀಸರು, ಶವವನ್ನು ಮರಣೋತ್ತರ ಪರೀಕ್ಷೆಗೆ ರವಾನೆ ಮಾಡಿದ್ದು, ಮಹಿಳೆಯ ಸಾವಿಗೆ ನಿಖರ ಕಾರಣ ಪತ್ತೆಗೆ ಮುಂದಾಗಿದ್ದಾರೆ.

ಕೆನಡಾದಲ್ಲಿ ಭಾರತೀಯ ವಿದ್ಯಾರ್ಥಿಗಳಿಗೆ ಗಡಿಪಾರಿನ ಭೀತಿ



ಟೊರಾಂಟೋ: ಕೆನಡಾದಲ್ಲಿ ಈಗ ಸುಮಾರು 70 ಸಾವಿರ ವಿದೇಶಿ ವಿದ್ಯಾರ್ಥಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇದರಲ್ಲಿ ಭಾರತೀಯರೇ ಬಹು ಸಂಖ್ಯಾತರು. ಇವರ ಸಂಕಷ್ಟಕ್ಕೆ ಕಾರಣ, ಕೆನಡಾ ಸರ್ಕಾರದ ವಲಸೆ ನೀತಿ. ಹೀಗಾಗಿ ಸರ್ಕಾರ ತನ್ನ ವಲಸೆ ನೀತಿ ಬದಲಿಸಬೇಕು ಎಂದು ಆಗ್ರಹಿಸುತ್ತಿರುವ ವಿದೇಶಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿ ಸರ್ಕಾರದ ಗಮನ ಸೆಳೆದಿದ್ದಾರೆ.

ಈ ಪ್ರತಿಭಟನೆಗಳಲ್ಲಿ ಕೆನಡಾ ದೇಶದಲ್ಲಿ ವ್ಯಾಸಂಗ ಮಾಡುತ್ತಿರುವ ವಿದೇಶಿ ವಿದ್ಯಾರ್ಥಿಗಳು ಮಾತ್ರವಲ್ಲ ಕುಶಲಕರ್ಮಿಗಳು ಹಾಗೂ ವೃತ್ತಿಪರ ಕೌಶಲ್ಯ ಹೊಂದಿರುವ ಉದ್ಯೋಗಿಗಳೂ ಇದ್ದಾರೆ. ಒಂದು ವೇಳೆ ಸರ್ಕಾರ ತನ್ನ ವಲಸೆ ನೀತಿ ಬದಲಿಸದಿದ್ದರೆ ಸಾವಿರಾರು ಮಂದಿ ಕೆನಡಾದಿಂದ ಗಡಿಪಾರಾಗಿ ತಮ್ಮ ತವರು ದೇಶಕ್ಕೆ ವಾಪಸ್ ಹೋಗಬೇಕಾದ ಅನಿವಾರ್ಯತೆಗೆ ಸಿಲುಕಿದ್ದಾರೆ.

ಕೆನಡಾದಲ್ಲಿ ಪೌರತ್ವ ಪಡೆಯುವುದು ಸುಲಭ ಎಂಬ ಕಾರಣಕ್ಕೆ ಇಲ್ಲಿನ ಸಾಕಷ್ಟು ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಭಾರತೀಯರು ನೋಂದಣಿ ಆಗಿದ್ದಾರೆ. ಆದರೆ, ಇವರ ಎಲ್ಲ ನಿರೀಕ್ಷೆಗಳೂ ಇದೀಗ ಸರ್ಕಾರದ ಪೌರತ್ವ ನೀತಿ ಬದಲಾವಣೆಯಿಂದ ಸಂಕಷ್ಟಕ್ಕೆ ಸಿಲುಕಿದೆ.


ಆಧಾರ್ ಕಾರ್ಡ್ ತೋರಿಸಿದರೆ ಮಾತ್ರ ತಿಮ್ಮಪ್ಪನ ಲಡ್ಡು



ತಿರುಪತಿ: ಮಧ್ಯವರ್ತಿಗಳ ಹಾವಳಿಗೆ ಕಡಿವಾಣ ಹಾಕುವ ಉದ್ದೇಶದಿಂದ ತಿರುಮಲ ತಿರುಪತಿ ದೇವಸ್ಥಾನ (ಟಿಟಿಡಿ) ಟೋಕನ್ ರಹಿತ ಭಕ್ತರಿಗೆ ಲಡ್ಡುಗಳ ಮಾರಾಟಕ್ಕೆ ಆಧಾರ್ ದೃಢೀಕರಣವನ್ನು ಪರಿಚಯಿಸಿದೆ. ಲಡ್ಡು ಮಾರಾಟವನ್ನು ಹೆಚ್ಚು ಪಾರದರ್ಶಕಗೊಳಿಸುವ ಉದ್ದೇಶದಿಂದ ಈ ಹೊಸ ವ್ಯವಸ್ಥೆ ಗುರುವಾರದಿಂದ ಜಾರಿಗೆ ಬಂದಿದೆ.

ಈ ಕುರಿತು ಮಾತನಾಡಿದ ಟಿಟಿಡಿ ಹೆಚ್ಚುವರಿ ಕಾರ್ಯನಿರ್ವಾಹಕ ಅಧಿಕಾರಿ ಸಿ.ವೆಂಕಯ್ಯ ಚೌಧರಿ, ಸಾಮಾನ್ಯ ಭಕ್ತರ ಹಿತದೃಷ್ಟಿಯಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಕೆಲವು ಮಧ್ಯವರ್ತಿಗಳು ವ್ಯವಸ್ಥೆಯನ್ನು ದುರ್ಬಳಕೆ ಮಾಡಿಕೊಂಡು ಕಾಳಸಂತೆಯಲ್ಲಿ ಲಡ್ಡುಗಳನ್ನು ಮಾರಾಟ ಮಾಡುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಇದನ್ನು ನಿಲ್ಲಿಸಲು, ದರ್ಶನ ಟೋಕನ್ ಇಲ್ಲದ ಭಕ್ತರು ಎರಡು ಲಡ್ಡುಗಳನ್ನು ಪಡೆಯಲು ಲಡ್ಡು ಕೌಂಟರ್‌ಗಳಲ್ಲಿ ತಮ್ಮ ಆಧಾರ್ ಕಾರ್ಡ್ ನೋಂದಾಯಿಸಿಕೊಳ್ಳಬೇಕೆಂದು ತಿಳಿಸಿದ್ದಾರೆ. ದರ್ಶನಕ್ಕೆ ಟಿಕೆಟ್ ಕೊಳ್ಳದೇ 48 – 62ನೇ ಕೌಂಟರ್‌ನಿಂದ ಬರುವ ಭಕ್ತರಿಗೆ ಇದು ಅನ್ವಯಿಸಲಿದೆ ಎಂದ ಅವರು, ತಮ್ಮ ಆಧಾರ್ ದೃಢೀಕರಣ ಮಾಡಿ, ಒಬ್ಬ ಭಕ್ತರು ಎರಡು ಲಡ್ಡುವನ್ನು ಕೊಳ್ಳಬಹುದಾಗಿದೆ ಎಂದು ತಿಳಿಸಿದರು.

ಉತ್ತರಾಖಂಡದಲ್ಲಿ ಹಠಾತ್ ಪ್ರವಾಹ: ಫ್ಲವರ್ಸ್ ವ್ಯಾಲಿಯಲ್ಲಿ ಸಿಲುಕಿದ 189 ಪ್ರವಾಸಿಗರ ರಕ್ಷಣೆ



ಡೆಹ್ರಾಡೂನ್: ಗುರುವಾರ ಮಧ್ಯಾಹ್ನ ಹಠಾತ್ ಸುರಿದ ಮಳೆಯಿಂದಾಗಿ ವ್ಯಾಲಿ ಆಫ್ ಫ್ಲವರ್ಸ್ ಚಾರಣ ಮಾರ್ಗದಲ್ಲಿ ಹಠಾತ್ ಪ್ರವಾಹ ಉಂಟಾಗಿದ್ದರಿಂದ 189 ಪ್ರವಾಸಿಗರು ಸಿಲುಕಿಕೊಂಡಿದ್ದರು.

ಚಮೋಲಿ ಜಿಲ್ಲೆಯ ಫ್ಲವರ್ಸ್ ವ್ಯಾಲಿಯಲ್ಲಿ ಹೊಳೆಯ ಮೇಲಿನ ಕಾಂಕ್ರೀಟ್ ಸೇತುವೆ ಕೊಚ್ಚಿಹೋಯಿತು. ಇದರಿಂದ 189 ಪ್ರವಾಸಿಗರು ಸಿಕ್ಕಿಹಾಕಿಕೊಂಡರು. ಸೇತುವೆ ಕುಸಿತದಿಂದಾಗಿ ಹೆಚ್ಚಿನ ಸಂಖ್ಯೆಯ ಪ್ರವಾಸಿಗರು ಫ್ಲವರ್ಸ್ ವ್ಯಾಲಿ ಟ್ರೆಕ್ಕಿಂಗ್ ದಾರಿಯಲ್ಲಿ ಸಿಲುಕಿಕೊಂಡಿದ್ದಾರೆ ಎಂದು ನಮಗೆ ಮಧ್ಯಾಹ್ನ ಮಾಹಿತಿ ಬಂದಿತು. ರಕ್ಷಣಾ ಕಾರ್ಯಾಚರಣೆ ನಡೆಸಲಾಯಿತು. ತಕ್ಷಣ ಸ್ಥಳೀಯ ಪೊಲೀಸರು ಮತ್ತು ಅರಣ್ಯ ಇಲಾಖೆ ಸಿಬ್ಬಂದಿಗಳ ನೆರವಿನಿಂದ ಕಾರ್ಯಾಚರಣೆ ಆರಂಭಿಸಲಾಗಿದ್ದು, ಕೆಲವೇ ಗಂಟೆಗಳಲ್ಲಿ 189 ಪ್ರವಾಸಿಗರನ್ನು ಸುರಕ್ಷಿತವಾಗಿ ರಕ್ಷಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಮಾಧ್ಯಮಕ್ಕೆ ತಿಳಿಸಿದ್ದಾರೆ.

ಉತ್ತರಾಖಂಡದ ಸುಂದರವಾದ ಚಮೋಲಿ ಜಿಲ್ಲೆಯಲ್ಲಿ ನೆಲೆಗೊಂಡಿರುವ ಫ್ಲವರ್ಸ್ ವ್ಯಾಲಿ ಟ್ರೆಕ್ಕಿಂಗ್‌ಗೆ ಉತ್ತಮ ಸ್ಥಳವಾಗಿದ್ದು, ಪ್ರವಾಸಿಗರನ್ನು ಮೋಡಿ ಮಾಡುವ ತಾಣವಾಗಿದೆ.

ಓಮಾನ್‌ನಲ್ಲಿ ಕಾರು ಅಪಘಾತ: ಬೆಳಗಾವಿಯ ನಾಲ್ವರು ಸಜೀವ ದಹನ



ಬೆಳಗಾವಿ, ಆ.30– ಓಮಾನ್ ದೇಶದಲ್ಲಿ ಸಂಭವಿಸಿದ ಭೀಕರ ಕಾರು ಅಪಘಾತದಲ್ಲಿ ಗೋಕಾಕ್ ಮೂಲದ ನಾಲ್ವರು ಸಜೀವ ದಹನವಾಗಿರುವ ಘಟನೆ ನಡೆದಿದೆ. ಬೆಳಗಾವಿ ಜಿಲ್ಲೆಯ ಗೋಕಾಕ್ ನಗರದ ಪವನ್ ಕುಮಾರ್ ತಹಶೀಲ್ದಾರ್, ಪೂಜಾ ತಹಶಿಲ್ದಾರ್, ವಿಜಯಾ ತಹಶಿಲ್ದಾರ್, ಅದಿಶೇಷ ಬಸವರಾಜ್ ಮೃತ ದುರ್ದೈವಿಗಳು.

ಸೋಮವಾರ ರಾತ್ರಿ 10 ಗಂಟೆ ಸುಮಾರಿಗೆ ಅಪಘಾತ ಸಂಭವಿಸಿದೆ. ಕುಟುಂಬದವರು ಪ್ರಯಾಣಿಸುತ್ತಿದ್ದ ಕಾರು ಮತ್ತು ಟ್ರಕ್ ಪರಸ್ಪರ ಡಿಕ್ಕಿಯಾಗಿ ಬೆಂಕಿ ಹೊತ್ತಿಕೊಂಡು ಈ ದುರ್ಘಟನೆ ನಡೆದಿದೆ. ನಿಸ್ವಾದಲ್ಲಿ ಆದಿಶೇಷ ಕೆಲಸ ಮಾಡುತ್ತಿದ್ದರು. ಸಂಬಂಧಿಕರ ಜೊತೆಗೆ ಸಲಾಲಾದಿಂದ ಮಸ್ಕತ್‌ಗೆ ತೆರಳುತ್ತಿದ್ದಾಗ ಹೈಮಾದಿಂದ 50 ಕಿಲೋಮೀಟರ್ ದೂರದಲ್ಲಿ ಅಪಘಾತ ಸಂಬಂಧಿಸಿದೆ. ಸಂಬಂಧಿಕರು ವಿಸಿಟಿಂಗ್ ವೀಸಾದಲ್ಲಿ ಓಮಾನ್‌ಗೆ ಭೇಟಿ ನೀಡಿದ್ದರು ಎಂದು ತಿಳಿದುಬಂದಿದೆ. ಸದ್ಯ ಹೈಮಾ ಆಸ್ಪತ್ರೆಯ ಶವಾಗಾರದಲ್ಲಿ ಶವ ಇರಿಸಲಾಗಿದೆ. ಮೃತ ದೇಹಗಳನ್ನು ಭಾರತಕ್ಕೆ ತರಲು ವಿದೇಶಾಂಗ ಇಲಾಖೆಗೆ ರಾಜ್ಯಸಭಾ ಸದಸ್ಯ ಈರಣ್ಣಾ ಕಡಾಡಿ ಮನವಿ ಮಾಡಿದ್ದಾರೆ.


ಸ್ನೇಹಜೀವಿ, ಚಾಮರಾಜನಗರದ ಲೋಕಸಭಾ ಕ್ಷೇತ್ರದ
ಸಂಸದರಾದ
ಶ್ರೀ ಸುನೀಲ್ ಬೋಸ್
ಅವರಿಗೆ
42 ನೇ ವರ್ಷದ ಹುಟ್ಟುಹಬ್ಬದ
ಶುಭಾಶಯಗಳು
ದೇವರು ಇವರಿಗೆ ಇನ್ನೂ ಹೆಚ್ಚಿನ ಅಧಿಕಾರ ಸ್ಥಾನ ದೊರಕಿಸಿ
ಕೊಡಲಿ ಹಾಗೂ ಅವರಿಗೆ ಆರೋಗ್ಯ ಭಾಗ್ಯ ಕರುಣಿಸಲಿ ಎಂದು
ಪ್ರಾರ್ಥಿಸುತ್ತೇವೆ.
ಟಿ.ಎಸ್. ಚೇತನ್
ಎ.ಎನ್. ಸ್ವಾಮಿ
ಅಧ್ಯಕ್ಷರು. ವಿಶ್ವಕರ್ಮ, ವಿದ್ಯಾವರ್ಧಕ ಸಂಘ,
ಮೈಸೂರು ಹಾಗೂ ಕೆ.ಪಿ.ಸಿ.ಸಿ ಕಾರ್ಯದರ್ಶಿ ಹಿಂದುಳಿದ
ವರ್ಗ ವಿಭಾಗ, ಮೈಸೂರು,
ಬನ್ನೂರು, ಚಾಮನಹಳ್ಳಿ


ಚಾಮರಾಜನಗರ
ಲೋಕಸಭಾ ಸದಸ್ಯರಾದ
ಶ್ರೀ ಸುನೀಲ್ ಬೋಸ್‌ರವರಿಗೆ
ಜನ್ಮದಿನದ
ಸಂಭ್ರಮ
ಶುಭಕೋರುವವರು:- ಮಧುಕುಮಾರ್
ಗುತ್ತಿಗೆದಾರರು, ಕಗ್ಗಲೀಪುರ